ಶ್ರೀ ನಾಗಪ್ಪ ನೀಲವಾಣಿ ಇವರು
ಸಂಗ್ರಹಿಸಿದ ಪದಗಳು

श्री नागप्प नीलवाणि यांनी
संग्रह केलेली पदे

ಸಂಪಾದಕ

ಬಿ. ಆರ್. ಕುಲಕರ್ಣಿ

2003

COMPLIMENTARY COPY
— साधक
10/7/03
K-11112

ಶ್ರೀ ನಾಗಪ್ಪ ನೀಲವಾಣಿ ಇವರು ಸಂಗ್ರಹಿಸಿದ ಪದಗಳು

श्री नागप्प नीलवाणि यांनी संग्रह केलेली पदे

ಸಂಪಾದಕ

ಬಿ. ಆರ್. ಕುಲಕರ್ಣಿ

2003

ಮೊದಲನೆಯ ಆವೃತ್ತಿ - 2003

ಪ್ರಕಾಶಕ
ಬಿ. ಆರ್. ಕುಲಕರ್ಣಿ
ಎ - 4 - 2 ಪೋಸ್ಟಲ ಕಾಲನಿ
ಹುಟಗಿ ರೋಡ,
ಸೋಲಾಪೂರ - 413 003

© ಪ್ರಕಾಶಕ - 2003

ಮುದ್ರಕ
ಸಿದ್ಧೇಶ ಆಫಸೇಟ
64 ಅ, ಗುರುವಾರ ಪೇಠ,
ಸೋಲಾಪೂರ - 413 002

ಪುರಸ್ಕಾರ

ನನ್ನ ಪೂಜ್ಯತಂದೆ, ಶ್ರೀ ನಾಗಪ್ಪಣ್ಣ ಭೀಮಣ್ಣ ನೀಲವಾಣ ಇವರು ನಿಂಬರಗಿ ಸಂಪ್ರದಾಯದ ಆಧಾರಸ್ತಂಭಗಳಂತೆ ಇದ್ದರು. ತಮ್ಮ ಸದ್ಗುರುಗಳಾದ ಶ್ರೀ ಭಾವೂ ಸಾಹೇಬ ಮಹಾರಾಜ ಉಮದಿ ಇವರ ಪಾರಮಾರ್ಥಿಕ ಪ್ರವಾಸಗಳಲ್ಲಿ ಭಾಗ ವಹಿಸಿ ದಾಸಬೋಧದ ವಾಚನ, ತ್ರಿಕಾಲ ಭಜನ ಆದರಂತೆ ಸಂಪ್ರದಾಯದಲ್ಲಿ ಆಚರಿಸಲ್ಪಡುವ ಸಪ್ತಾಹ ಕಾರ್ಯಕ್ರಮ ಇವೆಲ್ಲಗಳನ್ನು ಒಳ್ಳೇ ವಿಜ್ರಂಭಣೆಯಿಂದ ನೆರವೇರಿಸುತ್ತಿದ್ದರು. ಪಾರಮಾರ್ಥಿಕ ಗೀತಗಳನ್ನು ಅವರು ಹಾಡಹತ್ತಿದಾಗ ಶ್ರೋತೃ ವೃಂದವು, ಹರ್ಷ ಪುಲಕಿತವಾಗುತ್ತಿತ್ತು. ಕನ್ನಡ, ಮರಾಠಿ, ಹಿಂದಿ ಭಕ್ತಿಗೀತಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ನಾಗಪ್ಪನವರು ಅನೇಕ ಕನ್ನಡ, ಮರಾಠಿ, ಹಿಂದಿ ಪದಗಳ ಸಂಗ್ರಹ ಮಾಡಿದ್ದರು. ಈ ಸಂಗ್ರಹವನ್ನು ಗುರುದೇವ ರಾ. ದ. ರಾನಡೆಯ ವರು ಮೇಲಿಂದ ಮೇಲೆ ತರಿಸಿಕೊಳ್ಳುತ್ತಿದ್ದರು. ಹಾಗೂ ಎಷ್ಟೋ ಪದಗಳನ್ನು ಬರೆಯಿಸಿ ಇಡುತ್ತಿದ್ದರು. ಈ ಹಸ್ತ ಲಿಖಿತವು ಈಗ ಮುದ್ರಣವಾಗುತ್ತಿದೆ ಇದು ಅತ್ಯಂತ ಸಂತೋ ಷದ ವಿಷಯ. ಈ ಆಧ್ಯಾತ್ಮಿಕ ಸಂಪತ್ತು ಪರಮಾರ್ಥ ಮಾರ್ಗದಲ್ಲಿಯ ಕೈ ದೀವಿಗೆಯಾಗಲಿ ಎಂದು ನನ್ನ ಭಗವಂತನಲ್ಲಿ ಪ್ರಾರ್ಥನೆ.

ದೇವರ ನಿಂಬರಗಿ
ದತ್ತ ಜಯಂತಿ — ಕಾಡಸಿದ್ದಪ್ಪಾ ನಾಗಪ್ಪಾ ನೀಲವಾಣ
19-12-2002

ಶುಭೇಚ್ಛೆ

ನನ್ನ ಆಜ್ಜರಾದ ಶ್ರೀ ನಾಗಪ್ಪಣ್ಣ ನೀಲವಾಣ ಇವರ ಪದ ಸಂಗ್ರಹದ ಹಸ್ತ ಲಿಖಿತವು ಪುಸ್ತಕ ರೂಪದಿಂದ ಹೊರ ಬೀಳುತ್ತದೆ, ಇದು ಅತ್ಯಂತ ಆನಂದದ ಸಂಗತಿ. ಈ ಪವಿತ್ರವಾದ ಕಾರ್ಯವನ್ನು ಗುರು ಬಂಧುಭಗಿನಿಯವರು ಕೈಕೊಂಡಿದ್ದಾರೆ. ಅವರ ಪ್ರಯತ್ನವು ಪರಮೇಶ್ವರನ ಕೃಪೆಯಿಂದ ಸಫಲವಾಗಲಿ ಎಂದು ಅವನ ಅಡಿ ದಾವರೆಗಳಲ್ಲಿ ಪ್ರಾರ್ಥಿಸುವೆ.

ದೇವರ ನಿಂಬರಗಿ
ದತ್ತ ಜಯಂತಿ — ಮಲ್ಲಿಕಾರ್ಜುನ ಗುರುಸಿದ್ದಪ್ಪ ನೀಲವಾಣ
19-12-2002

ಅನುಕ್ರಮಣಿಕೆ

ನಿವೇದನೆ - ಕನ್ನಡ ಪದಗಳು	5
निवेदन - मराठी व हिंदी पदे	12
ಕನ್ನಡ ಪದಗಳು	15
मराठी व हिंदी पदे	101
ಕವಿ ಸೂಚಿ - ಕನ್ನಡ ಪದಗಳು	128
कवींची सूची - मराठी व हिंदी	133



ಶ್ರೀ. ನಾಗಪ್ಪನವರ ಹಸಾಕ್ಷರ

श्री. नागप्पांचे हस्ताक्षर

ನಿವೇದನೆ

ನಾಗಪ್ಪಣ್ಣ ನೀಲವಾಣಿಯವರು ಆಧುನಿಕ ಸಂತಶ್ರೇಷ್ಠರಾದ ನಿಂಬರಗಿ ಮಹಾರಾಜರ ಮೊಮ್ಮಕ್ಕಳು. ಪರಮಾರ್ಥವು ಅವರಿಗೆ ವಂಶ ಪರಂಪರೆಯಿಂದ ಬಂದ ಸಂಪತ್ತು. ನಿಂಬರಗಿ ಮಹಾರಾಜರ ಪ್ರಮುಖ ಶಿಷ್ಯರಾದ ಭಾವೂಸಾಹೇಬ ಮಹಾರಾಜ ಉಮದಿ ಇವರಿಂದ ನಾಗಪ್ಪನವರಿಗೆ ಚಿಕ್ಕಂದಿನಲ್ಲಿಯೇ ನಾಮಾನುಗ್ರಹ ವಾಗಿತ್ತು. ಭಾವೂಸಾಹೇಬ ಮಹಾರಾಜರು ಭಕ್ತಿ ಪ್ರಸಾರಕ್ಕಾಗಿ ಊರಿಂದ ಊರಿಗೆ ಹೋಗುತ್ತಿದ್ದರು. ಇಂಥ ಪಾರಮಾರ್ಥಿಕ ಯಾತ್ರೆಯಲ್ಲಿ ಮಹಾರಾಜರ ಜೊತೆಗೆ ನಾಗಪ್ಪನವರೂ ಇರುತ್ತಿದ್ದರು. ಹಾಗೂ ಮಹಾರಾಜರು ನಡೆಸುತ್ತಿದ್ದ ಸಪ್ತಾಹದ ಕಾರ್ಯಕ್ರಮದಲ್ಲಿ ಬಳ್ಳೇ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು. ಚಾಣಾಕ್ಷ ಬುದ್ಧಿ, ಕಂಠ ಮಾಧುರ್ಯ, ಶುದ್ಧ ಸ್ಪಷ್ಟ ಉಚ್ಚಾರ, ಅದ್ಭುತ ಸ್ಮರಣಶಕ್ತಿ, ಪ್ರಸಂಗಾವಧಾನ, ಸಭಾರಂಜನ ಕೌಶಲ್ಯ, ಆತ್ಮ ಗೌರವ ಇವೇ ಮೊದಲಾದ ಗುಣ ಸಮುಚ್ಚಯದಿಂದ ಅವರ ವ್ಯಕ್ತಿತ್ವವು ಪ್ರಭಾವಿಯಾಗಿತ್ತು. ಅವರು ಭಜನೆಗೆ ನಿಂತರೆ, ಭಜನೆಗೆ ವಿಶೇಷ ಕಳೆ ಏರುತ್ತಿತ್ತು. ಮೃದಂಗ ಬಾರಿಸುವದರಲ್ಲಿಯೂ ಅವರು ನಿಷ್ಣಾತರು. ಕೆಲವೊಂದು ಸಲ ಮಂಜಾವಿನಲ್ಲಿ ಅಂದರೆ 5 ಗಂಟೆಗೆ ಅವರು ಉದಯ ರಾಗಗಳನ್ನು ಹಾಡಲು ಪ್ರಾರಂಭಿಸಿದರೆಂದರೆ, ಧ್ಯಾನಕ್ಕೆ ಕುಳಿತ ಸಾಧಕ ವೃಂದಕ್ಕೆ ಅದೊಂದು ಭಕ್ತಿರಸದ ಸವಿ ಯೂಟವೇ. ಇಂಥ ಸುಪ್ರಭಾತದಲ್ಲಿ ಅವರು ಸಂಸ್ಕೃತ ಶ್ಲೋಕ, ಕನ್ನಡದ ದೇವರ ನಾಮ, ಮರಾಠಿ ಭೂಪಾಳಿ ಮತ್ತು ಹಿಂದಿ ಪದಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಈ ಮಂಗಲಾಚರಣೆಯು ಸುಮಾರು ಒಂದು ಗಂಟೆಯ ವರೆಗೆ ನಡೆದು ಕರ್ಪುರಾರತಿಯೊಡನೆ ಕೊನೆಗಾಣುತ್ತಿತ್ತು.

ನಾಗಪ್ಪನವರೂ ಗುರುದೇವ ರಾ. ದ. ರಾನಡೆಯವರೂ ಗುರು ಬಂಧುಗಳು. ಇಬ್ಬರೂ ಸದ್ಗುರುವಿನಲ್ಲಿ ದೃಢ ನಿಷ್ಠೆಯುಳ್ಳವರು. ಗುರುದೇವರು ಬೇಸಿಗೆಯ ಬಿಡುವಿನಲ್ಲಿ ನಿಂಬಾಳದಲ್ಲಿ ನೆಲೆಸಿದಾಗ, ನಾಗಪ್ಪನವರ ವಾಸ್ತವ್ಯವು ಎಷ್ಟೋ ದಿವಸಗಳ ವರೆಗೆ ನಿಂಬಾಳದಲ್ಲಿಯೇ ಇರುತ್ತಿತ್ತು. ಆಗ ಶಿಷ್ಯದ್ವಯರು ಸದ್ಗುರುಗಳ ವಿಷಯದಲ್ಲಿ ಮಾತನಾಡುತ್ತ ಕುಳಿತರೆಂದರೆ, 'ರಾತ್ರಿರೇವ ವ್ಯರಂಸೀತ್', ಎಂದೇ ಹೇಳಬೇಕಾಗುವದು. ಇಬ್ಬರೂ ಗುರು ಭಕ್ತಿಯಲ್ಲಿ, ಗುರು ಮಹಿಮೆಯಲ್ಲಿ ತಲ್ಲೀನ ರಾಗುತ್ತಿದ್ದರು. ನಾಗಪ್ಪನವರ ವೈಶಿಷ್ಟ್ಯವೆಂದರೆ, ಸದ್ಗುರುಗಳು ಆಡಿದ ಮಾತುಗಳನ್ನು ಮತ್ತು ಅವರ ವೇಳೆಯಲ್ಲಿ ನಡೆದ ಘಟನೆಗಳನ್ನು ಇದ್ದಕ್ಕಿದ್ದಂತೆಯೇ ಹೇಳುವದು, ಹೆಚ್ಚು ಕಡಿಮೆ ಯಾವದೂ ಇಲ್ಲ. ವಿಲಕ್ಷಣ ಸ್ಮೃತಿ ಶಕ್ತಿಯಿದ್ದದ್ದರಿಂದ ಎಲ್ಲ ಸಂಗತಿಗಳನ್ನು, ಅವು ಹೇಗೆ ನಡೆದವೋ ಹಾಗೆಯೇ ಹೇಳುತ್ತಿದ್ದರು. ಅವರು ಹೇಳುವ

ಪ್ರತಿಯೊಂದು ವಾಕ್ಯವೂ ಸತ್ಯವಿದೆ, ಎಂದು ಗುರುದೇವರು ನಾಗಪ್ಪನವರ ಕಥನವನ್ನು ಪ್ರಶಂಸಿಸುತ್ತಿದ್ದರು.

ಮಹಾರಾಜರ ಅಪ್ಪಣೆಯ ಮೇರೆಗೆ ನಾಗಪ್ಪನವರು ಕನ್ನಡ, ಮರಾಠಿ, ಹಿಂದಿ ಪದ ಸಂಗ್ರಹದ ಕಾರ್ಯವನ್ನು ಕೈಕೊಂಡರೆಂದು ತಿಳಿಯುತ್ತದೆ. ಮಹಾರಾಜರು ಚಿಕ್ಕ ಮಕ್ಕಳಿಗೆ ಪದಗಳನ್ನು ಪಾಠಮಾಡಲು ಹಾಗೂ ಅವನ್ನು ಅನ್ನಲು ಪ್ರೇರಿಸುತ್ತಿದ್ದರು. ದಿನಾಲು ಮಧ್ಯಾಹ್ನ ಊಟವಾದ ಮೇಲೆ ಬಾಲಗೋಪಾಲರನ್ನು ಒತ್ತಟ್ಟಿಗೆ ಕೂಡಿಸಿ ಅವರಿಂದ ಪದಗಳನ್ನು ಅನ್ನಿಸುವ ಪರಿಪಾಟವಿತ್ತು. ಇದು ಒಂದು ಗಂಟೆಯ ವರೆಗೆ ನಡೆಯುತ್ತಿತ್ತು. ಈ ಕಾರ್ಯಕ್ರಮದಲ್ಲಿ ನಾಗಪ್ಪನವರೇ ಅಗ್ರೇಸರರು. ನಾಗಪ್ಪನವರ ಪದಸಂಗ್ರಹದ ಹಸ್ತಲಿಖಿತದ ಮೇಲೆ ಮಹಾರಾಜರ ಕೃಪಾದೃಷ್ಟಿ ಬಿದ್ದಿರ ಬಹುದು.

ಈ ಪದಸಂಗ್ರಹವನ್ನು ನಾಗಪ್ಪನವರು 1902ರ ಸುಮಾರಿಗೆ ಮಾಡಿರ ಬಹುದು. ಅಂದರೆ ಹಸ್ತಲಿಖಿತವು ಬಹಳ ಹಿಂದಿನದು. ಹಳೆಯದಾದ್ದರಿಂದ ಪುಟದ ಕೊನೆಯ ಭಾಗವು ಎಷ್ಟೋ ಕಡೆಗೆ ಹರಿದು ಹೋಗಿದೆ. ಆದ್ದರಿಂದ ಪುಟದ ಕೊನೆಗೆ ಬರುವ ಶಬ್ದಗಳನ್ನು ಓದುವದು ಕಠಿಣ. ಕೆಲವೆಡೆಗೆ ಪುಟದ ಅರ್ಧಭಾಗವಷ್ಟೇ ಉಳಿದಿದೆ. ಕಾಲದ ಮಹಿಮೆಯಂತೆ, ಕೆಲವು ಭಾಗಗಳು ಗೆದ್ದಲಿಯ ಆಹಾರವಾಗಿ ನಡು ನಡುವೆ ಛಿದ್ರಗಳು ಕಾಣಿಸಿಕೊಳ್ಳುತ್ತವೆ. 'ಹಿಡಿದರೆ ಕೆಡುವೆ,' ಎಂಬ ಸ್ಥಿತಿಯು ಪುಟದ ತುಂಡುಗಳಿಗೆ ಪ್ರಾಪ್ತವಾಗಿದೆ. ಪದದ ಪ್ರಾರಂಭ ಇಲ್ಲವೆ ಅದರ ಕೊನೆಯ ಸಾಲು ಗೊತ್ತಾದರೆ ಅದು ಯಾವ ಸಂತ ಕವಿಯದಿರಬಹುದು ಇದನ್ನು ಊಹಿಸಬಹುದು. ಈ ಊಹೆಯ ಆಧಾರದಿಂದ ಪದವು ಯಾವದಾದರೊಂದು ಪುಸ್ತಕದಲ್ಲಿ ಮುದ್ರಿತವಾಗಿದೆಯೋ ಇದನ್ನು ಶೊಧಿಸಬಹುದು. ಮುದ್ರಿತವಾಗಿದ್ದರೆ ಅದರ ಪ್ರಕಾರ ಅಪೂರ್ಣವಿದ್ದ ಪದವನ್ನು ಪೂರ್ಣಗೊಳಿಸ ಬಹುದು. ಹೀಗೆ ಕೆಲವು ಹಾಡುಗಳ ಪುನರುಜ್ಜೀವನವಾಗಿದೆ. ಮುದ್ರಿತ ಪ್ರತಿಗಳಲ್ಲಿ ಕಾಣುವ ಪಾಠಭೇದಗಳ ಕಡೆಗೆ ವಿಶೇಷ ಲಕ್ಷ ಕೊಡದೆ ನಾಗಪ್ಪನವರ ಪಾಠವನ್ನೇ ಇಡುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ''ಕೂಡಿದ ರಂಡಿಯ ಸಂಗಾತ ಇರುವದು ಪುಣ್ಯವೇನೋ'' ಈ ಪದವು ಶ್ರೀಶೈಲ ಮಲ್ಲಯ್ಯನದೆಂದು ನಾಗಪ್ಪನವರು ತಿಳಿಯುತ್ತಾರೆ; ಆದರೆ ಡಾ. ಎಮ್. ಎಸ್. ಲಠ್ಠೆ ಇವರು ಸಂಪಾದಿಸಿದ ''ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರವಚನಗಳು'' (ಪ್ರಕಾಶಕರು : ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, 1982) ಈ ಪುಸ್ತಕದ ಮೇಲಿಂದ ಈ ಪದವು ಮಡಿವಾಳ ಯೋಗಿಗಳದೆಂದು ಗೊತ್ತಾಗುತ್ತದೆ. ಈ ಪದವು ಡಾ. ಲಠ್ಠೆಯವರ ಪುಸ್ತಕದಲ್ಲಿ ''ಪರಸ್ತ್ರೀಯರ ಸಂಗ ಮಾಡುವದು ಪುಣ್ಯವೇನೋ'' ಎಂದು ಸುರುವಾಗುತ್ತದೆ, ಹಾಗೂ ಇಲ್ಲಿ ಒಂದೆರಡು ಸಾಲುಗಳು ಕಡಿಮೆ ಇವೆ. ನಾಗಪ್ಪನವರ

ನಿವೇದನೆ

ಹಸ್ತ ಲಿಖಿತದಲ್ಲಿಯ ಪಾಠ ಮತ್ತು ಮುದ್ರಿತ ಪ್ರತಿಗಳಲ್ಲಿ ಇರುವ ಪಾಠ ಇವುಗಳಲ್ಲಿ ಅಲ್ಪ ಸ್ವಲ್ಪ ಭೇದವಿರುವದು ಅಪರಿಹಾರ್ಯ. ಉದಾಹರಣೆಗಾಗಿ ಕೆಳಗಿನ ಇತ್ತೀಚೆಗೆ ಪ್ರಕಟವಾದ ಗ್ರಂಥಗಳನ್ನು ಉಲ್ಲೇಖಿಸಬಹುದು.

1. ಶ್ರೀ ಮಹಿಪತಿರಾಯರ ಕೃತಿಗಳು. ಸಂಪಾದಕ : ಜಿ. ವರದರಾಜರಾವ, ಪ್ರಕಾಶನ : ಮೈಸೂರು ವಿಶ್ವವಿದ್ಯಾಲಯ, ಮೈಸೂರು 1974.

2. ಕೂಡಲೂರು ಬಸವಲಿಂಗ ಶರಣರ ಸ್ವರವಚನಗಳು, ಸಂಪಾದಕ : ಶಾಂತರಸ, ಪ್ರಕಾಶಕರು : ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ 1983.

3. ಶ್ರೀ ಚಿದಾನಂದಾವಧೂತರ ಕೀರ್ತನೆಗಳು, ಸಂಪಾದಕ : ಕೆ. ಜಗನ್ನಾಥ ಶಾಸ್ತ್ರಿ, ಶ್ರೀಕೃಪಾ, ಫರ್ಸ್ಟ್‌ಕ್ರಾಸ, ಅಶೋಕ ನಗರ, ಶಿವಮೊಗ್ಗ 1993.

ನಾಗಪ್ಪನವರ ಕನ್ನಡ ಪದಗಳ ಸಂಗ್ರಹದಲ್ಲಿ ಜಾನಪದ ಗೀತಗಳೇ ಹೆಚ್ಚಾಗಿವೆ. ಮಹಾರಾಜರು ಹಳ್ಳಿ ಹಳ್ಳಿಗೆ ಪರಮಾರ್ಥ ಪ್ರಸಾರಕ್ಕಾಗಿ ಹೋಗುತ್ತಿದ್ದದ್ದರಿಂದ ಹಳ್ಳಿಯಲ್ಲಿರುವ ಶಿಷ್ಯ ವರ್ಗಕ್ಕೆ ಮತ್ತು ಬಹುಜನ ಸಮಾಜಕ್ಕೆ ರುಚಿಸುವ, ಅವರು ಮೆಚ್ಚುವ ಪದಗಳ ಸಂಖ್ಯೆಯೇ ಈ ಸಂಗ್ರಹದಲ್ಲಿ ಹೆಚ್ಚಾಗಿದೆ. ಎಲ್ಲ ಪದಗಳು ಬಹುತರವಾಗಿ ಮೌಖಿಕ ಪರಂಪರೆಯಿಂದ ಬಂದವುಗಳು. 100 ವರ್ಷಗಳ ಹಿಂದೆ ಅಚ್ಚಾದ ಸಂತ ಕವಿಗಳ ಪದಗಳು ಅತಿ ವಿರಳ, ಅಥವಾ ಇಲ್ಲವೇ ಇಲ್ಲವೆಂದು ಹೇಳಬಹುದು. ಪುರಂದರದಾಸ, ಕನಕದಾಸ, ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ ಈ ನಾಲ್ಕಾರು ಸಂತ ಕವಿಗಳನ್ನು ಬಿಟ್ಟರೆ, ಈ ಸಂಗ್ರಹದಲ್ಲಿ ಕಾಣುವ ಸುಮಾರು 40-45 ಭಕ್ತ ಕವಿಗಳು ನಮಗೆ ತೀರ ಅಪರಿಚಿತರೇ. ಈ ಸಂಗ್ರಹದಲ್ಲಿ ಬರುವ ಬೆರಟೂರೇಶ, ನರಸಿಂಹ, ದಿನಕರ ಬಸವ, ಬಲಭೀಮ, ಸಂಗ ಇತ್ಯಾದಿ ಸತ್ಪುರುಷರ ಮತ್ತು ಅವರ ಕೃತಿಗಳ ವಿಷಯದಲ್ಲಿ ನಾವು ಏನನ್ನೂ ಅರಿಯೆವು. ಬೆಳಕಿಗೆ ಬರದೇ ಇದ್ದ ಈ ಮಹಾನುಭಾವರ ಗೀತ ರತ್ನಗಳನ್ನು ಸಂಗ್ರಹಿಸಿ, ಅವುಗಳನ್ನು ಕಾಯ್ದಿಟ್ಟ ಶ್ರೇಯಸ್ಸು ನಿಂಬರಗಿ ಸಂಪ್ರದಾಯದ ಸದ್ಗುರುಗಳಿಗೆ ಇದೆ. ಈ ಪದಗಳನ್ನು ಹಾಡಿಸಿ, ಬರೆಯಿಸಿ ಅವುಗಳನ್ನು ಕಾಪಾಡಿದ ಮಹತ್ಕಾರ್ಯವನ್ನು ಇವರು ಮಾಡಿದ್ದಾರೆ. ಇದು ಅವರು ಕನ್ನಡ ಸಂತ ಸಾಹಿತ್ಯಕ್ಕೆ ನೀಡಿದ ಮಹತ್ವದ ಕೊಡುಗೆ.

ಪದಗಳು ಮೌಖಿಕ ಪರಂಪರೆಯಿಂದ ಬಂದದ್ದರಿಂದ ಅವುಗಳಲ್ಲಿ ಕೆಲವು ಗ್ರಾಮ್ಯಶಬ್ದಗಳು ಸೇರಿರಬಹುದು. ಊರಿನ ರಸಿಕರು ತಮ್ಮದೇ ಆದ ರಾಗಗಳಲ್ಲಿ ಪದಗಳನ್ನು ಹಾಡುವಾಗ ಕೆಲವು ಶಬ್ದಗಳನ್ನು ಅವರು ಹಿಗ್ಗಿಸಿರಬಹುದು, ಅಥವಾ ಕೆಲವನ್ನು ಕುಗ್ಗಿಸಿರಬಹುದು. ಹೀಗಾಗಿ ಆ ಶಬ್ದಗಳು ತಪ್ಪಾಗಿ ತೋರಬಹುದು. ಕೆಲವು ಸ್ಥಳಗಳಲ್ಲಿ ಅಪಾರ್ಥವೂ ತಲೆದೋರಿರಬಹುದು. ಇಷ್ಟೇ ಅಲ್ಲ, ಕೆಲವು

ಶಬ್ದಗಳು ಅಶ್ಲೀಲವೆಂದು ಸಾಹಿತ್ಯಿಕ ಮಡಿವಂತರು ನಿರ್ಣಯಿಸಬಹುದು. ಬೇರೆ ಸಂದರ್ಭದಲ್ಲಿ ಅಶ್ಲೀಲವೆನಿಸಬಹುದಾದ ಶಬ್ದಗಳು ಸಂತ ಕವಿಗಳ ನೈತಿಕ, ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ತಮ್ಮ ಅಶ್ಲೀಲತೆಯನ್ನು ಕಳೆದುಕೊಳ್ಳುತ್ತವೆ. ಜುಗುಪ್ಸಾ ಭಾವವು ಬೀಭತ್ಸ ರಸವನ್ನು ಹುಟ್ಟಿಸುವದಿಲ್ಲವೇ ? ಈ ಬೀಭತ್ಸ ರಸದ ಅನುಭವದಿಂದ ಸಂಸಾರ ಹೇಯ ಸ್ಥಲದ ಮನವರಿಕೆಯಾಗಿ ವ್ಯಕ್ತಿಯಲ್ಲಿ ವೈರಾಗ್ಯ ಭಾವ ಮೂಡಿ, ಅವನು ಪರಮಾರ್ಥದ ಕಡೆಗೆ ಹೊರಳಲಾರನೇ ?

ಪ್ರಸಿದ್ಧ ಪಾಶ್ಚಾತ್ಯ ತತ್ತ್ವಜ್ಞ-ಸ್ಪಿನೋಝಾ ಕೇಳುತ್ತಾನೆ : ಪರಮೇಶ್ವರನಲ್ಲಿ ಯಾವದಾದರೂ ಕುಂದು ಕೊರತೆ ಇದೆಯೇ ? ಅವನ ಪರಿಪೂರ್ಣತೆಯಲ್ಲಿ ಯಾವ ಸಾಧನ ಸಾಮಗ್ರಿಯಿಲ್ಲ ? ಅವನು ಕೇವಲ ಶ್ರೇಷ್ಠ ವಸ್ತುಗಳನ್ನಷ್ಟೇ ನಿರ್ಮಿಸಲು ಸಮರ್ಥನೇ ? ಕನಿಷ್ಠ ವಸ್ತುಗಳನ್ನು ರಚಿಸಲು ಅವನಲ್ಲಿ ಶಕ್ತಿಯಿಲ್ಲವೇ ? ಹೀಗೆ ಒಪ್ಪಿದರೆ, ಅವನ ಸರ್ವಶಕ್ತಿಮತ್ತ್ವಕ್ಕೆ ಬಾಧೆ ಬರುತ್ತದೆ. ಅವನು ನಿರ್ಮಿಸಿದ ಸೃಷ್ಟಿರಚನೆಯಲ್ಲಿ ಎಲ್ಲಿಯೂ ತೆರವು, ಬರಿದಾದದ್ದು, ಅಥವಾ ಶೂನ್ಯವಾದದ್ದು ಎಂಬುದು ಇಲ್ಲ. ಅವನ ರಚನಾ ಕ್ರಮವು ಅಖಂಡವಿದೆ. ನಿಸರ್ಗವು ಶೂನ್ಯತೆಯನ್ನು ಸಹಿಸದು ; Nature abhors vacuum, ಎಂದು ವೈಜ್ಞಾನಿಕರು ಹೇಳುತ್ತಾರೆ. ವಿಶ್ವ ಶಿಲ್ಪದ ಕುಶಲ ಹಸ್ತನಾದ ಪರಮಾತ್ಮನಿಗೆ ಶೂನ್ಯತೆಯು ಹೇಗೆ ಸಹನವಾದೀತು ? ಅವನು ನಿತ್ಯ ಪ್ರಪೂರ್ಣ ತತ್ತ್ವವಿದ್ದದ್ದರಿಂದ ಅವನಲ್ಲಿ ಎಲ್ಲವೂ — ಚಲೋದೇ ಇರಲಿ, ಕೆಟ್ಟದೇ ಇರಲಿ - ಆ ವಿಶ್ವ-ವಿಸ್ಮಯದೈಂದ್ರ ಜಾಲಕನಲ್ಲಿ ಇದ್ದೇ ಇದೆ. ಇನ್ನು ಒಳಿತು, ಕೆಟ್ಟದು ಇದನ್ನು ನಿರ್ಧರಿಸುವದಾದರೂ ಹೇಗೆ ? ವಿಶಿಷ್ಟ ವಸ್ತುವಿನ ಪರಿಣಾಮ ಸುಖಕಾರಕವಿದ್ದರೆ ಅದಕ್ಕೆ ನಾವು ಒಳಿತು ಅನ್ನುತ್ತೇವೆ; ದು:ಖಕಾರಕ ವಿದ್ದರೆ ಅದಕ್ಕೆ ನಾವು ಕೆಟ್ಟದು ಅನ್ನುತ್ತೇವೆ. ನಾಗರ ಹಾವಿನ ವಿಷಕ್ಕೆ ಯಾವನು ಒಳಿತು ಎನ್ನಬಹುದು ? ಆದರೆ ಕೆಲವು ದುರ್ಧರ ರೋಗಗಳಿಗೆ ಅದೇ ವಿಷವು ಔಷಧವೆಂದು ತಜ್ಞರು ಒಪ್ಪುತ್ತಾರೆ. ಆದ್ದರಿಂದ ಒಂದು ವಸ್ತುವಿನ ಕಡೆಗೆ ನೋಡುವ ನಮ್ಮ ದೃಷ್ಟಿಯೇ ಅದರ ಬೆಲೆಯನ್ನು, ಅದು ಒಳ್ಳೆಯದೇ ಅಥವಾ ಕೆಟ್ಟದೇ ಇದನ್ನು ನಿರ್ಣಯಿಸುವದು. ಹೀಗೆ ಒಳಿತು, ಕೆಟ್ಟದು ಇದೆಲ್ಲ ಮನುಷ್ಯ ಮನುಷ್ಯರಲ್ಲಿರುವ ಭೇದದ ಪರಿಣಾಮ. ಒಬ್ಬನಿಗೆ ಒಳಿತಾದದ್ದು ಇನ್ನೊಬ್ಬನಿಗೆ ಒಳಿತೆನಿಸಲಿಕ್ಕಿಲ್ಲ. ನಮ್ಮ ಪೂರ್ವಗ್ರಹದಂತೆ, ಪೂರ್ವಕಲ್ಪಿತ ದೃಷ್ಟಿಯಂತೆ, ನಾವು ಒಂದು ವುಸ್ತುವಿನ ಯೋಗ್ಯ ತೆಯನ್ನು ನಿರ್ಣಯಿಸುತ್ತೇವೆ. ಒಟ್ಟಿನಲ್ಲಿ, ಒಳಿತು, ಕೇಡು, ಇಷ್ಟ, ಅನಿಷ್ಟ ಇದೆಲ್ಲ ನಮ್ಮ ಮನಸ್ಸಿನ ಬಯಲಾಟ. ಪರಮೇಶ್ವರನ ಸರ್ವಗ್ರಾಹೀ ಸರ್ವ ವ್ಯಾಪಕ ದೃಷ್ಟಿಯಲ್ಲಿ ಇಷ್ಟ, ಅನಿಷ್ಟ ಹೀಗೆ ಯಾವ ಭೇದವೂ ಇಲ್ಲ. ಅವನ ವಿಚಿತ್ರ, ಅನಾಕಲನೀಯ ಸೃಷ್ಟಿ ರಚನೆಯಲ್ಲಿ ಯಾವದೂ ತ್ಯಾಜ್ಯವಿಲ್ಲ. ಅನಂತ

ನಿವೇದನೆ

ಕೋಟಿ ಬ್ರಹ್ಮಾಂಡ ನಾಯಕನ ಸಾಮ್ರಾಜ್ಯದಲ್ಲಿ ಎಲ್ಲವೂ ವಿಶಿಷ್ಟ ಕ್ರಮದಿಂದ ನಿಯೋಜಿತವಿದೆ. ಪ್ರತಿಯೊಂದು ವಸ್ತುವಿಗೆ ಅದರದೇ ಆದ ವಿಶಿಷ್ಟ ಸ್ಥಾನವಿದೆ. ವಸ್ತುವು ತನ್ನ ನೇಮಿಸಿದ ಕಾರ್ಯವನ್ನು ಮಾಡಿದರೆ ಅದು ಒಳಿತೇ ಎನ್ನಬೇಕು.

ಸಂತರ ಲೆಕ್ಕಣಿಕೆಯಲ್ಲಿ ನಮಗೆ ಅಶ್ಲೀಲವೆನಿಸುವ, ಶಬ್ದ ಬಂದರೆ ಅದು ಅವರ ದೃಷ್ಟಿಯಿಂದ ಅಶ್ಲೀಲವಿರಲಿಕ್ಕಿಲ್ಲ. ಅವರು ಬಳಸಿದ ಶಬ್ದ ಆ ಸ್ಥಲದಲ್ಲಿ ಹೆಚ್ಚು ಪರಣಾಮಕಾರಕವಾಗಿರ ಬಹುದು. ಸಂತ ಕವಿಗಳು ತಥಾಕಥಿತ ಅಶ್ಲೀಲ ಶಬ್ದವನ್ನು ಯೋಗ್ಯ ಸ್ಥಲದಲ್ಲಿ, ಯೋಗ್ಯ ಸಂದರ್ಭದಲ್ಲಿ ಬಳಸಿರಬೇಕು. ಹೇಸಿಕೆಯಂದರೆ ಒಂದು ವಸ್ತುವು ತನ್ನ ನಿರ್ದಿಷ್ಟ ಸ್ಥಲ ಬಿಟ್ಟು ಬೇರೆ ಕಡೆಗೆ ಹೋಗುವದು. Dirt is matter in the wrong place ಎಂದು ಪ್ಲೇಟೋನ ಸಿದ್ಧಾಂತ. ವಸ್ತುವು ತನ್ನ ಸ್ವಾಭಾವಿಕ ಸ್ಥಳದಲ್ಲಿಯೇ ಒಪ್ಪುತ್ತದೆ. ಸ್ಥಲಾಂತರವಾದರೆ ಅದಕ್ಕೆ ಅನಿಷ್ಟಕಾರಕ, ಅಮಂ ಗಲವಾದ, ಹೇಸಿಕೆಯ ಇತ್ಯಾದಿ ಆಪಾದನೆಗಳು ಅಂಟುತ್ತವೆ. ರಾಜನೀತಿಯಲ್ಲಿ ಪಕ್ಷಾಂ ತರವು ಗರ್ಹ್ಯವೆಂದು ನಾವು ತಿಳಿಯುವದಿಲ್ಲದೇ ? ಅದರಂತೆ ಯಾವ ಕ್ಷೇತ್ರದಲ್ಲಿಯೇ ಆಗಲಿ, ಸ್ಥಲಾಂತರವು ನಿಂದ್ಯವೇ. ಆದ್ದರಿಂದಲೇ ಗೀತೆಯ ಉಪದೇಶ, ಸ್ವಧರ್ಮೇ ನಿಧನಂ ಶ್ರೇಯ ಃ ಪರಧರ್ಮೋ ಭಯಾವಹ ಃ ॥

ಸಂತಕವಿಗಳು ಉಪಯೋಗಿಸಿದ ಶಬ್ದಗಳನ್ನು ಕೆಲವು ಸಲ ರೂಢಾರ್ಥದಲ್ಲಿ ಅಥವಾ ಮುಖ್ಯಾರ್ಥದಲ್ಲಿ ತೆಗೆದು ಕೊಳ್ಳದೆ, ಆ ಶಬ್ದಗಳ ಲಾಕ್ಷಣಿಕ ಅರ್ಥ, ಸಾಂಕೇತಿಕ ಇಲ್ಲವೆ ಸೂಚಿತ ಅರ್ಥವನ್ನು ತೆಗೆದುಕೊಳ್ಳ ಬೇಕಾಗಾಗುವದು. ತಾಯಿ ಕೆಲಸ ಮಾಡಿ ಮಾಡಿ ದಣಿದಿದ್ದಾಳೆ. ಎಷ್ಟು ಬೇಡವೆಂದು ಹೇಳಿದರೂ ಸಣ್ಣ ಮಗನು ಬಿಸಿಲಿನಲ್ಲಿಯೇ ಗಂಟೆಗಟ್ಟಲೆ ಆಟವಾಡುತ್ತಿದ್ದಾನೆ. ಇಂಥ ಸಮಯದಲ್ಲಿ ತಾಯಿ ಒದ ರುತ್ತಾಳೆ-ಮೂರ್ಖಾ, ಬಿಸಿಲಿನಲ್ಲಿ ಸಾಯಬೇಡ, ನೆರಳಿನಲ್ಲಿ ಸಾಯು. ಇಲ್ಲಿ ''ಸಾಯು'' ಇದರ ಅರ್ಥ ''ಆಟವಾಡು'' ಎಂದು ಮಾಡಬೇಕಾಗುವದು. ಸಂತಕಾವ್ಯದ ಸಂದ ರ್ಭದಲ್ಲಿ 'ಬಳಸದಿರು ರೂಢಾರ್ಥದಲಿ ಅಶ್ಲೀಲ ಶಬ್ದವನು' ಎಂದು ಎಚ್ಚರಿಸ ಬೇಕಾ ಗುವದು.

ಈ ಸಂಗ್ರಹದಲ್ಲಿಯ ಕೆಲವು ಗೀತಗಳು ಇನ್ನೂ ವರೆಗೆ ಯಾವ ಗ್ರಂಥದಲ್ಲಿಯೂ ಮುದ್ರಿತವಾಗಿಲ್ಲವೆಂದು ನಮ್ಮ ಗ್ರಹಿಕೆ. ''ಭಾಗ್ಯ ದೊರಕಿತು ಎನಗೆ ದ್ರವ್ಯ ದೊರಕಿತು'' ಪುರಂದರ ದಾಸರ ಮುದ್ರಿಕೆಯಿದ್ದ ಈ ಪದವು ಪಾವಂಜೆ ಗುರುರಾಯರ ''ಪುರಂದರ ದಾಸರ ಕೀರ್ತನೆಗಳು'', ಅಥವಾ ಸುಬೋಧ ರಾಮರಾಯರ ''ಪುರಂದರ ದಾಸರ ಕೃತಿಗಳು'' ಈ ಪ್ರಕಾಶನಗಳಲ್ಲಿ ನಮಗೆ ದೊರೆಯಲಿಲ್ಲ. ಇದರಂತೆ, ''ಎಂಥ ಕಾಟದವಳೀ ನಮ್ಮತ್ತೆವ್ವ'' ಈ ಗೀತವು ಮೇಲ್ಕಾಣಿಸಿದ ಡಾ. ಲತ್ಮೆಯವರು ಸಂಪಾದಿಸಿದ ಗ್ರಂಥದಲ್ಲಿ ಕಾಣಿಸಲಿಲ್ಲ. ''ಬುಡ ಬುಡ ಅಂದರ ಬುಡ ಮ್ಯಾಲ್ಯಾದ''

ಹಾಗೂ ''ಹಣಿಯ ಬಾರವು ಮೀರಿ ನಡೆದೆನೆಂದರೆ '' ಈ ಪದಗಳು ಶಾಂತರಸರು ಸಂಪಾದಿಸಿದ ಕೂಡಲೂರು ಬಸವಶರಣರ ಸ್ವರವಚನಗಳು ಈ ಪುಸ್ತಕದಲ್ಲಿ ಸಿಗಲಿಲ್ಲ. ಭವತಾರಕರ ''ಹರ ಹರ ಶ್ರೀ ಗುರು '' ಈ ಗೀತವು ಮುದ್ರಿತ ಪ್ರತಿಯಲ್ಲಿಲ್ಲ. ಇತ್ತೀಚೆಗೆ ಪ್ರಕಟವಾದ ''ಚಿದಾನಂದಾವಧೂತರ ಕೀರ್ತನೆಗಳು'' ಈ ಗ್ರಂಥದಲ್ಲಿ ಮುಂದಿನ 5 ಪದಗಳು ಇಲ್ಲ: ಆಶ್ರಮವೆಲ್ಲಿಯದು ಯೋಗಿಗೆ; ಒಗತನ ಮಾಡೆಂದರ ನಮ್ಮವರು; ಕಣ್ಣಿನೊಳು ಕಣ್ಣು ಪುಟ್ಟಿ; ಕೊಡ ನಾನು ಹೊರಲಾರೆನೇ; ಬಿಡೋ ಬಿಡೋ ಹಮ್ಮಾ.

ಇಂಥ ಪಟ್ಟಿಯನ್ನು ಇನ್ನೂ ಹೆಚ್ಚಿಗೆ ಮಾಡಬಹುದು. ಒಟ್ಟಿನಲ್ಲಿ, ನಾಗಪ್ಪನವರ ಈ ಪದ ಸಂಗ್ರಹದಲ್ಲಿದ್ದ ಕೆಲವು ಪದಗಳು ದುರ್ಮಿಳವಿವೆ. ಅನ್ಯತ್ರ ದೊರೆಯಲಾರವು, ಇಲ್ಲಿಯೇ ಅವನ್ನು ನೋಡಬೇಕು, ಹಾಗೂ ಪರಿಶೀಲಿಸಬೇಕು; ಇಷ್ಟು ಹೇಳಿದರೆ ಸಾಕು.

ನಾಗಪ್ಪನವರು ಪದಗಳನ್ನು ವಿಶಿಷ್ಟ ರೀತಿಯಿಂದ ವರ್ಗೀಕರಿಸಿದ್ದಾರೆ. ಕನ್ನಡ, ಮರಾಠಿ ಹಾಗೂ ಹಿಂದಿ ಹೀಗೆ ಭಾಷೆಯ ಪ್ರಕಾರ, ಇದು ಒಂದನೆಯ ರೀತಿ. ವಿಶಿಷ್ಟ ಭಾಷೆಯ ಪದಗಳನ್ನು ವಿಷಯದ ಪ್ರಕಾರ, ಅಂದರೆ ನೀತಿಯ ಪದಗಳು ಹಾಗೂ ಅನುಭವದ ಪದಗಳು, ಹೀಗೆ ಎರಡನೆಯ ಪ್ರಕಾರವು. ಹೆಣ್ಣು ಮಕ್ಕಳಿಗೆ ಸಂಬೋಧಿಸಿದ ಪದಗಳನ್ನು ''ಹೆಣ್ಣಿನ ಪದಗಳು'' ಎಂದು ನಾಗಪ್ಪನವರು ಕರೆಯುತ್ತಾರೆ. ''ಮನುಷ್ಯನಿಗೆ ಛೀ ಹಾಕುವ ಪದಗಳು'', ಇದೂ ಒಂದು ಬೇರೆಯಾದ ವರ್ಗೀಕರಣ. ಕೊನೆಗೆ ನಾವು ಓದುತ್ತೇವೆ - ನಿಂಬರಗಿ ಮಹಾರಾಜ ವಿರಚಿತ ಪದಗಳು ಹಾಗೂ ಸಂಪ್ರದಾಯದ ಶಿಷ್ಯ ಮಂಡಳಿಯು ಮಾಡಿದ ಪದಗಳು. ಕನ್ನಡ ಪದಗಳು ಕನ್ನಡ ಲಿಪಿಯಲ್ಲಿವೆ. ಮರಾಠಿ, ಹಿಂದಿ ಪದಗಳೂ ಕೂಡ ಕನ್ನಡ ಲಿಪಿಯಲ್ಲಿವೆ. ಇಲ್ಲಿ ಪದಗಳನ್ನು ನಾಗಪ್ಪನವರ ವರ್ಗೀಕರಣದಂತೆ ಕೊಡದೆ, ಅನುಕೂಲತೆಗಾಗಿ ವರ್ಣಾನುಕ್ರಮದಂತೆ ಕೊಡಲಾಗಿದೆ. ಪದದ ಮೊದಲಿಗೆ ಕಂಸಿನಲ್ಲಿ ಕೊಟ್ಟ 'ನಾಹಪು' ಎಂದರೆ ನಾಗಪ್ಪನವರ ಹಸ್ತಲಿಖಿತದಲ್ಲಿಯ ಪುಟಸಂಖ್ಯೆ. ಪುಟದ ಭಾಗ ಹರಿದು ಶಬ್ದಗಳು ಅಳಿದು ಹೋದ ಸ್ಥಳಗಳಲ್ಲಿ ... ಈ ಗುರುತು ಹಾಕಲಾಗಿದೆ.

100 ವರ್ಷಗಳ ಹಿಂದೆ, ಅಂದರೆ ಮುದ್ರಿತ ಪ್ರತಿ ಇಲ್ಲದಿರುವಾಗ, ಈ ಪದಗಳನ್ನು ಹಾಡುವವರ ಬಾಯಿಯಿಂದ ಕೇಳಿ, ಅವುಗಳನ್ನು ಸಂಗ್ರಹಿಸಿ, ವಿಶಿಷ್ಟ ರೀತಿಯಿಂದ ವರ್ಗೀಕರಿಸಿ, ಅವುಗಳನ್ನು ಬರೆದಿಡುವದು ದೊಡ್ಡ ಸಾಹಸವೇ. ಇದನ್ನು ಮಾಡಿದ ಈ ಮಹನೀಯರಿಗೆ ಶತಶಃ ಪ್ರಣಾಮಗಳು.

ಸುಮಾರು 15 ವರ್ಷಗಳ ಹಿಂದೆ ಎಂದಿನಂತೆ ನಾನು ನಿಂಬರಗಿಗೆ ಸಪ್ತಾಹಕ್ಕೆ

ನಿವೇದನೆ

ಹೋದಾಗ, ನಾಗಪ್ಪನವರ ಹಿರಿಯ ಚಿರಂಜೀವರಾದ ಗುರುಸಿದ್ದಪ್ಪನವರು ಈ ಪದಗಳ ಹಸ್ತ ಲಿಖಿತವನ್ನು ನನಗೆ ಕೊಟ್ಟು, ಗೊರಲಿ ತಿಂದ ಹಾಗೂ ಕಾಣಿಸದೇ ಇದ್ದ ಅಕ್ಷರಗಳನ್ನು, ಇತ್ತೀಚೆಗೆ ಪ್ರಕಟವಾದ ಗ್ರಂಥಗಳ ಸಹಾಯದಿಂದ ಪೂರ್ತಿ ಗೊಳಿಸಿ, ಹಸ್ತಲಿಖಿತವನ್ನು ಮುದ್ರಿಸಿ ಹೊರಪಡಿಸಬೇಕೆಂದು ಸೂಚಿಸಿದರು. ಅವರ ಸೂಚನೆಯ ಪ್ರಕಾರ ಕಾರ್ಯ ಪ್ರಾರಂಭಿಸಿದೆ. 2-3 ವರ್ಷಗಳು ಗತಿಸಿರಬಹುದು. ಅನೇಕ ಎಡರು ತೊಡರುಗಳ ಮೂಲಕ, ನನ್ನಿಂದ ಕೆಲಸ ಆಗದೆಂದು ಹಸ್ತ ಲಿಖಿತವನ್ನು ಅವರಿಗೆ ತಿರುಗಿ ಕೊಟ್ಟೆ. ನನ್ನ ಪತ್ನಿ ಸೌ. ಪದ್ಮಾ ಕುಲಕರ್ಣಿ ಇವರು ಅನುವಾದಿಸಿದ ಕನ್ನಡ ಪರಮಾರ್ಥ ಸೋಪಾನ ಈ ಪುಸ್ತಕವು 1992 ರಲ್ಲಿ ಪ್ರಸಿದ್ಧವಾಯಿತು. ಅದರ ಒಂದು ಪ್ರತಿಯನ್ನು ಗುರುಸಿದ್ದಪ್ಪನವರಿಗೆ ಕೊಟ್ಟೆ. ಅದರಲ್ಲಿದ್ದ ನಾಗಪ್ಪನವರ ಹಸ್ತಲಿಖಿತದ ಮುದ್ರಿತವಾದ ಪುಟವನ್ನು ನೋಡಿ ಹಾಗೂ ಪ್ರಸ್ತಾವನೆಯಲ್ಲಿ ನಾಗಪ್ಪನವರ ಬಗ್ಗೆ ಬರೆದ ವಿಷಯವನ್ನು ಓದಿ, ಗುರುಸಿದ್ದಪ್ಪನವರು ಬಹಳ ಸಂತೋಷ ಬಟ್ಟರು. ಇದು ನಮ್ಮ ತಂದೆಯವರಿಗೆ ನೀವು ಸಲ್ಲಿಸಿದ ದೊಡ್ಡ ಸೇವೆ, ಎಂದು ಪ್ರಶಂಸಿಸಿದರು. ಮತ್ತೆ ಅವರು ನಾಗಪ್ಪನವರ ಹಸ್ತ ಲಿಖಿತವನ್ನು ಕೊಟ್ಟು ನೀವೇ ಈ ಕಾರ್ಯವನ್ನು ಪೂರ್ಣ ಗೊಳಿಸಿರಿ ಎಂದು ಒತ್ತಾಯಿಸಿದರು. ಮುಂದೆ ಕೆಲವೇ ದಿವಸಗಳಲ್ಲಿ ದುರ್ದೈವದಿಂದ ಗುರುಸಿದ್ದಪ್ಪನವರು ಕೈಲಾಸವಾಸಿಗಳಾದರು. ಅವರು ಒಪ್ಪಿಸಿದ ಕೆಲಸವನ್ನು ಬಿಟ್ಟುಗೊಡುವ ಮನಸ್ಸಾಗಲಿಲ್ಲ. ಹೇಗಾದರೂ ಮಾಡಿ ಕಾರ್ಯ ಪೂರ್ತಿಗೊಳಿಸಬೇಕೆಂದು ನಿರ್ಧರಿಸಿ ಯುನಿವರ್ಸಿಟಿ ಗ್ರಂಥಾಲಯಗಳಲ್ಲಿ ದೊರೆತ ಪುಸ್ತಕಗಳನ್ನು ಓದಿ, ಕೆಲವು ವಿದ್ವಾಂಸರೊಡನೆ ಚರ್ಚಿಸಿ ಮುದ್ರಣ ಪ್ರತಿಯನ್ನು ಸಿದ್ಧಪಡಿಸಿದೆ. ಕಾರ್ಯ ಬಾಹುಲ್ಯದ ಮೂಲಕ ಈ ಎಲ್ಲ ಕೆಲಸ ಬೇಗವಾಗಲಿಲ್ಲ. ಮುದ್ರಣಕ್ಕೆ ಮತ್ತು ಪ್ರಕಾಶನಕ್ಕೆ ಅವಶ್ಯವಾದ ಆರ್ಥಿಕ ಸಹಾಯದ ವ್ಯವಸ್ಥೆಯೂ ಆಯಿತು. ಹೀಗೆ ಪುಸ್ತಕ ರೂಪದಿಂದ ನಾಗಪ್ಪನವರ ಹಸ್ತ ಲಿಖಿತವು ಹೊರ ಬಿದ್ದಿದೆ. ಇದನ್ನು ನೋಡಲು ಗುರುಸಿದ್ದಪ್ಪನವರು ಈಗ ನಮ್ಮಲ್ಲಿಲ್ಲ. ಕೃತಜ್ಞತೆಯಿಂದ ಅವರನ್ನು ಸ್ಮರಿಸುವೆ.

ಈ ಪುಸ್ತಕಕ್ಕೆ ಪುರಸ್ಕಾರ ಬರೆದ ನಾಗಪ್ಪನವರ ಎರಡನೆಯ ಚಿರಂಜೀವರಾದ ಕಾಡಸಿದ್ದಪ್ಪನವರಿಗೆ ಮತ್ತು ಶುಭೇಚ್ಛೆ ಕೋರಿದ ನಾಗಪ್ಪನವರ ಮೊಮ್ಮಕ್ಕಳಾದ ಮಲ್ಲಿಕಾರ್ಜುನಪ್ಪನವರಿಗೆ ಆಭಾರಿಯಾಗಿದ್ದೇನೆ.

ಸೊಲ್ಲಾಪುರ
ದತ್ತ ಜಯಂತಿ
19-12-2002

ಬಿ. ಆರ್. ಕುಲಕರ್ಣಿ

निवेदन

आधुनिक काळातील एक संतश्रेष्ठ निंबरगि महाराज यांचे नातू म्हणजे नागप्पण्णा नीलवाणि. परमार्थ ही त्यांच्याकडे वंशपरंपरा आलेली संपत्ती होती. भाऊसाहेब महाराज उमदीकर हे निंबरगि महाराजांचे एक प्रमुख शिष्य. त्यांच्याकडून नागप्पांना लहानपणीच अनुग्रह मिळाला होता. भक्तिप्रसारासाठी भाऊसाहेब महाराज गावोगावी हिंडत. या परमार्थयात्रेत त्यांच्याबरोबर नागप्पा असायचेच. महाराज ठिकठिकाणी नामसप्ताह करीत. त्यांत नागप्पा अति उत्साहाने भाग घेत. तल्लख बुद्धी, कंठमाधुर्य, शुद्ध व स्पष्ट विचार, अद्‌भुत स्मरणशक्ती, स्वाभिमान अशा गुणसमुच्चयाने त्यांचे व्यक्तित्व प्रभावी झाले होते. सभारंजनाचे त्यांचे कौशल्य वाखाणण्याजोगे होते. दासबोध वाचायला बसल्यावर श्रोतृवर्ग कोणत्या प्रकारचा आहे हे अजमावून त्या मंडळींना रुचेल व पचेल असा समास ते अचूक निवडत. ते मृदंगवादनात निष्णात होते. कधीकधी पहाटे पाच वाजता काकडारती म्हणायला नागप्पांनी सुरवात केली की साधकांना भक्तिरसाची मेजवानी असे. त्या वेळी ते संस्कृत श्लोक, कन्नड व मराठी भूपाळ्या व हिंदी पदे सुश्राव्य रीतीने गात. हे मंगलाचरण तासभर चाले व मग कापूर लावून काकडारतीची समाप्ती होई.

गुरुदेव रा. द. रानडे व नागप्पा हे दोघे गुरुबंधू होते. दोघांचीही सद्‌गुरू भाऊसाहेब महाराजांवर दृढ निष्ठा होती. गुरुदेव उन्हाळ्याच्या सुट्टीत अलाहाबादहून निंबाळला आले की बरेच गुरुबंधू तिथे जमत. त्या वेळी नागप्पांचा निंबाळला कित्येक दिवस मुक्काम असे. एखादे वेळेस गुरुदेव व नागप्पा यांच्या सद्‌गुरुंविषयी गोष्टी सुरू होत व मग रात्रीच्या रात्री भुर्रकन उडून जात. नागप्पांचे वैशिष्ट्य म्हणजे महाराजांचे शब्द किंवा त्यांच्या वेळेस घडलेल्या घटना यत्किंचितही तिखटमीठ न लावता ते जशाच्या तशा सादर करीत. इतिहासाला याची जरूर असते. नागप्पांच्या तोंडून ऐकलेल्या गोष्टी सत्य असल्या पाहिजेत अशी जी गुरुदेवांची धारणा होती ती यामुळेच.

महाराजांच्या सांगण्यावरून नागप्पांनी पदांचा संग्रह करण्यास सुरवात केली असे समजते. महाराज लहान लहान मुलांना पदे पाठ करून ती गाण्यास सांगत. दुपारचे जेवण झाल्यावर बाळगोपाळांना जमवून एक तासभर त्यांच्याकडून पदे म्हणून घेण्याचा महाराजांचा परिपाठ होता. त्यात नागप्पांचा सक्रिय भाग असे. तसेच गावातील लोक महाराजांच्या पोथीला हजर असत व तेही पदे म्हणत. ही पदे नागप्पा जमवू लागले. प्रस्तुत संग्रहात जानपद गीते बहुसंख्येने दिसतात याचे कारण हेच. सामान्य माणसांच्या आवडी–निवडीला मानवतील अशी ही पदे असत. बहुजनसमाजाच्या जिभेवरील सगळीच पदे काही मोठ्या उच्च अभिरुचीची असावीत असे समजण्याचे

कारण नाही. पण हा विचार इथे गौण आहे. भजन, पोथी, किंवा पदे म्हणणे अशा लोकप्रिय कार्यक्रमांच्या साहाय्याने समाजाला परमार्थ–प्रवण करणे हा महाराजांचा उद्देश होता. ठिकठिकाणी म्हटल्या जाणाऱ्या या पदांचा नागप्पांचा संग्रह वाढत जाऊन त्यांचा एक गाथाच तयार झाला. त्यांनी ही खटपट केली नसती तर कित्येक पदे काळाच्या पोटात गडप झाली असती.

या गीतांचे नागप्पांनी वर्गीकरण केले आहे. प्रथम भाषावार म्हणजे कन्नड, मराठी, हिंदी पदे. मग एकेका भाषेतील पदे घेऊन त्यांतली नीतीची पदे, अनुभवपदे, स्त्रीगीते वेगवेगळी केली आहेत. कन्नड पदांमध्ये 'मनुष्याची छीःथू करणारी पदे' असा एक गमतीदार गट आहे. मराठी पदांत नीतीची पदे व अनुभवपदे प्रामुख्याने आहेत. संग्रहामध्ये संतकवींची पदे जशी आहेत तशीच महाराजांच्या शिष्यांनी केलेली काही पदेही आहेत. ज्या वेळेस कन्नड संतकवींच्या कृती किंवा जानपद गीते यांतले एक अक्षरसुद्धा छापले गेले नव्हते त्या वेळेस जमवलेली ही पदे म्हणजे कन्नड साहित्याला एक देणगीच होती. पदांची जपणूक करणारी नागप्पांची वही म्हणजे निंबरगी संप्रदायाच्या वाङ्मयीन इतिहासातला एक टप्पा आहे.

सुवाच्य अक्षरात वही लिहून काढण्याचे काम १९०२ च्या आसपास झाले असावे. कदाचित् महाराजांनी ही वही पाहिलीही असेल. आता या वहीला १०० वर्षे झाली. जुनेपणाने वहीच्या काही पानांचे कोपरे गायब झाले आहेत. कित्येक पाने तर अर्धीमुर्धी फाटून नाहीशी झाली आहेत. जी आहेत त्या पानांचेही हात लावला की तुकडे पडतात. वाळवीच्या प्रभावाने पानांवर लहानमोठी बरीचशी भोके पडून मजकूर गेला आहे. इतके असूनही असंख्य जखमा अंगावर वागवणाऱ्या या वहीतला शिल्लक राहिलेला भाग फार बोलका आहे. पदांचे पहिले एकदोन शब्द किंवा शेवटचे एकदोन शब्द वाचता आले की त्या पदाचे कुलगोत्र स्पष्ट होई. अलीकडे पुष्कळ कन्नड संतकवींची पदे पुस्तकरूपाने उपलब्ध झाली असल्याने थोड्या शब्दांवरूनही पूर्ण पदे शोधून काढता आली. तुकड्यांच्या स्वरूपात असलेल्या पदांचा पुनर्जन्म झाला.

छापील पदांत व वहीतील पदांत काही पाठभेद आढळले. बरीच अशुद्धेही होती. छापलेल्या पुस्तकांच्या साहाय्याने कन्नड पदे शुद्ध करून घेतली. तुकाराम व रामदास यांच्या गाथ्यावरून किंवा भक्तिमार्गप्रदीप व नवनीत या संग्रहांवरून मराठी पदे शुद्ध केली. काही शब्दच काय ओळीही वाचताच आल्या नाहीत. जिथे काही अर्थ लागेना तिथे छापील पाठ स्वीकारला. पान फाटल्यामुळे जो भाग पूर्ण नाहीसा झाला आहे तिथे ... अशी खूण घातली आहे. नागप्पांची मातृभाषा कन्नड असल्याने त्यांनी मराठी व हिंदी पदेसुद्धा कन्नड लिपीत लिहिली आहेत. शिवाय त्यांची सगळी भिस्त मौखिक परंपरेतून आलेल्या पदांवर असल्याने अशुद्ध रूपे अपरिहार्य आहेत. संतकवींच्या

नावांबद्दलही खात्री देता येत नाही. बहुतेक हिंदी पदे कबिरांच्या नावावर आहेत. जनार्दन स्वामींची पदे म्हटले असले तरी ती एकनाथांची धरायची. कारण एका जनार्दनीं ही एकनाथांची मुद्रिका आहे. ह्या वहीत काय, इतरत्रही कहत कबीर हा शिक्का मारून पदे कबिरांच्या गळ्यात बांधली जातात. एका मराठी पदात मीरा के प्रभु गिरिधर अशा ओळी आहेत ! प्रस्तुत पुस्तकात कन्नड, मराठी व हिंदी पदे वेगवेगळी छापली आहेत. ती नागप्पांच्या वहीतील अनुक्रमाप्रमाणे न छापता शोधण्याच्या सोयीसाठी अकारविल्हे छापली आहेत. प्रत्येक पदाच्या क्रमांकापुढे त्या त्या पदाचा नागप्पांच्या वहीतील पृष्ठक्रमांक (ना. व. पृ.) दिला आहे. नागप्पांच्या वहीतील एका पृष्ठाचा फोटोही घातला आहे.

सुमारे १५ वर्षापूर्वी नेहमीप्रमाणे मी निंबरगीला सप्ताहासाठी गेलो असताना नागप्पांचे थोरले चिरंजीव गुरुसिद्धप्पा यांनी नागप्पांची वही मला दिली. वहीतील पदे छापील पुस्तकांवरून पूर्ण करून वही पुस्तकरूपाने प्रसिद्ध करावी अशी इच्छा त्यांनी प्रकट केली. त्याप्रमाणे कामाला सुरवात केली. पण मध्ये अनेक अडचणींमुळे २-३ वर्षे तशीच गेली व आता आपल्या हातून हे काम होण्यासारखे नाही म्हणून वही त्यांना परत केली. १९९२ मध्ये कन्नड परमार्थसोपान हे कन्नड पदांचा मराठी अनुवाद केलेले पुस्तक प्रसिद्ध झाले. त्याच्या प्रस्तावनेत नागप्पांची थोडी माहिती व त्यांच्या हस्ताक्षराचे एक पान घातले होते. ते पाहून गुरुसिद्धप्पांना फार आनंद झाला. माझ्या वडिलांची तुम्ही मोठी सेवा केली असे म्हणून त्यांनी वही पुन्हा मला परत दिली व तुम्हीच ती प्रसिद्ध करा असा आग्रह धरला. मात्र त्यानंतर गुरुसिद्धप्पा थोड्याच दिवसात कैलासवासी झाले. त्यांनी माझ्यावर सोपवलेले काम मला सोडून देववेना. आता हे काम पुरे करायचेच असे ठरवले. युनिव्हर्सिटीतील पुस्तकांची मदत घेऊन व विद्वान मंडळींशी चर्चा करून अखेर मुद्रणप्रत तयार केली. खर्चाचा प्रश्न सुटला व आता नागप्पांची वही पुस्तकरूपाने बाहेर येत आहे. हे पाहण्यास गुरुसिद्धप्पा आपल्यामध्ये नाहीत याची खंत आहे. त्यांच्याबद्दल कृतज्ञता मनात आहे.

एका शतकापूर्वी पदे नुसती ऐकून, त्यांची नोंद करून, वर्गीकरण करून ती पदे उत्तम हस्ताक्षरात लिहून काढणाऱ्या व पदांची वही जिवापाड जपणाऱ्या नागप्पांना प्रणाम.

सोलापूर
दत्तजयंती
१९ डिसेंबर २००२

बी. आर. कुलकर्णी

ಕನ್ನಡ ಪದಗಳು

1. (ನಾಹಪು 66)

ಓಂ ನಮಃ ಶಿವಾಯನ್ನಿರೊ । ಒಯ್ಯಾರದಿ ॥ ಪ ॥
ಓಂ ನಮಃ ಶಿವಾಯೆಂದು ಅಜಹರಿಸುರರೆಲ್ಲ
ಮುನ್ನ ಕೈವಲ್ಯವ ಪಡೆದರೆಂಬುದ ಕೇಳಿ ॥ ಅ.ಪ ॥
ಜಪ ತಪ ವ್ರತವ್ಯಾತಕೆ, ತಾಮಸ ಎಂಬ
ಕಪಟ ಭ್ರಾಂತಿಗಳ್ಯಾತಕೆ ।
ಗುಪ್ತದಿ ಗುರುವಿನ ಚರಣಗಳ ಸ್ಮರಿಸಿ
ಮತಿಹೀನರಾಗದೆ ಹಗಲಿರುಳೆನ್ನದೆ ॥ 1 ॥
ಮಾಸ ಪಕ್ಷಗಳ್ಯಾತಕೆ ಉಪವಾಸದಿ
ದೇಹ ದಂಡನವ್ಯಾತಕೆ ।
ನಾಶವಾಗುವ ದೇಹದ ಧ್ಯಾಸವ ಬಿಡು ತಮ್ಮ
ಈಶನ ನೆನೆಯೊ ನೀ ಮೋಸವ ಹೊಂದದೆ ॥ 2 ॥
ಬಿಡದೆ ಇನ್ನಡಿಗಡಿಗೆ ನೀರಲಕೇರಿ
ಮೃಡ ಪಂಚಾಕ್ಷರಿ ನುಡಿಯ ।
ಬಿಡದೇಳು ಕೋಟಿ ಮಂತ್ರಕೆ ತಾಯಿ ಒಡಲಿದು
ಬೆಡಗಿನ ಶಿವ ನಾಮ ದೃಢದಿಂದ ಭಜಿಸಿರೋ ॥ 3 ॥

2. (ನಾಹಪು 167)

ಓಂ ನಾಮ ಕಾಯುವದು ನಾಮದ ಬಲವು ॥ ಪ ॥
ಪ್ರಲ್ಹಾದನ ಕಾಯ್ದಂಥ ಪಾವನ ನಾಮ
ಅಜಾಮಿಳಗೆ ಬಲ ಅಚ್ಯುತ ನಾಮ
ಸುರರನ್ನು ಸಂತೋಷ ಬಡಿಸಿದ ನಾಮ
ದ್ರೌಪದಿಯಭಿಮಾನ ಕಾಯ್ದಂಥ ನಾಮ ॥ 1 ॥
ಪಕ್ಷಿಯ ಪುತ್ರನ ರಕ್ಷಿಸಿದ ನಾಮ
ಪಾರ್ಥನ ಪಂಥವ ಗೆಲಿಸಿದ ನಾಮ ।
ಪರಾಶರಾದಿಗಳಿಗೆ ಒದಗಿದ ನಾಮ
ಪನ್ನಗ ಶಯನನ ಪರಿಪೂರ್ಣ ನಾಮ ॥ 2 ॥
ಕರಿರಾಜನ ಕಾಯ್ದಂಥ ಕರುಣದ ನಾಮ
ಕಂದನ ಕಕುಲಾತಿ ಕೇಳಿದ ನಾಮ ।
ಭವದ ಬಂಧನ ಬಿಡಿಸಿದ ನಾಮ
ಗುರುಲಿಂಗ ಜಂಗಮ ಘನಪುಣ್ಯ ನಾಮ ॥ 3 ॥

3. (ನಾಹಪು 96)

ಅಕ್ಕ ತಂಗೇರು ನಾವು, ಅಕ್ಕರತೀಲೆ ಹೋಗಿ
ಹೊಕ್ಕು ನೋಡುಣು ರಾಮತೀರ್ಥ ।
ಹುಟ್ಟಿ ಬಂದದಕ ಇದು ಒಂದು ಸಾರ್ಥ ॥ ಪ ॥
ಮೂರು ಗುಂಡು ಹೂಡಿ ನೀರು ಹಂಡೆಕೆ ಹಾಕಿ
ಸರ್ವರು ಮಾಡುಣು ಜಳಕ
ದುರ್ಗುಣ ಕಟಿಗೆಯ ಮುರಿದು ಒಲ್ಯಾಗ ಹಾಕಿ
ಉರಿದು ಮಾಡುಣು ಎಲ್ಲ ಪಾಕ ।
ನರದೇಹ ತೊಳಕೊಂಡು ನಿರ್ಮಲರಾಗೂಣು
ಜರದ ಸೆಲ್ಲೆಯನುಟ್ಟು ಚೊಕ್ಕ ॥
ಪರಮ ಧ್ಯಾನದ ಕಂಚುಕವ ತೊಟ್ಟು
ಹರನ ವಿಭೂತಿ ಫಣೆಯಲ್ಲಿ ಕುಂಕುಮ ಬಟ್ಟು
ಪೂರ್ಣ ನಾಸಿಕ ಕೊನೆಯಲ್ಲಿ ಮೂಗುತಿಟ್ಟು
ಮಿಕ್ಕಾದ ಡಾಗಿನ ಲೆಕ್ಕಿಲ್ಲದೆ ಇಟ್ಟುಕೊಂಡು
ಕೂಡಿ ಹೋಗೂಣು ಇಬ್ಬರು ಜತ್ತ ॥ 1 ॥
ಹೆಚ್ಚಿನ ಸಖಿಯರು ಅಚ್ಚ ಮುತ್ತೈದೆಯರು
ಪಂಚ ತತ್ತ್ವದಾರುತಿ
ಸ್ವಚ್ಛಾಗಿ ತುಂಬೂಣು, ಸಂಚಿತೆಣ್ಣೆಯ ಹಾಕಿ
ಚಾಚಿ ಇಡಾ ಪಿಂಗಳ ಬತ್ತಿ
ಹಚ್ಚೂಣು ಎಡ ಬಲ ಬಿಚ್ಚಿ ಬೆಳಗುವಂಥ
ಅಚ್ಚ ಸೂರ್ಯ ಚಂದ್ರ ಜ್ಯೋತಿ ॥
ಉಚ್ಚ ರತ್ನ ಕಳಸ ನಡು ಮಧ್ಯದಲ್ಲಿ
ಸುಚಿತ್ತ ಸಖಿಯರ ಹಸ್ತದಲ್ಲಿ ॥
ನಿಶ್ಚಿಂತ್ಯಾಗಿ ಹೋಗೂಣು ಸಾಲಿ ಮೇಲಿ
ಮಿಕ್ಕ ದೇಶವನೆಲ್ಲ ಹೊಕ್ಕು ನೋಡೂಣವ್ವಾ ।
ಆರು ನೆಲಿಯನೇರಿ ನಿಂತು ॥ 2 ॥
ಒಂಬತ್ತು ಬಾಗಿಲ ತೊಂಬತ್ತಾರು ಅಂಗುಲ
ಕೊಂಬು ಕೋಣೆಯೊಳು ಬೆಳಗ
ಇಂಬಾದ ಗುಡಿಯೊಳು ತುಂಬಿ ಸೂಸಲಾಡು
ಸಂಬಳ ತಾಳ ಮೃದಂಗ
ಅಂಬರದೊಳು ನಿರಾಲಂಬನ ಸೇವೆಗೆ
ಬಿಂಬಿಸಿ ಆಗೂಣು ಬೆರಗ

ನಂಬಿ ಸರ್ವರು ಆರುತಿಯನ್ನು ಹಿಡಿದು
ಶಂಭು ಕರ್ಪುರ ಬೆಳಗಿ ನಮ್ಮ ಕಾಯಿ ಒಡೆದು
ರಂಭೇರೆಲ್ಲ ಜೀವನ್ಮುಕ್ತಿಯನು ಪಡೆದು
ದೇಶದೊಳಗಧಿಕ ರಾಮೇಶ್ವರ
ಕೂಡಿ ಹೋಗೂಣು ಬಾರದತ್ತ ॥ 3 ॥

4. (ನಾಹಪು 172)

ಅಂದಿಲ್ಲಾ ಸ್ವಾಮಿ ಇಂದಿಲ್ಲಾ ॥ ಪ ॥
ಎಂದಿಗಾದರು ನಿಮ್ಮನಗಲಿ ನಾ ಇಲ್ಲ ॥ ಅ.ಪ. ॥
ನಿರ್ಬಯಲ ನೀನು ನಿರ್ವಿಕಾರನು ನಾನು
ಸಗುಣರೂಪ ನೀನು ಶರಣು ಮಾಡುವೆ ನಾನು ॥ 1 ॥
ಪಂಚವದನ ನೀನು ಪಾದ ನಂಬಿದೆ ನಾನು
ಜಗಭರಿತ ನೀನು ಜಗದೊಳಗೆ ನಾನು ॥ 2 ॥
ಪ್ರಣಮ ಸ್ವರೂಪ ನೀನು ಪಠಿಸಿ ನೋಡುವೆ ನಾನು
ಗುರುಲಿಂಗ ಜಂಗಮ ನೀನೇ ನಾನೂ ನೀನೇ ॥ 3 ॥

5. (ನಾಹಪು 63)

ಅರಿತ ಗುರುವಿನ ಪಾದ ಹುಡುಕಿ ಹೊಂದು ಮುಕ್ತಿಯಿಂದು
ಮರೆತ ಗುರುವಿನ ಸಂಗ ಕೇಡು ಇಂದು ನರಕ ಮುಂದು ॥ ಪ ॥
ಒಳ್ಳೆ ನಾವಿನೊಳು ಕಲ್ಲು ಹಾಕಿಸುವದು ಅದು ದಾಟಿಸುವದು ।
ಕಲ್ಲಿಗೆ ಕಲ್ಲು ಕಟ್ಟಿದರಲ್ಲೆ ಮುಳುಗುವದು ಅದು
ಮುಂದಕೆ ಹೋಗದು ॥ 1 ॥
ಜಾರುವವನ ಕಾಲು ಹಿಡಿದರೆ ತಾನು ಜಾರುವ ಜಾರಿ
ಮೇಲೆ ಬೀಳುವ ।
ಘೋರ ಗುರುವಿನ ಸಂಗ ಹಿಡಿದು ಭ್ರಷ್ಟನಾಗುವ
ಮುಂದೆ ಕೆಟ್ಟು ಹೋಗುವ ॥ 2 ॥
ತಾನು ಮೂರ್ಖ ಅವನು ಮೂರ್ಖ ಕೂಡಲೊಂದು
ಮತ್ತು ಕೇಡು ಇಂದು ।
ಜ್ಞಾನಿ ಚಿದಾನಂದನ ಪಾದ ಹುಡುಕಿ ಹೊಂದು
ಮುಕ್ತಿ ಇಂದು ॥ 3 ॥

6. (ನಾಹಪು 14)

ಅರ್ತಿಯಾಗಿ ಬನ್ನಿ ಅರಿತು ನೋಡುವ ಗುರು ಮೂರ್ತಿಯಿಂದ
ನಿರ್ತವಾಗಿ ಪೂರ್ಣ ಬೆರೆತು ಕೂಡುವ ಬನ್ನಿ ಗುರ್ತದಿಂದ ॥ ಪ ॥
ಸೂರ್ಯನಿಲ್ಲದೆ ಸುಪ್ರಕಾಶ ತುಂಬಿದೆ ಹೇಳಲೇನಾ ।
ತುರಿಯಾವಸ್ಥೆಯಲ್ಲಿ ಬೆರೆತು ಕೂಡುವ ಜ್ಞಾನಿ ಬಲ್ಲ ಖೂನ
ಬರಿಯ ಮಾತನಾಡಿ ಹೊರೆಯ ಹೇಳುವದಲ್ಲ ಅರಿವು ಸ್ಥಾನಾ
ಪರಿಯಾಯದಿಂದಲಿ ಪರಿಣಮಿಸಿ ನೋಡೊ ಪರಮ ಪ್ರಾಣಾ ॥ 1 ॥
ಚಂದ್ರನಿಲ್ಲದೆ ಬೆಳದಿಂಗಳ ಬಿದ್ದದೆ ಬಹು ಬಹಳ
ಇಂದ್ರಿಯಾದಿಗಳೆಲ್ಲ ಹರುಷಾಗಿ ನೋಡುವವು ಸರ್ವ ಕಾಲ ।
ಸುಂದರವಾದ ಸುವಸ್ತುವೊಂದೊಳಗದ ಬಲು ಮೇಲಾ ।
ಸಾಂದ್ರವಾದ ಸುಖ ತುಂಬಿ ತುಳುಕುತದೆ ಥಳ ಥಳಾ ॥ 2 ॥
ಮನದ ಕೊನೆಯಲ್ಲಿದ್ದ ಘನ ವಸ್ತು ನೋಡಿರಿ ನೆನೆದು ಬೇಗಾ
ಅನುಭವಿಗಳಿಗಿದು ಅನುಕೂಲವಾಗಿದೆ ಬ್ರಹ್ಮ ಭೋಗಾ ।
ನಾನೀನೆಂಬುವ ಮಾತು ಏನು ತಾಳುವದಲ್ಲ ರಾಜಯೋಗ
ಅನುದಿನ ಮಹಿಪತಿ ತಾನೇ ತಾನಾದನು ಸದ್ಗುರುವೀಗ ॥ 3 ॥

7. (ನಾಹಪು 168)

ಅಲ್ಪ ವಿದ್ಯೆಯ ಕವಿ ಕಲಿದಾಡೊ ಮನುಜಗೆ
ಮದ ಗರ್ವ ಬಹಳಿದೆ
ಹಂಸನ ಸರಿ ವಾಯಸ ಹಾರಿ ತನ್ನ ಪಂಥ ಗೆಲಿಸ ಬಲ್ಲದೆ ॥ 1 ॥
ತನುವೆಲ್ಲ ನಯನಗಳಿದ್ದರೆ ಹೊರಸು
ದೇವೇಂದ್ರನ ಸರಿ ಬಹುದೇ । ಹದ್ದು
ಹಾರಿ ಸುರಪತಿಯ ಸೋಲಿಸಿ ಸುಧಾರಸ ತರಬಲ್ಲದೆ ॥ 2 ॥
ಕೊರವಿಯರ ಮನಿಯ ಕೋತಿ ದ್ರೋಣಾಗಿರಿಯನೆತ್ತ ಬಲ್ಲದೆ ॥
ಗುರುಲಿಂಗ ಜಂಗಮ ಚರಣಾಮೃತ ಸಾರ
ಮರೆವ ಮೂರ್ಖ ಬಲ್ಲನೇ ॥ 3 ॥

8. (ನಾಹಪು 110)

ಅಳತದ ಕೂಸು ಅಳತದ ॥ ಪ ॥
ಈ ಭವದೊಳು ಬಿದ್ದು ಬರಲಾರೆನೆಂದು ॥ ಅ.ಪ ॥

ಅಂಬೇಗಾಲೂರುತ ಕುಂಬಿಣಿ ತಿರುಗುತ
ಡೊಂಬನಂಥ ಹೊಟ್ಟೆ ಎಳೆಯಲಾರೆನೆಂದು ॥ 1 ॥
ಕಂದನಾಗಿ ಬಂದು ಹಿಂದು ಮುಂದರಿಯದೆ
ಇಂದುಧರನ ರೂಪ ಕಣ್ಣೊಳಗಿಟ್ಟುಕೊಂಡು ॥ 2 ॥
ಜನನ ಮರಣ ಹುಟ್ಟು ಮುರಿದು ಮೂಲ್ಯಾಗಿಟ್ಟು
ಚಿದಾನಂದ ಸ್ವಾಮಿನ್ನ ಕೂಡಿಕೊಂಡೆನೆಂದು ॥ 3 ॥

9. (ನಾಹಪು 102)

ಆನಂದವಾದ ಚಿದ್ಘನ ವಸ್ತು ನಾ ಕಂಡೆ
ಭಾನುವಿಲ್ಲದ ಬಿಸಲೇನಮ್ಮ ॥ ಪ ॥
ತಾನು ಅಲ್ಲದೆ ತನ್ನ ತವರೂರ ಮನೆಯೊಳು
ತಾನು ಮಾಡಿದ ಪುಣ್ಯ ತನಗಮ್ಮಾ ॥ ಅ.ಪ. ॥
ಕುಂಡಲದೊಳಗೊಂದು ನೀಲಗನ್ನಡಿಯಿಟ್ಟು
ಮಂಡಲದೊಳಗಾಡುವದೇನಮ್ಮಾ ।
ಸೇರಿ ಉನ್ಮನಿಯೊಳು ಗುರುವಿನ ಪುಣ್ಯದಿ
ಘನ ವಸ್ತು ದೊರಕಿತು ಎನಗಮ್ಮಾ ॥ 1 ॥
ನಡು ನೀರ ಮಧ್ಯದಿ ವಟವೃಕ್ಷ ನಾ ಕಂಡೆ
ಹೂವಿಲ್ಲ ಮಿಡಿಗಾಯಿ ಹಣ್ಣಮ್ಮಾ
ಅಖಂಡ ವನದೊಳು ಅಮೃತ ಕೊಡ ಉಕ್ಕಿ
ಉಂಡುಂಡು ಸುಖಿಸಿ ಬಾಳುವೆನಮ್ಮಾ ॥ 2 ॥
ಕೈಲಾಸ ಭೂಮಿ ಅಲ್ಲ ಕನಕ ಭೂಷಣವಲ್ಲ
ಬೈಲೊಳಗಾಡುವದೇನಮ್ಮಾ
ವರ ಕವಿ ನಾಗಲಿಂಗ ಗುರುವಿನ ಪುಣ್ಯದಿ
ಸ್ಥಿರ ಮುಕ್ತಿ ದೊರಕಿತು ಎನಗಮ್ಮಾ ॥ 3 ॥

10. (ನಾಹಪು 8)

ಆರಿಗೆ ಕಾಣದೀ ಮುತ್ತು । ಗುರುವಿನ ಕರುಣಾಗದೆ
ತಿಳಿಯದು ಗೊತ್ತು ॥ ಪ ॥
ಕಾಷ್ಠದೊಳಗ್ನಿಯಂತಿಹುದು । ಅದು ।
ಕೋಟಿ ಸೂರ್ಯರ ಪ್ರಭೆ ಮೀಟಾಗಿಹುದು ॥

ನೋಟಕ್ಕೆ ಅದು ಕಾಂಬುವದು ನಿಜ ।
ನಿಷ್ಠೆಯುಳ್ಳವರಿಗೆ ಘಟ್ಟಿಗೊಂಡಿಹುದು ॥ 1 ॥
ಕತ್ತಲೆಯೊಳು ಕಾಂಬುವದು । ಇದು ।
ಎತ್ತ ನೋಡಲು ಪ್ರಭೆಯೆತ್ತಿ ತೋರುವದು ।
ನೆತ್ತಿಯೊಳು ಗೊತ್ತು ಮಾಡಿಹುದು । ಅದು ।
ಉತ್ತರ ಉನ್ಮನಿ ಸೇರಿಕೊಂಡಿಹುದು ॥ 2 ॥
ಸೂತ್ರದ ಬಲವಿರಬೇಕು । ಆ ।
ಸೂತ್ರವ ಹಿಡಿದು ತಾ ಬಂದಿರ ಬೇಕು ।
ತಾಪತ್ರಿಗುಣ ಅಳಿಯ ಬೇಕು । ಸು- ।
ಪಾತ್ರ ಸುಜ್ಞಾನದ ನೆಲೆ ತಿಳಿಯ ಬೇಕು ॥ 3 ॥
ಉದಯಾಸ್ತವೆರಡದಕಿಲ್ಲ । ವೇದ ।
ಶ್ರುತಿಶಾಸ್ತ್ರ ಆಗಮಕದು ನಿಲಕಿಲ್ಲಾ ।
ತನ್ನೊಳು ತಾ ತಿಳಿಯಲಿಲ್ಲಾ । ಇದು ।
ಕಲ್ಲು ಮೆತ್ತಗೆ ಮಾಡುವವನೆ ಬಲ್ಲಾ ॥ 4 ॥
ರೇವಗಿ ಪುರಕೆ ಹೋಗ ಬೇಕು । ದೊಡ್ಡ ।
ಮಹಾಮೇರು ಪರ್ವತವನು ಹತ್ತಬೇಕು ।
ಅಭಿಮಾನದಿ ಗವಿ ಹೊಗಬೇಕು । ದೊಡ್ಡ ।
ರೇವಣಸಿದ್ಧಲಿಂಗನ ನೋಡಬೇಕು ॥ 5 ॥

11. (ನಾಹಪು 39)

ಆವ ಕುಲವಾದರೇನು । ಆತ್ಮದನು - ।
ಭಾವ ತಿಳಿದವ ಮುಕ್ತ ಮರುಳೆ ॥ ಪ ॥
ಅಸ ಡೊಂಕ ಕಬ್ಬಿರಲು । ಒಳಗಿನ ।
ರಸ ಬ್ಯಾರೆ ಅಸ ಡೊಂಕವೆ ಮರುಳೆ ।
ವಿಷಯ ಬವಣೆಯನಳಿಸಿ । ಗುರುಭಕ್ತಿ ।
ಹಸನಾಗಿ ಮಾಡು ಕಂಡ್ಯ ಮರುಳೆ ॥ 1 ॥
ನಾನಾ ವರ್ಣದ ಆಕಳು । ಕ್ಷೀರದೊಳು
ನಾನಾ ವರ್ಣಗಳುಂಟೆ ಮರುಳೆ
ನಾನಾ ಸಾಯಸವ ಬಿಟ್ಟು । ನೀ ಹೋಗಿ
ಜ್ಞಾನಿಗಳ ಕೂಡು ಕಂಡ್ಯ ಮರುಳೆ ॥ 2 ॥

ಕುಲದ ಮೇಲೆ ಹೋಗಬೇಡ । ಕುಲವಿಲ್ಲ ।
ಛಲವಿಲ್ಲ ಜ್ಞಾನಿಗಳಿಗೆ ಮರುಳೆ ।
ತಿಳಿದು ನಿನ್ನೊಳು ನೋಡಿಕೊ । ಸುಲಭದಲಿ ।
ಹೇಳಿದನು ಜ್ಞಾನಬೋಧ ಮರುಳೆ ॥ 3 ॥

12. (ನಾಹಪು 18)

ಆವಾಗ ಶಿವಮಂತ್ರ ನೆನವಾಗಿ । ಗುರು
ದೇವ ತೋರಿದ ಗೂತ್ತು ಗುರಿಯಾಗಿ ॥ ಪ ॥
ಆಸನ ಬಲಿದೂರ್ಧ್ವಮುಖವಾಗಿ । ತುದಿ ।
ನಾಸಿಕದಲ್ಲಿ ಅನಿಮಿಷನಾಗಿ ॥
ಸೂಸುವ ಮನ ಒಬ್ಬುಳಿಯಾಗಿ । ಶಿವ-
ಘೋಷದೊಳಗೆ ಪೊಕ್ಕು ಲಯವಾಗಿ ॥ 1 ॥
ಚಂದ್ರಸೂರ್ಯರೊಂದೆ ರೂಪಾಗಿ । ನಾ-।
ಗೇಂದ್ರನ ಫಣಿ ಎತ್ತಿ ಮೇಲಾಗಿ ।
ರನ್ನ ಮಾಣಿಕ ಮುತ್ತು ಬೆಲೆಯಾಗಿ । ದೇ-।
ವೇಂದ್ರನ ಸಭೆಯೆಲ್ಲಾ ಬೆಳಕಾಗಿ ॥ 2 ॥
ಬಹ್ಮನಾಳ ವಿಷ್ಣುರೂಪಾಗಿ । ಪರ ।
ಬ್ರಹ್ಮ ಜ್ಯೋತಿರ್ಮಯ ಲಿಂಗಾಗಿ ॥
ನಿರ್ಮಲ ನಿಜಸುಖ ಘನವಾಗಿ । ಚಿದ್ -
ಬ್ರಹ್ಮಾಂಡ ಬೆರಟೂರ ಪತಿಯಾಗಿ ॥ 3 ॥

13. (ನಾಹಪು 52)

ಆಶ್ರಮವೆಲ್ಲಿಯದು ಯೋಗಿಗೆ । ಪ ॥
ಆಶ್ರಮ ಸುಖವನು ಭೋಗಿಸಿದಾತಗೆ ॥ ಅ.ಪ ॥
ನಾಡಿ ಎರಡು ಬಿಗಿದು । ದೇಹದ ನಾಡಿ ಎರಡು
ಸೆಳೆದು । ನಾಡಿಯೊಳಗೆ ಸುನಾಡಿ ಇರುವದು ಕಂಡು ।
ನಾಡಿಯ ಪಥದೊಳು ಮುಳುಗಿದ ಸಾಂಬಗೆ ॥ 1 ॥
ಮೂಗಿನ ಪಥ ಮಾಡಿ । ದಿಟ್ಟಿಸಿ ಮೂಗಿನ ಕೊನೆ ನೋಡಿ ।
ಮೂಗಿನೊಳಗೆ ಸುಮೂಗ ಇರುವದು ಕಂಡು ।
ಮೂಗಿನ ಥಡಿಯೊಳು ಮುಳುಗಿದ ಯೋಗಿಗೆ ॥ 2 ॥

ರಂಧ್ರ ಎರಡು ಮುಚ್ಚಿ । ದೇಹದ ಎರಡು ರಂಧ್ರ ಹಚ್ಚಿ
ರಂಧ್ರದೊಳಗೆ ಬ್ರಹ್ಮರಂಧ್ರ ತೋರಿದ ಮ್ಯಾಲೆ ।
ಬ್ರಹ್ಮ ಚಿದಾನಂದ ಗುರು ದೊರೆತಾತಗೆ ॥ 3 ॥

14. (ನಾಹಪು 29)

ಇಕೋ ನಮ್ಮ ಸ್ವಾಮಿ । ಸರ್ವಾಂತರ್ಯಾಮಿ ।
ಪ್ರಕಟ ಸಹಸ್ರ ನಾಮಿ ಭಕ್ತ ಜನ ಪ್ರೇಮಿ ॥ ಪ ॥
ಒಳಗೆ ನೋಡಿ ನಿಮ್ಮ ಹೊಳೆವ ಪರಬ್ರಹ್ಮ
ತಿಳಿಯಲಿಕ್ಕೆ ನೋಡಿ ವರ್ಮ । ಅಳಿಯ ಬೇಕು ಹಮ್ಮ ॥ 1 ॥
ಸ್ವಸ್ಥಮನ ಮಾಡಿ ವಸ್ತು ಇದೆ ನೋಡಿ
ಅಸ್ತವ್ಯಸ್ತ ಬೇಡಿ । ಸಮಸ್ತ ಮನ ಗೂಡಿ ॥ 2 ॥
ಬಿಟ್ಟು ನಿಜ ಖೂನಾ । ಕೆಟ್ಟು ಹೋಗುದೇನಾ ।
ಗುಟ್ಟು ಮಹಿಪತಿಗಿದೆ ಮುಟ್ಟೊ ಗುರು ಧ್ಯಾನ ॥ 3 ॥

15. (ನಾಹಪು 182)

ಇದು ಏನನುಭವ ಮಂಟಪವೊ । ಶಿವ ।
ಆತ್ಮನಿರುವದಿದು ಐಶ್ವರ್ಯ ಠಾವೋ ॥ ಪ ॥
ಆಸನ ಹಾಕುವ ಮಂಟಪವೊ । ಗುರು ।
ಘೋಷದೊಳಗೆ ಶ್ವಾಸ ಆಡು ಮಂಟಪವೊ
ತಿಳಿಯಲಿಲ್ಲೀ ಮನಿ ಕೀಲೋ । ಇದು ।
ತಿಳಿಯದಿದ್ದರದು ದೊರಕದ ಪೂರೊ ॥ 1 ॥
ಒಂಬತ್ತು ಬಾಗಿಲ ಮಾಡಿ ಮೋಹರ । ಅಲ್ಲಿ ।
ತುಂಬಿ ತುಳುಕತಾನೊ ಗುರು ಮಹಾಧೀರ ।
ಮಂಟಪದ ಮನಿ ಭಾರ । ಸಾಂಬ ।
ಇರುವದು ಕೈಲಾಸ ಪೂರ ॥ 2 ॥
ಮಂಟಪದ ಮನಿ ಮುಂದೆ । ಅಲ್ಲಿ ।
ಆಗುವದೇನೇನು ಗುರುರಾಯನಿಂದೆ ।
ಮೈ ಮರೆದು ಮನ ಸೇರಿತಲ್ಲೆ । ದೇವ ।
ಸುಲಭವಾದ ಪಾದ ಕಂಡು ಶರಣೆಂದೆ ॥ 3 ॥
ಅಂತರ ತೂಗು ಮಂಟಪವೊ । ಗುರು ।

ಮಂತ್ರದ ಬಲದಿಂದ ಮೇಲಕ್ಕೇರುವದೊ
ಏನು ಹೇಳಲಿ ಅಲ್ಲಿಯ ಸೊಬಗೊ । ತಿರುಗಿ।
ಬಾರದಂತೆ ಎನಗೆ ತೋರಿದಾಸರವೋ ॥ 4 ॥
ಗಂಗಾದ್ವಾರವು ತುಂಬಿ ನಡೆದ । ರಂಬಿ।
ಹೃದಯದೊಳಿರುವಂಥ ಲಿಂಗ ಪೂಜೆಯಿದು ।
ಸಂಭ್ರಮ ಸಾಂಬಗೆ ಬೆರೆದು । ಈ।
ಬಂಗಾರ ಗುಡಿ ಮೇಲೆ ಘಂಟಿ ಘಳಲೆಂದು ॥ 5 ॥
ಎಳೆಯ ಸಣ್ಣ ಸುಳಿ ಬೆಳಕೊ । ಅದರ।
ಒಳಗೆ ಕಂಡೆನೊ ಸಂಭ್ರಮ ರೂಪೊ ।
ಮಲ್ಲಿಗೆ ಹೂವಿನ ಮಳೆಗರಿತು । ತಂದೆ।
ತಿಳಿಯಲಿಲ್ಲ ಯಾರಿಗೆ ನಿನ್ನ ಮಗನಾಟೊ ॥ 6 ॥
ದೇಶದೊಳಧಿಕವಾದ । ವಾಸ ಉಮದಿ।
ಗುರುವಿನ ಮಂಟಪ ಮೋಜ
ತಿಳಿದವನೆ ಗಳಿಸಿಕೊಂಡು ಹೋದ । ನಮ್ಮ।
ಸತ್ಯ ಸಾಧುರಿಗೆ ತಿಳಿವುದೊ ಭೇದ ॥ 7 ॥

16. (ನಾಹಪು 51)

ಇದು ತನ್ನ ಭೋಗ ಬಿಡದು ॥ ಪ ॥
ಗಿರಿ ಗವ್ಹರ ಸೇರಿದರೇನು
ಗುರುಮಂತ್ರವ ಜಪಿಸಿದರೇನು ।
ಸಿರಿ ಉಳ್ಳವಗೆ ಶರಣೆಂದರೇನು
ಕರಿವರದಾತ ಕರುಣೆಸದನಕ ॥ 1 ॥
ವ್ರತ ನೇಮಗಳಾಚರಿಸಿದರೇನು
ಶತ ಚಂಡಿ ಜಪ ಮಾಡಿದರೇನು ।
ತನ್ನ ದೋಷ ತಾ ಬೀರಿದರೇನು
ಘನ ಮನಸಿನ ವಿಭು ಒಲಿಯದನಕ ॥ 2 ॥
ಮನಿ ಮನಿ ತಾ ಹಲಬಿದರೇನು ।
ವನದಿಂದೊಳಗೆ ಚಲಿಸಿದರೇನು ।
ಅತಿ ಚತುರಾಯಿ ತೋರಿದರೇನು ।
ಯದುಪತಿ ರುಕ್ಮ ಒಲಿಯದನಕ ॥ 3 ॥

17. (ನಾಹಪು 43)

ಇದು ಭಾಗ್ಯವಿದು ಭಾಗ್ಯವಿದು ಭಾಗ್ಯವಯ್ಯ ॥ ಪ ॥
ಪದುಮನಾಭನ ಪಾದ ಭಜನೆ ಸುಖವಯ್ಯ ॥ ಅ.ಪ. ॥
ಕಲ್ಲಾಗಿ ಇರಬೇಕು ಕಠಿಣ ಭವ ತೊರೆಯೊಳಗೆ
ಬಿಲ್ಲಾಗಿ ಇರಬೇಕು ಬಲ್ಲವರೊಳು ।
ಮೆಲ್ಲನೆ ಮಾಧವನ ಮನವ ಮೆಚ್ಚಿಸ ಬೇಕು
ಬೆಲ್ಲಾಗಿ ಇರಬೇಕು ಬಂಧು ಜನರೊಳಗೆ ॥ 1 ॥
ಬುದ್ಧಿಯಿಂದಲಿ ಮನವ ತಿದ್ದುತ್ತಲಿರಬೇಕು
ಮುದ್ದಾಗಿ ಇರಬೇಕು ಮುನಿ ಯೋಗಿಗಳಿಗೆ ।
ಮಧ್ವ ಮತಾಬ್ಧಿಯೊಳು ಮೀನನಾಗಿರಬೇಕು
ಶುದ್ಧವಾಗಿರಬೇಕು ಕರಣ ತ್ರಯಂಗಳಲಿ ॥ 2 ॥
ವಿಷಯ ಭೋಗದ ತೃಣಕೆ ಉರಿಯಾಗಿ ಇರಬೇಕು
ವಸತಿಯೊಳು ದಿನ ದಿನದಿ ಹರಿ ಎನಲಿಬೇಕು ।
ವಸುಧೆಯೊಳಗೆ ನಮ್ಮ ಪುರಂದರ ವಿಠ್ಠಲನ
ಅನುದಿನ ನೆನೆ ನೆನೆದು ಸುಖಿಯಾಗ ಬೇಕು ॥ 3 ॥

18. (ನಾಹಪು 11)

ಇಂಥ ರತ್ನವ ಕಂಡೆನೆನ್ನಯ ।
ಅಂತರಂಗದ ಕೊನೆಯಲ್ಲಿ ॥ ಪ ॥
ಶಾಂತ ಮೂರುತಿ ಗುರುವಿನಿಂದೆ
ಚಿಂತೆ ಹರಿದು ಬಯಲು ದೋರಿತು ॥ ಅ.ಪ ॥
ತನುವ ದ್ವಾರವ ಬಲಿದು ನೋಡಲು
ನೆನವು ಘನದೊಳು ಬೆರೆಯಲು
ವಿನತ ಕುಂಡಲಿ ಊರ್ಧ್ವವಾಗಲು
ಘನದ ಬೆಳಗಿನ ಬೆಳಕು ತೋರಿತು ॥ 1 ॥
ಹಸರು ಹಳದಿ ಬಿಳಿದು ಕೆಂಪು
ಕುಶಲ ಮಂಜಿಟ ಕಪಿಲ ವರ್ಣದ
ನಾಸಿಯ ಕೆಂಪು ಎಳೆಯ ಮಿಂಚು
ರವಿ ಶಶಿಯ ಪ್ರಭೆ ಕೋಟಿ ಬೆಳಕಿನ ॥ 2 ॥
ಬಯಲಿನೊಳು ಬಯಲು ಬೆರೆಯಲು
ಬಯಲಿನೊಳು ಜ್ಯೋತಿ ತುಂಬಿ ತುಳುಕಲು

ಪೊಯಿಲು ಮಾಡಿದ ಮುಕ್ತ ಪ್ರಣಮನು
ಬಯಲು ಪ್ರಣಮದ ಘೋಷ ತೋರಿತು ॥ 3 ॥

19. (ನಾಹಪು 25)

ಇಂಥಾದೆಲ್ಲಿದೆ ತಾ ನೋಡಿ । ಸತ್ಸಂಗದ ಸುಖಾ ॥ ಪ ॥
ಒಂದೊಂದು ಪರಿ ಕೇಳಿಸುವ
ಹನ್ನೊಂದರ ಮೇಲಿನ್ನೊಂದರ ಘೋಷಾ ।
ಧಿಮಿ ಧಿಮಿ ಧಿಮಿ ಧಿಮಿ ಧಿಮಿ ಧಿಮಿ ಧಿಮಿ
ಧಿಮಿ ಗುಡುತದೆ ಆನಂದದ ಘೋಷಾ ॥ 1 ॥
ಉದಯಾಸ್ತಿಲ್ಲದ ಬೆಳಗಿನ ಪ್ರಭೆಯು
ತುದಿ ಮೊದಲಿಲ್ಲದೆ ತುಂಬಿತು ಪೂರ್ಣ
ಬುಧಜನರನುದಿನ ಸೇವಿಸುತಿರುವ
ಸದಮಲವಾದ ಸದಾ ಸವಿ ಸುಖಾ ॥ 2 ॥
ವಿಹಿತ ವಿವೇಕದ ಅನುಭವ ಗೂಡಿ
ಬಾಹ್ಯಾಂತರದಲಿ ಘನ ತೋರುತಲಿಹ
ಸ್ವಹಿತಸುಖದ ಸುಧಾರಸ ಗರೆವ
ಮಹಿಪತಿ ಗುರು ಕರುಣದ ಕೌತುಕ ॥ 3 ॥

20. (ನಾಹಪು 170)

ಈಸು ದಿನ ಈ ನಾಲ್ಕು ವೇದ
ಬ್ಯಾರೆ ಬ್ಯಾರೆ ಭಾವಿಸುತಿದ್ದೆ ॥ ಪ ॥
ಸದ್ಗುರು ವರದರಿಂದೆ ತಿಳಿದು
ಸಕಲ ಶಾಸ್ತ್ರಗಳು ಒಂದೆಂಬುತಿದ್ದೆ ॥ 1 ॥
ಗಿರಿಜೆ ಗಂಗೆ ರುದ್ರ ಹರಿಗಳ
ವ್ರತಗಳ ಬ್ಯಾರೆ ಮಾಡುತಲಿದ್ದೆ ।
ಸಾರ್ವಭೌಮರಿಂದೆ ತಿಳಿದು
ಸಕಲ ವ್ರತಗಳು ನಾನಾಗಿದ್ದೆ ॥ 2 ॥
ಸಪ್ತ ಸ್ವರ್ಗ ಉರ್ವಿ ಪಾತಾಳ
ಸುರ ಚರಗಣ ಬ್ಯಾರೆ ತೋರುತಲಿದ್ದೆ
ಸರ್ವ ಶಾಂತರಿಂದೆ ತಿಳಿದು
ಗುರುಲಿಂಗ ಜಂಗಮ ನಾನಾಗಿದ್ದೆ ॥ 3 ॥

21. (ನಾಹಪು 73)

ಎನಗೆ ನಿಮ್ಮಯ ನಿತ್ಯ ನೆನೆಯುದನೆ ಬಯಸುವದು ।
ಘನವ ನಾನಿದರಿಂದ ಮೇಲರಿಯೆನು ॥ ಪ ॥
ನಿಮ್ಮ ನೆನೆವುದೆ ಹರುಷ ನಿಮ್ಮ ನೆನೆವುದೆ ಪರುಷ ।
ನಿಮ್ಮ ನೆನೆವುದೆ ಕಾಮಧೇನು ಎನಗೆ ।
ನಿಮ್ಮ ನೆನೆವುದೆ ಗತಿಯು ।
ನಿಮ್ಮ ನೆನೆವುದು ಸೌಖ್ಯ । ನಿಮ್ಮ ನೆನೆವುದೆ ಸುಖವು ಎನಗೆ ॥ 1 ॥
ನಿಮ್ಮ ನೆನೆವುದೆ ಜಪವು ನಿಮ್ಮ ನೆನೆವುದೆ ತಪವು ।
ನಿಮ್ಮ ನೆನೆವುದೆ ಸಕಲ ಪರತತ್ತ್ವವು ।
ನಿಮ್ಮ ನೆನೆವುದೆ ನಿತ್ಯ ನಿಮ್ಮ ನೆನೆವುದೆ ಸತ್ಯ ।
ನಿಮ್ಮ ನೆನೆವುದೆ ದಿವ್ಯ ಕೈಲಾಸವಯ್ಯಾ ॥ 2 ॥
ತನು ದಂಡನೆಯ ಮಾಡಿ ಸೊರಗಲ್ಯಾತಕ್ಕೆ ।
ಘನ ಗಿರಿಯ ಮೇಲೆ ಶತ ವರುಷವಿರಲ್ಯಾಕೆ ।
ಮನಸು ಜರಿಯದೆ ನೆನಹು ತಾ ಮನದೊಳಗೆ ನೆಲಸಿತಾ ।
ಘನ ಪರಮ ಕೈಲಾಸ ನಿನ್ನೊಳಗಿಹುದು ॥ 3 ॥
ಹಲವು ತೀರ್ಥಕ್ಷೇತ್ರವು ಹಲವು ಗಿರಿ ಗುಹೆಯು ।
ತೊಳಲಿ ತೊಳಲಿ ಬಳಲ್ಯಾತಕ್ಕೆ ಮನವೆ ।
ಮಲಹರನ ನೆನಹುತಾ ಮನದೊ ಳಗಿರಲು ॥
ಮಲ ಹಲವನರಿಸುವನೇನು ತಾನೆ ಶಿವನು ॥ 4 ॥
ಸೂರ್ಯ ಲೋಕವು ಎನಗೆ ನರಲೋಕವು ಎನಗೆ ।
ಉರಗಯಮಲೋಕ ತಾನಾದರೇನು ।
ಹರುಷದಿ ಷಡಾಕ್ಷರಯ್ಯನ ಪರಮ ಮಂತ್ರದ ನೆನಹು
ದೊರೆದಿರಲು ಶಿವಲೋಕ ತಾನಿರ್ದುದಾ ॥ 5 ॥

22. (ನಾಹಪು 186)

ಎನು ಮನ ಓಂ ನಮೋ ಶಿವಾ । ಓಂ ನಮೋಶಿವಾಯ ॥ ಪ ॥
ಈ ಮನ ಮಾಯಾ ಪ್ರಪಂಚ ಅಲಕ್ಷಿಸಿ ॥ ಅ.ಪ. ॥
ಅನಾದಿ ಪುರುಷನ ಧ್ಯಾನವ ಮಾಡಲು
ನಾನಾ ವಿಕಲ್ಪನೆ ಪೋಗುವದು ।
ನೀನಾಗಿ ಧ್ಯಾನದ ಖೂನವ ತಿಳಿ ಕಂಡ್ಯಾ ॥ 1 ॥

ಕಂತುಪಿತನ ಧ್ಯಾನ ಸಂತೋಷದಿ ಮಾಡು
ಭ್ರಾಂತಿಯು ದೂರಾಗುವದು
ಕುಂತಲ್ಲೆ ನಿಂತಲ್ಲೆ ಸಂತೇಲಿ ನೆನೆ ಕಂಡ್ಯಾ ॥ 2 ॥
ಆಶಿಗೆ ಬಿದ್ದು ಬಹು ಘಾಸಿ ಆಗದಿರು
ಪಾಶ ಮಾಯದೊಳು ಸಿಲುಕದಿರು
ಶೇಷನ ಭೂಷಣನ ಧ್ಯಾಸದೊಳಿರು ಕಂಡ್ಯಾ ॥ 3 ॥
ಅರಿವು ಹಿಡಿದು ದೃಢ ಗುರುವಿನ ಮರಿಬೇಡ
ಮರವಿಗೆ ಮೈಯ ಕೊಡದಿರು
ಹೆರವರ ಗರುವದಿ ಜರಿಯದಿರು ಕಂಡ್ಯಾ ॥ 4 ॥
ಧೀರ ನಿಂಬರಗಿವಾಸ ಪುರದೊಳಗಿರುವ
ಗುರು ಕಾಡಸಿದ್ಧ ರೇವಣರ
ಶರಣರ ಚರಣದ ಸ್ಮರಣೆಯ ಮಾಡು ಕಂಡ್ಯಾ ॥ 5 ॥

23. (ನಾಹಪು 112)

ಎಂಥ ಕಾಟದವಳೀ ನಮ್ಮತ್ತೆವ್ವ ॥ ಪ ॥
ಇಂಥಾ ಕಿಟಿಕಿಟಿ ತಾಳಲಾರೆ ಎನ್ನವ್ವಾ ।
ಕಟಕಟ ತಿಂತಾಳ ಹಲ್ಲ ತನ್ನವ್ವಾ ।
ಮಾರಿ ಮಿಟಿ ಮಿಟಿ ನೋಡತಾಳೆನ್ನವ್ವಾ ॥ ಅ.ಪ. ॥
ಆರು ಮೂರು ತೂತಿನ ಕೊಡವವ್ವಾ
ನೀರ ತಾ ಅಂತಿರಿ ಭಡನವ್ವಾ ।
ಹ್ಯಾಂಗ ನೀರ ನಿಂತಾವು ಮಡನವ್ವಾ
ಅತ್ತಿ ಹ್ಯಾಂಗ ಮಾಡಬೇಕು ಹೇಳ ಭಡನವ್ವಾ ॥ 1 ॥
ಹಸಿ ಲದ್ದಿ ಕೊಡದ ನಂಬಿಗೇನ ದಾ
ಆಶೆ ಬಿದ್ದು ನೀರ ಕೊಡ ತುಂಬಲೇನ
ಘಾಸಿ ಹಾಕುವ ಯಮ ಧರ್ಮ ತಾನು
ಸೂಸಲಾದ ಮತ ಗುರುವಿನ ಧ್ಯಾಸವನ್ನು ॥ 2 ॥
ನೆತ್ತೀ ಮೇಲೆ ಹೊತ್ತು ಕೊಡ ಒಡದೀನ
ನೀ ಸತ್ತು ಹುಟ್ಟು ಎಂಥಾದು ಅಳದೀನ ।
ಮುತ್ಯಾ ಅಜ್ಜನ ಹೆಜ್ಜೀ ಮೇಲೆ ನಡೆದೀನ
ಮುತ್ತು ಮಹಂತೇಶ ಯೋಗಿಯ ಪಡೆದೀನ ॥ 3 ॥

24. (ನಾಹಪು 176)

ಎಂಥ ಸರಳ ಮಾರ್ಗವೋ ಇದು ಎಂಥ ಸುಲಭ ಮಾರ್ಗವೊ ।
ಕಂತು ಪಿತನ ದಿವ್ಯನಾಮ ಅಂತರಂಗದಿ ಕಾಂಬುದು ॥ ಪ ॥
ಘೋರ ಕಾನನಕ್ಹೋಗದೆ, ಮೀರಿದ ತಪವನೆಸಗದೆ ।
ಚಾರು ಮಂದಿರದೊಳ್ವಿಲಾಸದಿ । ವಾರಿಜಾಸನ ಭಜಿಸುವದು ॥ 1 ॥
ಕಂದ ಮೂಲ ಸೇವನದಿಂದ ಅಂದ ದೇಹ ಕುಂದಿಸದೆ ।
ಚಂದ ಸುಗ್ರಾಸ ಭೋಜನದಿಂದ ಇಂದುಧರನ ಭಜಿಸುವದು ॥ 2 ॥
ಸತಿ ಸುತ ಹಿತರೊಡನೆ ತಾನತಿ ಹಿತದಿ ಲೋಲ್ಯಾಡುತ ।
ಭೂಪತಿಯ ಸ್ಮರಣೆ ಸತತ ಬಿಡದೆ ನುತಿಸುತಿರುವದು ॥ 3 ॥
ಬಿಡದನೇಕ ಕಾಲ ದುಡಿದು ದುಡಿದು ಮಾಳ್ಪಯೋಗದ ಫಲವು । ಒಡೆಯ ಸದ್ಗುರು
ಭಾವೂರಾಜರ್ಹಿಂದೆ ಅಡಿಯಿಡುವದರೋಳ್ ಬಪ್ಪುದು ॥ 4 ॥

25. (ನಾಹಪು 180)

ಎಂಥಾದು ತೋರಿಸಿದಾ । ಸದ್ಗುರು ನಾಥಾ ಸಂತೋಷ ಎನ ಮಾಡಿದಾ ।
ಸಾಗರ ದಾಟಿಸಿ ಯೋಗದ ಮಾರ್ಗ ಹೇಳಿ ಸಾಂಬನ ತೋರಿಸಿದಾ ॥ ಪ ॥
ಮಲಕಿನ ಮನ ತೊಳಿದಾ ಸದ್ಗುರುನಾಥಾ ಕಲಕ ಗುಣಗಳ ಕಳಿದಾ ।
ನರದೇಹ ಘೋರಿತನ ಹರನೊಳಗೆ ಗಳಿಸಿದಾ ಪರಲೋಕಕ್ಕೆನಗ್ಹಾಕಿದ ॥ 1 ॥
ಅಖಂಡ ನಾಮ ಹೇಳಿದಾ ಸದ್ಗುರುರಾಯಾ । ಆ ಕ್ಷಣಕ ಅಲ್ಲನಸಿದಾ ।
ಕಾಮಾದಿ ಗುಣ ಅಳಿದು ನೇಮದಿ ಮೂರಳಿ ಸ್ವಾಮಿ ಒಳಗೆ ಮಾಡಿದಾ ॥ 2 ॥
ರೂಪಕೆ ರೂಪೆನಿಸಿದಾ । ಸದ್ಗುರುನಾಥಾ ಸರ್ವರಲ್ಲಿ ವ್ಯಾಪಿಸಿದಾ । ಭಾವ ಬಲಿತವರಿಗೆ
ಸೂಕ್ಷ್ಮ ದೃಷ್ಟಿಗೆ ಸುತ್ತೆಲ್ಲ ಹೊಳೆವುತಿದ್ದಾ ॥ 3 ॥
ನಾನಾ ನಾದವ ನುಡಿಸಿದಾ ಸದ್ಗುರು ನಾಥಾ ಏನೇನೈಶ್ವರ್ಯ ತೋರಿದಾ ।
ಮೂಲಿಯ ಮನಿಸೇರಿ ಲೋಲ್ಯಾಡುತಿದಲ್ಲೆ ಮೋಲವಿಲ್ಲದೆನಿಸಿದಾ ॥ 4 ॥
ಕತ್ತಲೆ ಬೆಳಕೆನಿಸಿದಾ ಸದ್ಗುರು ನಾಥಾ ಬೆಳಕಿನ ಕಳೆ ತುಂಬಿದಾ ನಾಭಿ ಕಮಲಾ
ಪುರ ನಾಲ್ಕು ಬೆರಳಿನಿಂದ ಏನು ಬೇಕಾದ್ದು ತೋರಿದಾ ॥ 5 ॥
ಮರುಳ ಮನಕ ತಿಳಿಸಿದಾ ಸದ್ಗುರು ನಾಥಾ । ಹದಿನೆಂಟು ಸುಳ್ಳೆನಿಸಿದಾ ।
ಕಂಡಲ್ಲೆ ಹರ ರೂಪ ತಿಳಿದವನೆ ಜಗ ಭರಿತಾ । ಗುರುರಾಯ ನಿನ್ನಾಟ ॥ 6 ॥
ದೇಶದೊಳು ತುಂಬಿದಾ ಉಮದಿ ಸಾಧು ಮುತ್ತಿನ ಬೆಳಕೆಲ್ಲ ।
ವಾಕ್ಯ ಹೇಳಿದ ನಮ್ಮ ವಶದಿ ಪುರುಷ ದೇವಾ ಪರಲೋಕ ನರದಾಡಿದಾ ॥ 7 ॥

ಕನ್ನಡ ಪದಗಳು

26. (ನಾಹಪು 55)

ಎಂಥಾ ಮಾನವ ಜನ್ಮ ಏನ ಕೆಡಸಿ ಬಿಟ್ಟೀರಪ್ಪಾ ।
ಇಂಥಾ ಜನ್ಮಾ ಸಿಕ್ಕೀತೇನರಪ್ಪಯ್ಯ ॥ ಪ ॥
ಭ್ರಾಂತಿ ಸಂಸಾರಕ ಬಿದ್ದು ಕೆಟ್ಟೀರಪ್ಪಯ್ಯಾ ॥ ಅ.ಪ. ॥
ಹರದೆಯರ ಮೋಹಕ್ಕಾಗಿ ಹರನ ಪೂಜಾ ಮಾಡುದು ಬಿಟ್ಟು
ಬರಿದೇ ನಿದ್ರೆಯ ಮಾಡಿ ನೀವು ಕೆಟ್ಟೀರಪ್ಪಯ್ಯ
ಅರುಣೋದಯವಾಗದ ಮುನ್ನ ಗುರುಧ್ಯಾನ ಮಾಡಿದರ
ಪರಮಾನಂದ ಪ್ರಾಪ್ತಿ ನಿಮಗ ಆಗುವದಪ್ಪಯ್ಯ ॥ 1 ॥
ಕಾಲು ಕೈ ಕಣ್ಣು ಮೂಗು ಮೇಲೆ ನಾಲಿಗಿರಲಿಕ್ಕಾಗಿ
ಕಾಲ ಹರನ ಪೂಜಿ ನೀವು ಬಿಟ್ಟೀರಪ್ಪಯ್ಯಾ ।
ಕಾಲ ಯಮನವರು ಬಂದು ನಿಮ್ಮ ಕಾಲ ಹಿಡಿದು ಒಯ್ಯುವಾಗ
ತಾಳ ತಾಳ ಅಂದರ ಹ್ಯಾಂಗ ತಾಳೀರಪ್ಪಯ್ಯ ॥ 2 ॥
ಹಣವಿದ್ದಾಗಲೆ ಭಕ್ತಿ ಗುಣವಿದ್ದಾಗಲೆ ಯುಕ್ತಿ ।
ನೆನವಿದ್ದಾಗಲೆ ಮುಕ್ತಿ ಪಡೆದೀರಪ್ಪಯ್ಯ ।
ಹಣ ಕೆಟ್ಟು ಹೋಗುವಾಗ ಗುಣ ಕೆಟ್ಟು ಹೋಗುವಾಗ
ಘನವಾದ ಯಮನ ಬಾಧೆಗೆ ಸಿಕ್ಕೀರಪ್ಪಯ್ಯ ॥ 3 ॥
ಹಿಂದೀನ ಜನ್ಮದಲಿ ಒಂದೇ ಭಾವದಿ ಪುಣ್ಯ ಮಾಡಿ
ಇಂದು ನರ ಜನ್ಮದೊಳು ಹುಟ್ಟೀರಪ್ಪಯ್ಯ ।
ಇಂದೀನ ಜನ್ಮದೊಳು ನಿಂದೆಯ ಕುಹಕನಾಡಿ ।
ಹಂದೀಯ ಜನ್ಮಕ್ಕೆ ನೀವು ಬಿದ್ದೀರಪ್ಪಯ್ಯ ॥ 4 ॥
ಇರವಿ ಎಂಬತ್ತು ನಾಲ್ಕು ಲಕ್ಷ ಯೋನಿ ತಿರಗಿ ತಿರಗಿ ।
ಆರವೀನ ಜನ್ಮಕ್ಕೆ ನೀವು ಬಂದೀರಪ್ಪಯ್ಯ ।
ಧರೆಯೊಳು ನೀರಲಿಕೇರಿ ಒಡೆಯ ಪಂಚಾಕ್ಷರಿ
ಕರುಣ ಕಟಾಕ್ಷ ನೀವು ಪಡೆದೀರಪ್ಪಯ್ಯ ॥ 5 ॥

27. (ನಾಹಪು 49)

ಎಂಥಾ ಸವಿ ಎಂಥಾ ಸವಿ ಹರ ಗುರುವಿನ ಭಜನಿ ॥ ಪ ॥
ಬೆಲ್ಲಾ ಬೆಲ್ಲಾ ಬೆಲ್ಲಾ । ತಿಳದವನೇ ಬಲ್ಲಾ ।
ತಿಳಿಯದೆ ಇದ್ದವಗ ಏನು ಠಾವಿಕಿಲ್ಲಾ ॥ 1 ॥
ಉಪ್ಪು ಉಪ್ಪು ಉಪ್ಪು । ತಿಳದವನೆ ಗಪ್ಪು
ತಿಳಿಯದೆ ಇದ್ದವನ ಮೈಯಲಿ ಮುಪ್ಪು ॥ 2 ॥
ಹುಳಿ ಹುಳಿ ಹುಳಿ । ತಿಳದವ ಬಾಳೀ ಸುಳಿ ।
ತಿಳಿಯದೆ ಇದ್ದವ ಎದ್ದ ದಿವಾಳಿ ॥ 3 ॥

ಖಾರಾ ಖಾರಾ ಖಾರಾ । ತಿಳಿದವನೇ ಶೂರಾ ।
ತಿಳಿಯದೇ ಇದ್ದವ ಎಡ್ಡ ಗಂವ್ಹಾರಾ ॥ 4 ॥
ದೇಶ ದೇಶ ದೇಶಾ । ಮುಚಖಂಡಿ ಈಶಾ ।
ಆತನ ಪಾದಕ ಹೊಂದುದೆ ಲೇಸಾ ॥ 5 ॥

28. (ನಾಹಪು 94)

ಎಂಥಾ ಹುಚ್ಚು ಹಿಡಿದೀತಿವಗ ।
ಯಾರು ಕಲಿಸಿ ಬಿಟ್ಟರವ್ವ ॥
ಅಂತು ಅವನು ಏನೇನಾದ
ಸಂತಾನಳಿದು ನಿಃಸಂತಾನಾದ ॥ ಪ ॥
ಕಟ್ಟಿದ ಗೋಡೆ ಕೆಡವುತಲ್ಯಾನ
ಉಟ್ಟ ಅರಿವಿ ಹರಿಯುತಲ್ಯಾನ ।
ಅಟ್ಟ ಗಡಿಗೆ ಎಲ್ಲ ಒಡೆದು
ಹುಟ್ಟ ಮುರಿದು ಬಿಟ್ಟಿಹನವ್ವಾ ॥ 1 ॥
ತನ್ನ ದೇಹದ ಸುಖವನರಿಯ
ಪರರ ಸುಖವನೇನು ಬಲ್ಲ ।
ತನ್ನ ಮಾತೇ ತಾನೇ ಹೇಳಿ
ಇನ್ನೂ ಎಷ್ಟು ನಗುತಿಹನವ್ವಾ ॥ 2 ॥
ಹಮ್ಮು ಬಿಮ್ಮುವೆಲ್ಲ ಅಳಿದ
ಬ್ರಹ್ಮನೆಂಬುದ ತಾನೇ ತಿಳಿದ ।
ಸೃಷ್ಟಿಯೊಳು ಕೂಡಲೂರೇಶ
ಬಟ್ಟ ಬಯಲ ಪ್ರಭೆಯಾದ ॥ 3 ॥

29. (ನಾಹಪು 82)

ಎಲರೂ ಎಲರೂ ಕೆಡಬೇಡಿರೂ
ನಿಮ್ಮ ಒಡಲೊಳಗ ಶಿವ ಹಾನ ನೋಡಿರೊ ।
ಕುಲಾಚಾರಕ ಹೊಡದಾಡ ಬ್ಯಾಡಿರೊ । ನಿಮ್ಮ ನೆಲೆಯ
ತಿಳಸುವ ಗುರುವಿನ ಹಿಡೀರೊ ॥ ಪ. ॥
ಮಕ್ಕಳ ಮೋಹಕ ಮರಗೀರೋ । ನಾಳೆ ಸಕ್ಕರಿ
ಹಣ್ಣಗೆ ಸೊರಗೀರೋ । ರೊಕ್ಕ ಹೆಚ್ಚಾಗಿ ಗಿಮ್ಮದಿರಗೀರೊ ।
ನಾಳೆ ಡೊಕ್ಕೆ ಮುರಿಯುವಾಗ ಏನು ಹೇಳತೀರೊ ॥ 1 ॥

ಧ್ಯಾನ ಮಾಡೆಂದರ ನೆಳ್ಳತೀರೊ । ನಾಳೆ
ಬ್ಯಾನಿ ಬಂದರ ನೆಲಕುರಳತೀರೋ ।
ಅಜ್ಞಾನ ಮಬ್ಬಿನೊಳು ಕುಳಿತೀರೋ । ನಾಳೆ
ಯಮನವರು ಕೇಳಿದರ ಏನ ಹೇಳತೀರೋ ॥ 2 ॥
ಆಶೆ ಮಾಡಿ ನೀವು ಕುಳಿತೀರೋ । ನಾಳೆ ।
ಪಾಶದೊಳಗೆ ಹೋಗಿ ಬೀಳತೀರೊ ।
ಹರುಷಾಗಿ ನಮ್ಮ ಕೂಡಲೂರೇಶನ
ಬೇಗದಿಂದ ಮುಕ್ತಿ ಪಡಕೊಳ್ಳಿರೋ ॥ 3 ॥

30. (ನಾಹಪು 83)

ಎಲ್ಲವನು ಬಲ್ಲೆನೆನ್ನುವಿರಲ್ಲ । ಸಲ್ಲದ ಗುಣ ಬಿಡಲಿಲ್ಲ ॥ ಪ ॥
ಸೊಲ್ಲಿಗೆ ಶರಣರ ಕಥೆಗಳ ಪೇಳುತ । ಅಲ್ಲದ
ನುಡಿಗಳ ನುಡಿಯುವಿರಲ್ಲ ॥ ಅ.ಪ. ॥
ಕೇಮೆಯನುಟ್ಟು ತಿರುಗಿವಿರಲ್ಲ । ಕಾಮವ ಬಿಡಲಿಲ್ಲ ।
ನೇಮನಿಷ್ಠೆಗಳ ಮಾಡುವಿರಲ್ಲ । ತಾಮಸ ಬಿಡಲಿಲ್ಲ ॥
ತಾವೊಂದರಿಯದೆ ಪರರಲಿ ತಿಳಿಯದೆ
ಕೇವಲ ಕುಳಿಯಲಿ ಬೀಳುವಿರಲ್ಲ ॥ 1 ॥
ಗುರುಗಳ ಸೇವೆಯ ಮಾಡಿದಿರಲ್ಲ । ಗುರುತಾಗಲೆ ಇಲ್ಲ ।
ಪರಿ ಪರಿ ದೇಶವ ತಿರುಗಿದಿರಲ್ಲ । ಪೊರೆಯುವರಿನ್ನಿಲ್ಲ ।
ಅರಿವೊಂದರಿಯದೆ ಆಗಮ ತಿಳಿಯದೆ ।
ನರ ಕೂಪದಲಿ ಬೀಳುವಿರಲ್ಲ ॥ 2 ॥
ಬ್ರಹ್ಮ ಜ್ಞಾನಿಗಳೆನಿಸುವಿರಲ್ಲ । ಹಮ್ಮನು ಬಿಡಲಿಲ್ಲ ।
ಸುಮ್ಮನೆ ಯಾಗವ ಮಾಡುವಿರಲ್ಲ ।
ಹೆಮ್ಮೆಯ ಬಿಡಲಿಲ್ಲ ।
ಗಮ್ಮನೆ ಪುರಂದರ ವಿಠಲನ ಪಾದಕೆ ।
ಒಮ್ಮೆಯಾದರು ನೀವೆರಗಲಿಲ್ಲ ॥ 3 ॥

31. (ನಾಹಪು 91)

ಏನ ಭರಾ ನಟ್ಟೇತಪ್ಪಾ ಎನಗೆ ಮುಳ್ಳಾ
ಬ್ಯಾನಿ ತಾಳಿ ಹೇಳಲಾರೆನಪ್ಪಾ ಇದರ ಘೋಳಾ ॥ ಪ ॥

ಹಡ್ಡಿ ನೋಡಿದರ ಸಿಗವಲ್ಲದಂಥ ಮಾಯಾದ ಮುಳ್ಳಾ
ಇದು ಬಹಳ ಮಂದಿಗೆ ಮುರಿದು ಮಾಡೇತೆಪ್ಪಾ ಮಳ್ಳ ॥ ಅ.ಪ. ॥
ಮಾನಾಭಿಮಾನ ಎರಡು ಜೋಡು ಮುಳ್ಳಾ
ಎನ್ನ ಕಿವ್ಯಾಗ ಬಡಿದು ಕೊಂಡಿತಪ್ಪಾ ಜಿವ್ಹಾಳಾ ।
ಸ ರ್‍ರಾ ರ್‍ರಾ ರಾ ವಿಷವೇರಿ ಅಂಗಾಲಾ
ತಲ್ಯಾಗ ಜುಮ್ಮ ಹಿಡಿದು ಅಳಕಿತಪ್ಪ ನಾಭಿ ಸ್ಥಲಾ ॥ 1 ॥
ಸ್ವಾದ ರುಚಿಯೆಂಬೆರಡು ಜೋಡ ಮುಳ್ಳಾ
ಇವು ಬಹಳ ಮಂದಿಗು ಮುರಿದು ಮಾಡ್ಯಾವಪ್ಪಾ ಘೋಳಾ
ನಾಲಿಗೆಯೊಳಗೆ ಮುರದೀತಪ್ಪ ಬ್ಯಾಲದ ಮುಳ್ಳ
ಎನ್ನ ಹೊಟ್ಟೆಯೊಳಗ ಉರುಪ ಬಿಟ್ಟದೆಯಂಥಾ ಕಾಳಾ ॥ 2 ॥
ಹೆಣ್ಣು ಹೊನ್ನು ಮಣ್ಣು ಇವು ಮೂರು ಮುಳ್ಳಾ
ಎನ್ನ ಕಣ್ಣೊಳು ಚುಚ್ಚ್ಯಾವಪ್ಪಾ ಎಂಥಾ ಕಾಳಾ ।
ಎಲ್ಲಾಕಿಂತಾ ದೊಡ್ಡ ಇವು ಡೊಣ್ಣೆ ಮುಳ್ಳಾ
ಮೂರು ಲೋಕಕೆಲ್ಲಾ ಮುರಿದು ಮಾಡ್ಯಾವಪ್ಪಾ ಮಳ್ಳಾ ॥ 3 ॥
ಬೇಕಾಗಿ ಮುರಸಿಕೊಂಡೀರಪ್ಪಾ ನೀವು ಮುಳ್ಳಾ
ನಿಮ್ಮ ಕಾಲ ತಾವೆ ಬೇಲ್ಯಾಗ ಹೋಗಿ ಹಾಯ್ಲಿಲ್ಲಾ
ತಾ ಮಾಡಿ ನನಗ ತಂದು ಇಟ್ಟು ಕಾಳಾ
ನಾನು ಯಾರ ಮುಂದೆ ಹೇಳಲೆಪ್ಪಾ ನನ್ನ ಘೋಳಾ
ಲೈನ ದಾರಿಲಿ ನಾ ಇದ್ದು ನಂಧ್ಯಾಳಾ
ಗುರು ಸಂಗತೀಲಿ ಸುಟ್ಟೇನಪ್ಪಾ ಇಷ್ಟು ಮುಳ್ಳಾ ॥ 4 ॥

32. (ನಾಹಪು 48)

ಏನ ಸವಿ ಏನ ಸವಿ ಹರಿ ನಾಮಾ
ಮನಸು ತೃಪ್ತಿ ಆಗದು ಪ್ರೇಮು ।
ಈ ಜನರಿಗೆ ತಿಳಿಯಲಿಲ್ಲ ಇದರ ವರ್ಮ
ಘನ ಮಹಿಮ ಸಾಸಿರ ವಿಷ್ಣು ನಾಮ ॥ ಪ ॥
ನಾಮದ ಸವಿಯುಂಡ ವಾಲ್ಮೀಕ
ನಾಮ ಸ್ಮರಿಸಿದ ನರಹರಿ ಕನಕ
ಪ್ರೇಮದ ಹರಿ ಭಕ್ತ ಪುಂಡಲೀಕ
ರಾಮ ರಾಮ ರಾಮ ರಾಮ ಸಾರ್ವ ಜನಕ ॥ 1 ॥
ಆತ್ಮನ ಸವಿಯನು ನೋಡಿದವರು

ತುಂಬರ ನಾರದ ಪುರಂದರ ದಾಸರು
ಅಂಬರೀಷ ಋಷಿಗಳು ದೂರ್ವಾಸರು
ತುಂಬಿ ಕೊಂಡರು ತಾವು ವ್ಯಾಸರಾಯರು ॥ 2 ॥
ಹರಿ ಹರಿ ಹರಿ ಸ್ಮರಣೆ ಮಾಡಬೇಕು
ಮೂರು ಗುಣಗಳಲ್ಲಿದಿರಬೇಕು
ಬಿರುದ ಸಾರುತಿವೆ ವೇದ ನಾಲ್ಕು
ಪರಮ ಭಕ್ತ ಭೀಮ ದಾಸ ಸಾರ್ವ ಜನಕ ॥ 3 ॥

33. (ನಾಹಪು 36)

ಏನಿದೇನಿದು ಮಹೇಶ ಕೃಪೆಯಿದು ।
ದೇಹದೊಳಗ ಜೀವ ಶಿವರ ಸ್ನೇಹವೆಂಥದು ॥ ಪ ॥
ಆಧಾರ ಬಲಿಸುದು ನಿಜದ ಹಾದಿ ತೋರುದು ।
ಅರಿಯೋ ಬೆರಿಯೋ ತೊರೆಯೋ ನಿಜ ಸುಖವು ತಿಳಿಯುದು ॥ 1 ॥
ಕನಸು ಬೀಳುವುದು, ದಿನ ದಿನಸು ತೋರುದು ।
ಕನಸಿನೊಳು ಭ್ರಮಿಸಿ ನೋಡಲು ತಮಾಶೆ ಕಾಣುದು ॥ 2 ॥
ಸುಳ್ಳೆ ಭ್ರಮೆಯಿದು ಮಾಯ ಎನ್ನ ಬಳಲಿಸುದು
ಜೀವ ಕೊಂಡು ಯಮನೊಯ್ವಾಗ । ಪ್ರೀತಿಯೆಲ್ಲಿಯದು ॥ 3 ॥
ಹೆರೂರ ಸ್ಥಲದಿ, ಘನಮತೇಶನು ಮುದದಿ
ಭಕ್ತಿ ಮಾಡೋ ಮುಕ್ತಿ ಬೇಡೋ ತತ್ತ್ವ ಪಾಡೋ ನೀ ॥ 4 ॥

34. (ನಾಹಪು 188)

ಏನಿದೇನಿದು ಹರಿಯ ಖೇಳಿದು । ಈ ಶ್ರೇಷ್ಠ
ಗುರುಗಳು ಕೊಟ್ಟ ನಾಮದ ॥ ಇಷ್ಟ ಫಲ ಇದು ॥ ಪ ॥
ಶ್ರಾವಣ ಮಾಸಿದು ಶುಕ್ಲ ಪಕ್ಷಿದು । ಈ ಸಕಲ
ಸಾಧೂರು ಕೂಡಿಕೊಂಡು ಸಭಾ ಮಾಡ್ಯಾರು ॥ 1 ॥
ಸುಮುಹೂರ್ತಿದು ಸುಖದ ಫಲ ಇದು । ಈ ಸಕಲ
ಸಾಧೂರು ಕೂಡಿಕೊಂಡು ಪುಸ್ತಕ ಹಚ್ಯಾರು ॥ 2 ॥
ಉದಯದಲ್ಲಿ ಏಳುವರು ಸ್ನಾನವ ಮಾಡುವರು ।
ಮೂರು ಮರೆತು ಆರು ಅರಿತು ಆಸನ ಹಾಕ್ಯಾರು ॥ 3 ॥
ಬಾಲ ಗೋಪಾಲರು ವೃದ್ಧ ತರುಣರು । ಈ ಸಕಲ
ಭಕ್ತರಿಗೆ ಕಟ್ಟ ಹಾಕಿ ನಿಷ್ಠಾ ನಡಿಸ್ಯಾರು ॥ 4 ॥
ಜ್ಞಾನೇಶ್ವರಿ ಓದುವರು ಗರ್ಜನೆ ಹೇಳುವರು ।
ಭಕ್ತಿ ವಿಜಯದಲ್ಲಿ ಅವರು ಗಂಟು ಹಾಕ್ಯಾರು ॥ 5 ॥

ದಾಸಬೋಧಿದು ಸಾಕ್ಷಾತ್ಕಾರಿದು । ನಾಮ ದೃಷ್ಟಿಯ
ನ್ನಿಟ್ಟು ಸ್ಮರಣ ಮಾಡ್ಯಾರು ॥ 6 ॥ ಹರನ ಭಕ್ತರಿಗೆ
ಹರಿಯೆಂದು ನುಡಿಸುವರು । ಹರಿದಾಸರಿಗೆ ಹರನಂತೆ
ನುಡಿಸುವರು ॥ 7 ॥ ಆರು ತಾಸಿಗೆ ವೇದ ಮುಗಿಸುವರು
ನಾನಾ ಶಾಸ್ತ್ರದ ಆಧಾರ ಹಚ್ಚಿ ಅರ್ಥ ಹೇಳುವರು ॥ 8 ॥
ಅಕ್ಷಯ ಪಾತ್ರಿದು ಆರತಿ ತುಂಬುವರು । ಸಹಸ್ರ
ದಳದಲ್ಲಿ ಕರ್ಪುರದಾರತಿ ತುಂಬುವರು ॥ 9 ॥
ದ್ವಾರಾವತಿ ದೇವ ಡಾಕುರಕೆ ಬಂದರು । ರಾಮ
ದಾಸನ ಭಕ್ತಿಗಾಗಿ ವಸ್ತಿ ನಿಂತರು ॥ 10 ॥ ಹಿಂಚಗೇರಿ
ಸ್ಥಾನವಿದು । ಅಂಬುರಾಯರ ಭಾವಿದು ।
ತಕ್ತ ಸಿಂಹಾಸನದಿ ಗುರುಗಳು ವಸ್ತಿ ಮಾಡಿದರು ॥ 11 ॥
ಶ್ರಾವಣ ವದ್ಯ ಇದು । ಗುರುವಾರ ಇದು ।
ಜಯ ಜಯಕಾರ ಮಾಡಿ ಗುರುಗಳು ಪುಸ್ತಕ ಮುಗಿಸುವರು ॥ 12 ॥
ಸ್ಮರಣ ಭೂಮಿ ಇದು । ಸ್ವರ್ಗ ಭುವನ ಇದು ।
ಉಮದಿ ಅಪರೋಕ್ಷ ಜ್ಞಾನಿಗಳು ಮಾಡುವ ಕೃತ್ಯ ಇದು ॥ 13 ॥

35. (ನಾಹಪು 58)

ಏನು ಹೇಳಲಿ ಎನ್ನ ಅಜ್ಞಾನ ವಶದಿಂದ
ನಾನು ನನ್ನನು ಮರೆತೆ ॥ ಪ ॥
ನಾನಾ ಜನ್ಮದಿ ತಿರುಗಿ ತಿರುಗಿ
ಹೀನ ಮನೆ ಸಂಸಾರಕಾಗಿ
ಶ್ವಾನ ಸೂಕರನಂತೆ ಮನೆ ಮನೆ
ಖೂನವಿಲ್ಲದೆ ವ್ಯರ್ಥ ತಿರುಗಿದೆ ॥ ಅ.ಪ. ॥
ಆತ್ಮನ ಅರಿಯದೆ ಯಾತಕೂ ಬರದಾದೆ
ಭೂತ ಪಂಚ ತತ್ತ್ವ ದೇಹವನು ಮೆಚ್ಚಿ ।
ಏತರಿಂದಲಿ ಬಂದಿತೆನಗಿದು
ಜೀವಶಿವರೆಂದೆಂಬ ಭೇದವು
ಮಾತು ಮಾತಿಗೆ ಶಬ್ದ ಸೂತಕ
ಪಾತಕದೊಳು ಮುಳುಗಿ ಹೋದೆ ॥ 1 ॥
ಭಾನುಕೋಟಿ ಪ್ರಕಾಶ ಬ್ರಹ್ಮಾಂಡ ತುಂಬಿ
ತಾನಾಗಿ ಹೊಳೆಯುತದೆ ।
ಏನು ಕಾರಣ ಕಾಳ ಕತ್ತಲೆ

ಮಾಯ ಮುಸುಕು ತೋರಗೊಡದಿದು
ನಾನು ನೀನೆಂದೆಂಬ ಭೇದವು
ಏನು ಕಾರಣ ತಿಳಿಯಗೊಡದಿದು ॥ 2 ॥
ಪರುಷವು ತನ್ನಲ್ಲಿ ಪರಿಪೂರ್ಣವಿರಲಿಕ್ಕೆ
ಸೆರಗೊಡ್ಡಿ ಬೇಡುವರೆ ಬಡವರನು ।
ಹರನು ತಾನೊಂದಾದ ಮೇಲೆ
ನರರ ಬಾಧೆಗೆ ಸಿಲುಕುದೇಕೆ
ಗುರು ಕೂಡಲೂರೇಶನ
ಕರುಣವಿಲ್ಲದೆ ಚರಣ ಕಾಣವು ॥ 3 ॥

36. (ನಾಹಪು 106)

ಏನು ಹೇಳಲೆಮ್ಮಾ ಶ್ರೀಗುರು ದಯ ಏನು ಹೇಳಲೆಮ್ಮಾ ॥ ಪ ॥
ಏನು ಹೇಳಲೆಮ್ಮಾ ಬ್ರಹ್ಮಾನಂದದ ಮಹಿಮೆ । ನಾ ನನ್ನ
ಅರಿತು ನಿಜಾನಂದವಾದ ॥ ಅ.ಪ. ॥ ಶರಣು
ಮಾಡಿದೆನೆ ಪಿಡಿದು । ಶಿರವ ಮೇಲಕ್ಕೆತ್ತಿದನೆ ।
ಒರೆದನು ಕಿವಿಯೊಳು । ಏನೇನು ಕಾಣೆನು ।
ಶರೀರ ಮರೆತು ಮನ ಪರವಶವಾದದ್ದು ॥ 1 ॥
ಕರೆದೇಕಾಂತಕೆ ಅರಿದು । ಕಣ್ಣು ಕಿವಿ ಮುಚ್ಚಿದನೆ । ಘೋರೆಂದು
ಒದರಿತು ಆವ ಮೃಗವು ಕಾಣೆ । ಸುರಿದಾವ ನಕ್ಷತ್ರ
ಆಕಾಶ ಹರಿದಂತೆ ॥ 2 ॥ ಆಸನ ಬಲಿಸಿ । ಸುಷುಮ್ನಿಯ
ಮೇಲಕ್ಕೇರಿಸಿ । ಗಾಸಿಯಾಗದೆ ತಲೆ ಗೂಡಿನೊಳು
ಕರದೊಯ್ದು । ಸಾಸಿರ ದಳ ಪೀಠವಾಸ ಮಾಡಿಸಿದ ॥ 3 ॥
ಅಲ್ಲಿ ನಿಲ್ಲಿಸಿದ । ಮಲತ್ರಯ ಜ್ವಾಲೆಯಳಿಸಿದ ।
ಲೀಲಾ ಮಂಟಪದೊಳು ಲೋಲ್ಯಾಡುತಿರು ಎಂದು
ಮೂಲ ಮಂತ್ರವ ತೋರಿ ಮುದ್ದ ಮಾಡಿಟ್ಟದ್ದು ॥ 4 ॥
ಬಯಲಿಗೆ ಕರೆದ । ಆತನು ತನ್ನ ದಯದಿಂದ
ಬೆರೆದ ಆಯಾಸವೇಕೆ ನಾನೆಂಬುದೇನಿಲ್ಲ ।
ಬಯಲು ಮಾಡಿದ ಶಂಭುಲಿಂಗ ತಾನಾದ ॥ 5 ॥

37. (ನಾಹಪು 113)

ಒಗತನ ಮಾಡೆಂದರ ನಮ್ಮವರು । ಈ ಮಾರಿಗೇಡಿ
ಈ ಸಿರಿಗೇಡಿ ಕೂಡಾ ಬದಕು ಮಾಡೆಂದರ ನಮ್ಮವರು ॥ ಪ ॥

ಒಗತನ ಮಾಡ ಯುಕ್ತಿಲೆ ಕೂಡ ಶಕ್ತಿಲಿ ಜೋಡ
ಸ್ಥಿರವಿಲ್ಲ ಪಾಡ ॥ ಅ.ಪ. ॥ ಹೆತ್ತ ತವರ
ಮಾತ ಕೇಳಿ ಹಿಗ್ಗಿ ಹಿಗ್ಗಿ ನಾ ಬಂದೆ । ಎತ್ತ ನೋಡಿದರ
ಜಾವಿಲ್ಲ । ಸಟ ಆದಿತೆಲ್ಲಾ । ಎತ್ತಾ ನೋಡಿದರತ್ತ
ತಾಳಿಲ್ಲಾ ಕತ್ತಲಿ ಬೆಳಕಿಲ್ಲಾ ।
ಅತ್ತಿ ಮಗಳೊಂದತ್ತಿಯ ಸೂಳಿ । ಕಿಟಿ ಕಿಟಿ
ಬಾಳಾ ಅಟ ಅಟಿಯೊಳು । ಚಿತ್ತ ಪಾಲಟವು
ಚಿತ್ತಾಲ ಗಂಡನ ನೆತ್ತಿ ಬಡಿದು ತಾ ನಗುವಳಮ್ಮ ॥ 1 ॥
ಕುಟ್ಟಿದೆನವ್ವಾ ಬೀಸಿದೆನವ್ವಾ ಬ್ಯಾಸರಾಯಿತು ಈ ಮನಿ ದಗದಾ ।
ಏಸೊಂದು ಕೆಲಸ ಮಾಡಿದೆನೆ ... ಸೂಸಲ ಕುಚ್ಚಿದೆನೆ ।
ಅಸುವ ಗೆದ್ದಿನೆ ಮಸರು ಸೋಸಿ ನಾ ಮಜ್ಜಿಗಿ
ಮಾಡೀನೆ । ಕಸ ಮುಸರಿ ಉಡಗಿ ಅಸವರ
ಭಾವೀ ನೀರ ಒಬ್ಬಳೆ ತರುವೇನೆ ।
ಹಸಿವಿ ಆಗೇದಂತ ಅತ್ತಿಗೆ ಉಸರಿದರ
ಎಸರಿಟ್ಟಡಗೀ ಮಾಡೆಂದಳ ಮುದಿಕಿ ॥ 2 ॥
ದುಂದುಗವಾಗಿದ್ದೆನವ್ವಾ । ಧುಂಧುಲಿಯಂತೆ ಕರೆಯುವಳಮ್ಮ
ತಂದು ಬಂದದ್ದು ಆಲಮ್ಮ । ಇದು ಭಾಗ್ಯದ ಬಾನಾ ತಂದು ನೀಡಿದೆನೆ ।
ಎಲ್ಲರಿಗೆ । ತಂಗಳ ನಾ ಕಾಣೆ ॥
ಚಂದ್ರ ಕಾಳೀ ಸೀರಿ ಚೆಲ್ವ ಕಲಿ ಬೀರಾ
ಚಂದ್ರದ ಹಾರಾ ಕುಪ್ಪಸ ಜರತಾರಾ ।
ಚಂದಗೇಡಿ ಎನ್ನ ಗಂಡ ಸೇರವಲ್ಲ
ಚಿದಾನಂದಗ ಬರಹೇಳಮ್ಮಾ ॥ 3 ॥

38. (ನಾಹಪು 67)

ಓದು ಬ್ಯಾಡಾ ನಿನಗ ಶಾಸ್ತ್ರ ಬ್ಯಾಡಾ ।
ಸುಶಿಲ ಬುದ್ಧಿಲಿ ದೃಷ್ಟಿ ನಿಲಿಸಿದರೆ ಸಾಕೋ ॥ ಪ ॥
ವೇದ ಎಂಬಲಿ ಬೇಡ ಯಮುನೆ ಧುಮುಕಲಿ ಬೇಡ
ಕಪ್ಪೆಯಂತೆ ನೀರೊಳು ಮುಳುಗ ಬೇಡ ।
ಬಾಯಿ ಬಿಗಿಯಲಿ ಬೇಡ ಮೂಗು ಹಿಡಿಯಲಿ ಬೇಡ
ಆ ಜಾಗದಲ್ಲಿ ದೃಷ್ಟಿ ನಿಲಿಸಿದರೆ ಸಾಕೊ ॥ 1 ॥
ಆಯಾಸ ಬಡಬೇಡ ಅಡವಿ ಸೇರಲಿ ಬೇಡ

ಕ್ಯಾವಿ ಕಮಂಡಲವ ಧರಿಸ ಬೇಡ
ಜಪವ ಎಣಿಸಲಿ ಬೇಡ ಉಪವಾಸವಿರಬೇಡ
ಸಾಸ್ವಿ ಕಾಳಷ್ಟು ದೃಷ್ಟಿ ನಿಲಿಸಿದರೆ ಸಾಕೊ ॥ 2 ॥
ಎರಡು ಕಣ್ಣಿನಿಂದ ನೋಡಿ ನಿಂತಿರಲಾಗಿ
ಶರೀರ ಬಯಲಾದರೂ ಅರವು ತಪ್ಪದು
ಅರವಿಗೇ ಅರವಾಗಿ ಅರವಿಗೇ ಕುರುಹಾಗಿ
ಗುರು ಚಿದಾನಂದನ ಗುರುತು ಇಲ್ಲೆನ್ನಬೇಡ ॥ 3 ॥

39. (ನಾಹಪು 166)

ಕಂಡ ಕಡೆ ಮನವು ಅಂಡಲವುತದೆ
ಮಂಡರೀಕಾಕ್ಷ ಕಾಯೊ ಎನ್ನನು ॥
ಎಷ್ಟು ಹೇಳಲಿ ಹೀನ ನಷ್ಟ ದೇಹ
ಭವ ಕಷ್ಟ ಪಡಲಾರೆ ಕಡೆ ದಾಟಿಸೋ
ಮಡದಿ ಮಕ್ಕಳ ಚಿಂತೆ ಬದುಕು ಭಾಗ್ಯದ ಚಿಂತೆ
ಉದ್ಯೋಗ ವ್ಯಾಪಾರ ಅಕಟಕಟ ಚಿಂತೆ ॥ 1 ॥
ಆಶೆಯೆಂಬುವ ಹೇಸಿ ಪಾಶದೊಳು ಹಾಕಿ ।
ಪರಿಪರಿಯಿಂದೆನ್ನ ಕಾಡುತಿಹುದೋ ।
ವಾಸನೆಯೆಂಬುವ ... ಹೊಗಿಸುತಿಹ
ಹೊರಗೆಡವಿ ಎನ್ನ ಕುಲಗೆಡಿಸುತಿಹನೊ
ಕಾಮನೆಂಬುವ ಕಳ್ಳ ಕಳವಳಿಕಿ ಬಿಡವಲ್ಲ
ಹತಮಾಡಿ ಕೊಲುತಿಹನು ಗತಿಗಾಣೆಸಯ್ಯ ॥ 2 ॥
ನಿದ್ರೆಯೆಂಬುವ ನಾರಿ ಮೈಮರೆಸಿ ಸ್ಮೃತಿಗೆಡಿಸಿ ।
ಸೆಳೆ ಮಂಚಕೆನ್ನ ಎಳೆಯುತಿಹಳೋ
ಮನವೆಂಬ ಕೊಂಪಿಯಲಿ ಮನೆ ಮಾಡಿ ಕುಳಿತಿಹಳು
ಗತಿಗೆಡಿಸಿ ಕ್ಷಿತಿಗೆನ್ನ ಕೆಡಹುತಿಹಳೋ ।
ಗುರುಲಿಂಗ ಜಂಗಮನ ಗುರುತು ಕಂಡವರಿಗೆ
ಗುಣ ದೋಷ ಎಣಿಸದೆ ಬಿರದುಂಟು ಮಾಡೋ ॥ 3 ॥

40. (ನಾಹಪು 5)

ಕಣ್ಣಿನೊಳಗೆ ನೋಡಿ ಕೈವಲ್ಯವ ನೀವು ಕಣ್ಣು ತುಂಬಿ
ಬಣ್ಣಿಸಲಳವಲ್ಲ ಸದ್ಗುರು ಚರಣವ ನಿಜ ನಂಬಿ ॥ ಪ ॥
ಕತ್ತಲೆ ಮನೆಯೊಳು ರತ್ನದ ಬೆಳಕಿದೆ ನೋಡಿಕೊಳ್ಳಿ ।

ಚಿತ್ತದ ಕೊನೆಯಲಿ ಶ್ರೀಹರಿ ನಿಂತಾನ ನೋಡಿಕೊಳ್ಳಿ ॥ 1 ॥
ಒಳಹೊರಗೊಂದಾಗಿ ಹೊಳೆವುತಲಿರುವದು ನಮನ ಮಾಡಿ ।
ಥಳ ಥಳಿಸುವ ಸುವರ್ಣ ಜ್ಯೋತಿಯ ತಾರಕ ನೋಡಿ ॥ 2 ॥
ಉನ್ಮನಿಯೊಳಗಿದ್ದ ಓಂಕಾರ ನಾದವ ಕೇಳಿರಯ್ಯ ।
ಸನ್ಮಾನದಿಂದಲಿ ಸಾಧು ಸಂತರ ಬಲಗೊಂಬಿರಯ್ಯ ॥ 3 ॥
ಕಾಯವು ಸ್ಥಿರವಲ್ಲ ಮಾಯದ ಸಂಸಾರ ಅಳಿಯ ಬೇಕು ।
ಕಾಯವು ಇರಲಿಕ್ಕೆ ಕಮಲನಾಭನಲ್ಲಿ ಕೂಡಬೇಕು ॥ 4 ॥
ಜ್ಞಾನಿಯಾದ ಮೇಲೆ ತಾನೆ ತಾನಾದದ್ದು ತಿಳಿಯಬೇಕು ।
ಸುಜ್ಞಾನಿ ಪುರಂದರ ವಿಠಲರಾಯನ ಕೂಡ ಬೆರೆಯಬೇಕು ॥ 5 ॥

41. (ನಾಹಪು 6)

ಕಣ್ಣಿನೊಳು ಕಣ್ಣು ಕಂಡೆ । ಕಾಣಬಾರದನು ಕಂಡೆ
ಪನ್ನಂಗ ಧರನ ಕಂಡೆ । ನೋಡಿ ಕಣ್ಣಿನೊಳು ॥ ಪ ॥
ಝಗ ಝಗಿಸುವದನು ಕಂಡೆ । ಜ್ಯೋತಿ ಪ್ರಕಾಶವ ಕಂಡೆ ।
ನಿಗಿ ನಿಗಿ ಕಿಚ್ಚ ಸುರಿವುದು ಕಂಡೆ ನೋಡಿ ಕಣ್ಣಿನೊಳು ॥ 1 ॥
ಮುತ್ತು ಸುರಿವುದು ಕಂಡೆ । ಮಲ್ಲಿಗ್ಗಿ ಮಳೆಗರೆವುದು ಕಂಡೆ ।
ರತ್ನದ ಕಾಂತಿ ಕಂಡೆ । ನೋಡಿ ಕಣ್ಣಿನೊಳು ॥ 2 ॥
ಸಾಧು ಸತ್ಪುರುಷರ ಕಂಡೆ । ಸಾಕ್ಷಾನ್ನಿರುಪಾಧಿಯ ಕಂಡೆ ।
ಗುರು ಚಿದಾನಂದನ ಕಂಡೆ । ನೋಡಿ ಕಣ್ಣಿನೊಳು ॥ 3 ॥

42. (ನಾಹಪು 6)

ಕಣ್ಣಿನೊಳು ಕಣ್ಣು ಪುಟ್ಟ ಬಣ್ಣದ ಹೂವ ಕಂಡೆ ।
ಸಣ್ಣ ಮಾತಲ್ಲ ಇದು ಅಣ್ಣಗಳಿರಾ ಕೇಳಿ ನೀವು ॥ ಪ ॥
ಗುರು ಸೂತ್ರ ಧಾರವ ಪಿಡಿದು ಉತ್ತರ ಬಾಗಿಲ ತೆಗೆದೆ
ಚಿತ್ರ ಮಂಟಪದೊಳು ಚಿದ್ರೂಪವ ಕಂಡು
ಚಿತ್ರಾಂಗದೊಳು ಮೂರ್ತಂಗನ ಕಂಡೆನೊ ॥ 1 ॥
ಕೆಂಡವು ಕುಕ್ಕುತ ಕುಂಡಲಿಯ ಎಬ್ಬಿಸಿ
ಮಂಡಲದೊಳು ನನ ಗಂಡನರಿಯದೆ
ಪಿಂಡಾಂಡದೊಳು ಬ್ರಹ್ಮಾಂಡವ ಕಂಡೆನೊ ॥ 2 ॥
ಜ್ಯೋತಿಯೊಳಗೆ ನಿಂತು ಜಾತ ಮುತ್ತವ ಕಂಡೆ ।
ದಾತ ಚಿದಾನಂದ ಸದ್ಗುರು ನಾಥನ
ಮಾತಿಗೆ ಕೂಡಿ ಬಟ್ಟ ಬಯಲಾದೆ ॥ 3 ॥

43. (ನಾಹಪು 7)

ಕಣ್ಣು ಮುಚ್ಚಿದರೂ ಕಾಣಬರುತಿದೆ ಪ್ರಣವ ಸ್ವರೂಪ ।
ಭೃಕುಟಿ ಮಧ್ಯದಲಿ ಪ್ರಕಟವಾಗಿದೆ ಉದಯವಾಗಿ ರೂಪ ॥ ಪ ॥
ನಾಸಿಕಾಗ್ರದಲಿ ವಾಸವಾಗಿದೆ ಬೀಸುವ ಗಾಳಿಗೆ ಭಿನ್ನವಿಲ್ಲದೆ ।
ಏಸೇಸು ದಿನ ತಪವ ಮಾಡಿದರೂ ಯೋಗೇಶ್ವರ ಮುನಿಗೆ ದುರ್ಲಭ ॥ 1 ॥
ಝೇಂಕರಿಸುವದಾ ನಾದ ನೆತ್ತಿಯೊಳು ಓಂಕಾರ ಶಬ್ದವು ಶೂನ್ಯವಾಗದೆ
ಶಂಕರ ಸ್ವರೂಪ ತಿಳಿದ ದತ್ತನ ಬೀಜಮಂತ್ರ ಅಂಕುರದಿಂದ ॥ 2 ॥

44. (ನಾಹಪು 81)

ಕಲ್ಲು ಪೂಜೆಯ ಮಾಡಿ ಕಲ್ಲಿನಂತಾಗುವರೆ ಕೇಳ ಕಲ್ಲೆ ।
ಕಲ್ಲು ಅಲ್ಲ ನೀನು ಅಲ್ಲಮ ಪ್ರಭುವಿದ್ದಿ ಕೇಳ ಕಲ್ಲೆ ॥ ಪ ॥
ಅಡ್ಡಡ್ಡ ಬಿದ್ದೆನ್ನ ಗಡ್ಡೆಲ್ಲ ಮಣ್ಣಾಯ್ತು ಕೇಳ ಕಲ್ಲೆ ।
ಏಳೆಂಬ ಶಬ್ದವು ಬಾಯಿಗೆ ಬರಲಿಲ್ಲ ಕೇಳ ಕಲ್ಲೆ ॥ 1 ॥
ಬೆಲ್ಲದ ಪಾಯಸ ಎಡೆ ಮಾಡಿ ಮುಂದಿಟ್ಟೆ ಕೇಳ ಕಲ್ಲೆ ।
ಕೈಯಾದ್ರು ಚಾಚಲಿಲ್ಲ ಬಾಯಾದ್ರು ತೆರೆಲಿಲ್ಲ ಕೇಳ ಇಲ್ಲೆ ॥ 2 ॥
ಮಾತಾಡದ ದೇವರಿಗೆ ಮನ ಒಯ್ದು ಮುಂದಿಟ್ಟೆ ಕೇಳ ಕಲ್ಲೆ ।
ಮಾತು ನಮ್ಮಲ್ಲಿಲ್ಲ ಜ್ಯೋತಿ ನಿಮ್ಮಲ್ಲಿಲ್ಲ ಕೇಳ ಕಲ್ಲೆ ॥ 3 ॥
ಭಕ್ತನ ಭವಿಯೆಂದು ಬಹು ನಿಂದೆ ಮಾಡಿದೆ ಕೇಳ ಕಲ್ಲೆ ।
ಭಕ್ತನು ಭವಿಯಲ್ಲ ತನ್ನ ತಾ ತಿಳಿದಾತ ಕೇಳ ಕಲ್ಲೆ ॥ 4 ॥
ಧರಣೆಯ ಮೇಲಿದ್ದ ಶಿಲೆಯಲ್ಲ ಲಿಂಗವು ಕೇಳ ಕಲ್ಲೆ ।
ಅರಿಯದ ಮೂರ್ಖರಿಗೆ ಕುರುಹು ತೋರಿದಂತೆ ಕೇಳ ಕಲ್ಲೆ ॥ 5 ॥
ಅತ್ತಿತ್ತ ನೋಡಲು ಚಿತ್ಕಳೆ ನಿನ್ನದು ಕೇಳ ಕಲ್ಲೆ ।
ನಿತ್ಯನಾತ್ಮಕ ನೀನು ಮರೆದಿಯಾತ್ಮಕೆ ಕೇಳ ಕಲ್ಲೆ ॥ 6 ॥
ಗುರುಪಾದ ಘನವೆಂದು ಹೇಳುತ್ತಿಹವು ವೇದ ಕೇಳ ಕಲ್ಲೆ ।
ಪರಬ್ರಹ್ಮ ನೀನಿದ್ದು ಮರೆತಿ ಯಾತಕೆ ಮತ್ತೆ ಕೇಳ ಕಲ್ಲೆ ॥ 7 ॥
ಚೈತನ್ಯವಿಲ್ಲದ ಪ್ರತಿಮೆಯ ಪೂಜೆ ಯಾತಕ್ಕೆ ಕೇಳಕಲ್ಲೆ ।
ಚೈತನ್ಯ ಮೂರುತಿ ನೀನಿದ್ದು ಕೆಡುವರೆ ಕೇಳ ಕಲ್ಲೆ ॥ 8 ॥
ಯಾತಕ್ಕೆ ತಿಳಿಯದೆ ವ್ಯರ್ಥ ಜನ್ಮಕೆ ಬಂದಿ ಕೇಳ ಕಲ್ಲೆ ।
ಜ್ಯೋತಿ ಪ್ರಕಾಶನು ನೀನಿದ್ದು ಮರೆವರೆ ಕೇಳ ಕಲ್ಲೆ ॥ 9 ॥
ಶ್ರುತಿಗಳೇಕೋ ದೇವ ಎನುತ ಕೂಗುತಲಿವೆ ಕೇಳ ಕಲ್ಲೆ ।
ಮತಭೇದವನು ಮಾಡಿ ಹರಿಹರರೆಂದೆನುವಿ ಕೇಳ ಕಲ್ಲೆ ॥ 10 ॥
ವ್ರತನೇಮಗಳ ಮಾಡಿ ಹತನಾಗಿ ಹೋಗುವಿ ಕೇಳ ಕಲ್ಲೆ ।
ಗತಿಯಿಲ್ಲ ನಿನಗಾರು ಯಮನ ಪಾಲಾಗುವಿ ಕೇಳ ಕಲ್ಲೆ ॥ 11 ॥

ವಾದ ತರ್ಕವ ಮಾಡಿ ಹಾದಿ ಕಾಣದೆ ಹೋದಿ ಕೇಳ ಕಲ್ಲೆ ।
ನಾದ ಬಿಂದು ಕಳೆ ಮೂರಕ್ಕತೀತ ನೀ ಕೇಳ ಕಲ್ಲೆ ॥ 12 ॥
ಸಾಧು ಸತ್ಪುರುಷರ ಸಂಗವು ನಿನಗಿಲ್ಲ ಕೇಳ ಕಲ್ಲೆ ।
ಮಾದೇವನಾದಂಥ ಕೂಡಲೂರೇಶನ ಕೂಡು ಕಲ್ಲೆ ॥ 13 ॥

45. (ನಾಹಪು 170)

ಕಲ್ಲು ಮೆತ್ತಗೆ ಮಾಡಿಕೊಳ್ಳಣ್ಣಾ ಬಲ್ಲವನ ಕೇಳಿ ॥ ಪ ॥
ಕಲ್ಲು ಮೆತ್ತಗೆ ಮಾಡಿಕೊಳ್ಳೊ । ಕಲ್ಲು ಸಕ್ಕರೆಗಿಂತ ಸವಿಯೊ ।
ಸಾರ ಅಮೃತ ಸುರಿದು ನೀನು । ಜ್ಞಾನ ಜ್ಯೋತಿ ತುಂಬಿಕೊಳ್ಳೊ ॥ ಅ.ಪ. ॥
ಕಲ್ಲಿನೊಳಗೆ ಪರುಷ ಕಾಣಣ್ಣಾ । ಪರಬ್ರಹ್ಮನರಿಯದೆ
ಕೈಯ ಒಳಗೆ ಬಂದೀತು ಹ್ಯಾಂಗಣ್ಣಾ ॥
ಕಲ್ಲು ಕುಟ್ಟಿಗ ಅಲ್ಲಮಪ್ರಭು ಶಿಲೆಯ ಒಡೆದು ಸೆಲೆಯ ತೆಗೆದ
ನೀರು ನೀರು ಕೂಡಿದ ಬಳಿಕ ಭೇದಭಾವಗಳ್ಯಾಕ ಬೇಕು ॥ 1 ॥
ಕಲ್ಲು ಕಲ್ಪವೃಕ್ಷ ಕಾಣಣ್ಣಾ । ಬೇಡಿದ ಫಲಗಳ ।
ಕೊಡುವ ಬ್ರೀದ ಉಂಟು ನೋಡಣ್ಣಾ ॥
ಗುರುಲಿಂಗ ಜಂಗಮ ಚರಣ । ಹೊಂದಿಗೂಡೊ ಎಂದಿಗಗಲದೆ ।
ಬೆಲ್ಲ ಸವಿಯ ಕೂಡಿದಂತೆ । ಕೂಡಿಕೊಳ್ಳೊ ನೀನು ಇಲ್ಲೆ ॥ 2 ॥

46. (ನಾಹಪು 12)

ಕಾಣುತಿದೆ ಪರ ಬಿಂದು ।
ಶಾಂಭವಿಯ ಕೊನೆಯಲ್ಲಿ ಲಕ್ಷವಿಡಲಾಕ್ಷಣದಿ ॥ ಪ ॥
ಸ್ಥಿರಕಾಯವಾಗಿ ಕುಳಿತು । ವ್ಯವ - ।
ಹರಿಪ ಕರಣೇಂದ್ರಿಯಗಳನು ತಡೆದು ।
ಬಾಹ್ಯ ಪರಿಕರವನಳಿದು । ದೃಷ್ಟಿ ।
ಮನ ಪವನ ಬೆರಸಿ ನಾಸಾಗ್ರದಿ ನೋಡೆ ॥ 1 ॥
ಎಳೆಯಾದ ಮುತ್ತಿನಂತೆ । ದೀಪ- ।
ದುರಿಯುತೆ ಸೆಳೆ ಮಿಂಚಿನಂತೆ ರತ್ನದಂತೆ ।
ತೊಳಪ ವಿದ್ರುಮ ಬಳ್ಳಿಯಂತೆ । ಥಳ ।
ಥಳಿಪ ಶಶಿಸೂರ್ಯ ಕೋಟಿ ಪ್ರಭೆಯಂತೆ ॥ 2 ॥
ಒಳಗಿರ್ಪ ಪ್ರಾಣಲಿಂಗ । ಅದು ।
ಪಳಕ ಕೊಡದೊಳು ದೀಪ ತೆರದಿ ।
ಹೊಳೆವ ನೇತ್ರದ್ವಾರದಿ ಹೊರ । ಹೊಮ್ಮಿ ।
ಬೆಳಗಿ ಗುರುಸಿದ್ಧ ತಾನೆ ಆಗಿ ॥ 3 ॥

47. (ನಾಹಪು 47)

ಕುರುಬರೋ ನಾವು ಕುರುಬರೋ ‖ ಪ ‖
ಹೀಗೆ ಈಸೊಂದು ಕುರಿ ಮರಿ
ಕಾಯ್ದು ಕೊಂಡಿರುವಂಥ ‖ ಅ.ಪ. ‖
ಆರೈದು ಮೂರಾರು ಹತ್ತು ಟಗರುಗಳು
ಮಾಯಾಗಿ ಹೋಗ್ಯಾವ ಈ ಊರ ಒಳಗೆ ।
ಬ್ಯಾರೆ ಇನ್ನೂರದಾ ಹದಿನಾರು ಸಾವಿರ
ಸೂರ‍್ಯಾಗಿ ಹೋಗಿರುವ ಕುರಿ ಮರಿ ಕಾಯ್ದಂಥ ‖ 1 ‖
ಒಳಗೆ ಹೊರಗೆ ಒಂದೇ ಪರಿಯಲ್ಲಿ ನಾರುವದು
ಬಲು ಜಿಡ್ಡು ನಾರುವದು ಇನ್ನು ಬೇರೆ
ಕೊಳೆ ಕೊಳೆತ ಮಲ ಮೂತ್ರ ತುಂಬಿ ಸೋರುತಲಿದೆ ।
ಹಳೆಯ ದೋಷದ ರಗಟೆ ಎಳಕೊಂಡು ತಿರುಗುವಂಥ ‖ 2 ‖
ಏರು ಹಾಳಾಗಲಿ ನೆರೆಯು ಬೀಳಾಗಲಿ
ತೋಳ ಒಯ್ಯಲಿ ನಮ್ಮ ಕುರಿ ಮರಿಗಳನು
ಭಾಳಾಕ್ಷಹರ ನಮ್ಮ ಕೂಡಲೂರೇಶನ
ಒಳಗೆ ಹೊರಗೆ ಹೀಗೆ ಕಾಯ್ದು ಕೊಂಡಿರುವಂಥ ‖ 3 ‖

48. (ನಾಹಪು 88)

ಕೂಡಿದ ರಂಡೀ ಸಂಗಾತ ಇರುವದು ಪುಣ್ಯವೇನೋ
ಮದವಿ ಹೆಂಡತಿ ಬಿಟ್ಟು ತಿರುಗುವದು ನ್ಯಾಯವೇನೋ
ಕಂಡ ಜಾಗೀಲಿ ತಿರುಗುವ ಹೆಣ್ಣು ಕನ್ಯೆಯೇನೊ
ಹಿಡಿ ಹೊನ್ನ ಕೊಟ್ಟರ ಮತ್ತೊಬ್ಬಗ ಹೋಗೋದ ಬಿಡತಾಳೇನೋ ‖ ಪ ‖
ಹೆಂಡರ ಬಿಟ್ಟು ರಂಡೇರ ಮನಿಯೊಳು ಸೇರವರಾದಿರ್ರ್ಯೋ
ರಂಡೇರ ಮಾತ ಕೇಳಿ ನೀವು ಹೆಂಡರಿಗೆ ಬಡ್ಯಾವರಾದಿರ್ರ್ಯೊ
ಹಂಡ ನಾಯಿ ಹಾಂಗ ನಿಂತು ಬೊಗಳೋರಾದಿರ್ರ್ಯೊ
ರಂಡೇರ ಕುಂಡಿ ಮ್ಯಾಲಿನ ಸೀರಿ ಹಿಂಡೇವೆಂದಿರ್ರ್ಯೊ ‖ 1 ‖
ಹೆಂಡತಿ ಹಾದರ ಮಾಡಿದರ ಸುಮ್ಮನಿರಬೇಕು ಯಾಕೇ । ಮತ್ತ
ರಂಡಿ ಹಾದರ ಮಾಡಿದರ ಸಿಟ್ಟಿಗೆ ಬರಬೇಕು ಯಾಕೇ । ಮಚ್ಚಿಲಿ
ಹೊಡದಾರಂಬುದು ಎಚ್ಚರ ಬಡಬೇಕು ಯಾಕೇ । ಮತ್ತ
ಬಿಡದೆ ಅವಳ ಸಂಗ ಮಾಡುವದು ಯಾಕೇ ‖ 2 ‖
ಗುರುವಿನ ಮಗನಾದ ಮೇಲೆ ಅರವು ಬೇಕೊ
ಅರವು ತಿಳಿದ ಮ್ಯಾಲೆ ಅಳಿಯ ಬೇಕೋ
ಮರವು ಎಂಬ ಪರದೆ ತೆಗಯ ಬೇಕೊ
ಗುರು ಮಹಾಂತನ ಕೂಡಿ ಮುಕ್ತಿ ಪಡೆಯ ಬೇಕೊ ‖ 3 ‖

49. (ನಾಹಪು 173)

ಕೇಳು ಚಾತುರಾ ಹಕ್ಕೀ ಭೇದಾ ಕೇಳತಿದ್ದಿ ನಮಗ ।
ಹಕ್ಕೀ ಬ್ಯಾಟಗಾರ ಹೆಸರ ಹೇಳತೇನು ತಿಳಿಯೊ ಮನಸಿನಾಗ ॥ ಪ ॥
ಮೊದಲು ನಾರದ ಫಾಶಿ ಒಗೆದನೊ ಹಕ್ಕಿಯ ತಲಿ ಮ್ಯಾಗ ।
ಶುಕ ಮಹಾರಾಜ ನುಂಗಿ ಕೂತನೊ ಧೀರ ಎಷ್ಟು ಅವಗ ॥
ಗುರು ದತ್ತಾತ್ರಯ ಒತ್ತಿ ಹಿಡಿದನೊ ತನ್ನ ಕೈ ಒಳಗ ।
ಎಂಟು ಆರು ಬರದಲೆ ಇಬ್ಬರು ತುಳಿದರೊ ಹಕ್ಕೀಗೆ ।
ಭೀಷ್ಮಾಚಾರ್ಯನು ಮುಜರ ಇಟ್ಟನೊ ಧನು ಬಾಣ ಕೈಯಾಗ
ವೀರ ಮಾರುತಿ ದೂರ ಒಗೆದನೊ ಬ್ರಹ್ಮಾಂಡಾಚೀಕೆ ॥ 1 ॥
ಹಕ್ಕಿ ಹಸ್ತು ಬ್ರಹ್ಮಾಂಡ ನುಂಗಿತೊ ಒಣಗಿ ಅಠರಾ ವನಸ್ಪತೀದು ।
ಪಾಖಂಡಲ್ಲ ಪರಮೇಶ್ವರ ಸಾಕ್ಷಿ ಹಾನ ಮಾತಿಂದು ।
ನನ್ನ ನುಂಗಿತೊ ನಿನ್ನ ನುಂಗಿತೊ ಹ್ಯಾಂಗ ಹೇಳು ಈಗ ।
ಡಪ್ಪ ನುಂಗಿತೊ ತುಂತುಣಿ ನುಂಗಿತೊ ತುರಾಯಿ ಘಳಿಗ್ಯಾಗ ।
ಗುರುಲಿಂಗ ಜಂಗಮ ದಯಾಸಾಗರ ಹಾರ ಬೆನ್ನ ಮ್ಯಾಗ ।
ಎಂದೆಂದೂ ಪರನಿಂದೆಯಾಡಬೇಡ ಪಾಪ ಪದರಾಗ ॥ 2 ॥

50. (ನಾಹಪು 174)

ಕೇಳು ಶಾಯಿರಾ ಹಿಡಿಯೊ ಖೂನಾ ಈ ಮಿಕ ಅದ ನೋಡು ಎಂಥಾದು
ಎಂಟು ಮಾರಿ ಏಳು ಕೋಡು ನಮ್ಮ ನಿಮ್ಮ ಪೈಲಿಸದಾಚೀದು ॥ ಪ ॥
ಕೇಳು ಶಾಯಿರಾ ಮಾತಿನ ತರ್ಕ ನೆನಪ ಬಂದಿತ್ತೂ ಮತ್ತೊಂದು ।
ಸಾವಿರ ಭೇದ ಸಾಸ್ವಿ ಕಾಳದ ಬೆಂಡ ಒಡದಿತೊ ಗೋದೀದು ।
ಸಪ್ತ ಧಾತುಗಳು ಮೂರು ಮೂರಿಂದ್ರಿಯ ಮತ್ತೊಂದಿಂದ್ರಿಯ ಹೆಚ್ಚಿಂದು ।
ಐವತ್ತಾರು ಪಕ್ಕ ಬಿಚ್ಚಿ ಕುಣುತದ ಬಲು ಗರ್ದೀದು ।
ಟೊಂಕಿನ ಒಳಗ ಉಡದಾರ ಹೊಳೂತದ ಎಣಿಸಕೊರೊ ಎಳ ಎಳೀದು ।
ಉಡದಾರದೊಳಗ ಒಬ್ಬ ಋಷಿ ಕೂತಾನೊ ಖೂನ ಹೇಳತೇನು ಅವಂದು ॥ 1 ॥
ಮಿಕದ ಬ್ಯಾಟಗೆ ಮುಂದ ಹೊಂಟರೊ ನಾಕು ಮಂದಿ ವಾಲೀಕಾರ ।
ನಾಕು ಮಂದಿಗೆ ಕುಮಕನಾದರೊ ಹದಿನೆಂಟು ಮಂದಿ ವೀರಜೋರ ।
ಕಾಳಜದೊಳಗ ಬಾಣ ನಟ್ಟಿತ್ತೊ ಅಠರಾ ಪದ್ಮದ ಆಕಾರ ।
ತಲಿ ಹಾರಿ ಭೂಮಿಗೆ ಬಿದ್ದಿತೊ ಭೂಮಿ ನಡಗಿತೊ ಥರಥರ ।
ಧನ್ಯ ನಿಂಬರಗಿ ದೊಡ್ಡ ಕ್ಷೇತ್ರ ಅದಿ ನಾರಾಯಣ ಅವತಾರ ।
ಗುರುಲಿಂಗ ಜಂಗಮ ಸರ್ವೇಶಾ ತಾ ನಿರ್ಬಯಲಾದೊ ಆಕಾರ ॥ 2 ॥

51. (ನಾಹಪು 184)

ಕೈ ಬಿಡಬ್ಯಾಡಯ್ಯ ನಮ್ಮ ಗುರುವೆ । ಕೈ
ಬಿಡಬ್ಯಾಡಯ್ಯ ಹಿಡಿದಿ ಯಾಕಯ್ಯ ॥
ನೀನು ಬಿಟ್ಟರೆ ನಾನು ಆದೇನಿನ್ನೇನು ॥ ಪ ॥
ಬಂದರಾರೂ ಮೂರೂ ಸ್ವಾಮಿ ಆಧಾರಿರು ।
ಅವರಂತೆ ಆಗೆನ್ನ ಅಂತರಿಸ ಬ್ಯಾಡೋ ನಿನ್ನ ॥ 1 ॥
ಮಾಯಾ ಸಂಗಾ ಹಿನ್ನೇನು । ಮಹಾದೇವ ಕೋಪ
ನೀನು । ಮಹಾಘನ ಬಾ..... ಮಹಿಮಾ ತಿಳಿದು
ನಿಮ್ಮ ॥ 2 ॥ ಯೋಗ ಮನಿಯ ಸೇರಿ ಶಿವ ಶಿವ
ನಿಮಗಾಗಿ ಪ್ರೇಮದ ಜಲ ಉಕ್ಕಿ ಪರಮ ಪಾದಕ
ಇಕ್ಕಿ ॥ 3 ॥ ನಿನ್ನ ರೂಪಕ ಮೆಚ್ಚಿ ನಾನಾಗುಣ
ಗಳು ಸುಟ್ಟು । ನರ ಭವದೊಳು ನಿನ್ನ ಅಗಲಿ
ನಾ ಇರಲಾರೆನಾ ॥ 4 ॥ ನೀನು ಇಲ್ಲದೆ ನಾನು
ಇದ್ದರೆ ಫಲವೇನು । ಆರಂಭದೊಳಗೂಡಿ ಆತ್ಮಾ ..
ನಿಸಿ ಏದಾಡೊ ॥ 5 ॥ ಅಂತರಂಗದ ಭಾವಾ
ನಿನ್ನ ಬಯಸಿತು ಜೀವಾ । ಇನ್ನೇನು ಬೇಡಲಿ
ನಿನ್ನ ಕೂಡ ಆಡಲಿ ॥ 6 ॥ ಜಗ ಕೈಯ ಬಿಟ್ಟರೆ
ಜಗದೀಶ ಬಿಡಬೇಡಾ ಹೇಳಿ ಕೊಳ್ಳುವೆ ನಿಮ್ಮ
ಸಿದ್ಧಾಂತ ಶಿವ ನಿಮ್ಮ ॥ 7 ॥ ಸರ್ವರು ಬಿಟ್ಟರೆ
ಸರ್ವೇಶ ಬಿಡಬೇಡ ಗುರು ರಾಯ ನಿಮ್ಮಂಥ
ಉಪಕಾರ ಇನ್ನೆಂಥ ॥ 8 ॥ ಗುರುವೆ ನೀ ಗತಿ
ಯೆಂದು ಬೇಡುವೆ ನಿಮಗೊಂದು । ಪಾರ
ಈ ಭವದಿಂದ ಪರಮಾತ್ಮ ಮಾಡೆಂದು ॥ 9 ॥
ದೇಶಕಧಿಕವಾದ ವಾಸ ಉಮ್ಮದಿ ಪಾದ ।
ಈಶಾ ನಿನ್ನೊಳಗಾಡಿ । ಈಸೆನೋ ಭವ
ದಾಡಿ । ಕೈ ಬಿಡಬ್ಯಾಡಯ್ಯ ನಮ್ಮ ॥ 10 ॥

52. (ನಾಹಪು 110)

ಕೊಡ ನಾನು ಹೊರಲಾರೆನ ತಾಯವ್ವ ।
ಕೊಡ ನಾನು ಹೊರಲಾರೆನು ॥ ಪ. ॥ ಕೊಡ ನಾನು ಹೊರಲಾರೆ
ಕಷ್ಟವ ಪಡಲಾರೆ । ಮರಳಿ ಮರಳಿ ಮಾಯದಿ
ಇರಲಾರೆನಮ್ಮ ॥ ಅ.ಪ. ॥ ತಿಳಿಯದ ಒಂಬತ್ತು
ತೂತಿನ ಕೊಡವ । ಯಾವಾಗ ಮಲ ಮೂತ್ರ ಒಸರುವ

ಕೊಡವ । ಅತ್ತಿತ್ತ ನೋಡಿದರೆ ನಾರುವ ಕೊಡವ
ನಿತ್ಯ ನಾ ತೊಳೆದರಶುಚಿಯಾದ ಕೊಡವ ॥ 1 ॥
ರೂಪಕೆ ಬಂದರೆ ಮೆರೆಯುವ ಕೊಡವ । ಆಪತ್ತು
ಬಂದರೆ ನರಳುವ ಕೊಡವ । ಅತ್ತಿತ್ತ ನೋಡಿದರ
ನಾರುವ ಕೊಡವ । ಮತ್ತೆ ಪಾಪದ ಪುಂಜದ ...
ಕೊಡವ ॥ 2 ॥ ಎತ್ತಲೆ ಬಂತವ್ವಾ ಎನಗಿದು
ಕೊಡವು । ಯಾವ ಪಾಪಿಯು ಮಾಡಿದ ಕೊಡವು
ಬಾಲ ಚಿದಾನಂದ ಮಾಡಿದ ಕೊಡವ ।
ಬಹು ಬಾಳ್ವೆಯು ಮಾಡಿ ನಡೆದು ಹೋಗುವ ಕೊಡವ ॥ 3 ॥

53. (ನಾಹಪು 84)

ಕೋತಿಯಂತೆ ಕುಣದಾಡ ಬೇಡಾ । ನೀತಿ ಮಾರ್ಗವ ಹಿಡಿ
ಯಲೋ ಮೂಢಾ ॥ ಪ ॥
ಹಳ್ಳ ಕೊಳ್ಳವ ಹರಿದಾಡು ಹಂದಿ ।
ನಾನಾ ಜನ್ಮವು ತಿರುಗಿಲ್ಲಿ ಬಂದಿ ।
ಹೆಂಡರ ಮಕ್ಕಳ ಮರಿ ಮಾಡಿಕೊಂಡಿ
ಮುಪ್ಪಿನ ಕಾಲಕೆ ಅವಿಚಾರಿಗೊಂಡಿ ॥ 1 ॥
ಹೆಂಡರ ಮಕ್ಕಳ ಪ್ರಪಂಚಕ್ಕಾಗಿ
ದುಡಿದು ಹಾಕಿದಿ ಮುದಿ ಕೋಣನಾಗಿ ।
ಮಡಿದು ಹೋಗುವಾಗ ಯಾರಿಲ್ಲೊ ಗೂಗಿ
ನಿನ್ನೊಳಗೆ ನೀ ತಿಳಕೋಲೋ ಕಾಗಿ ॥ 2 ॥
ರಾಯರಿರಲಿಕ್ಕೆ ಮದಗಜನಂತೆ
ಬಾಗಿ ನಡೆಯೊ ಬಾಳಿ ಸುಳಿಯಂತೆ ।
ಪುರಂದರ ವಿಠಲರು ಪದ ಮಾಡ್ಯಾರಂತೆ ।
ಮೂಢ ಜನರೆಲ್ಲಾ ತಿಳಕೋಬೇಕಂತೆ ॥ 3 ॥

54. (ನಾಹಪು 72)

ಗಂಡ ಎಂಥ ಪುಂಡಗಾರನೇ । ಪೂರ್ವದ
ಕರ್ಮ ತೊಳೆದು ಎನ್ನ ಕರ ಪಿಡಿದನೆ ॥ ಪ ॥
ಆರು ಮಂದಿ ಎನ್ನ ಸವತೀರು । ಘಾರಿ ಕತಬೀ
ಕೊಟ್ಟು ಗಂಡಾ ಹೋಮದಡಗಿ ಸಲ್ಲುವಂಥ
ಕಾಮಿನಿ ಬಾರಂತ ಕರೆದಾನೇ ॥ ಅ.ಪ. ॥
ಐದು ಮಂದಿ ಕವಡ ಕಂಟಕರು ।

ಮೇಲಾರು ಮಂದಿ ... ಟಲಾ ಘಾಣಾಗಿ
ಕಾಡುವರೆ ॥ ಭಂಟ ಎನ್ನ ಗಂಡ ...
ಎಂಟು ಮಂದಿಯ ಮುರಿದು ಒತ್ತಿ । ಮೂರು
ಮಂದಿಗೆ ಕೈದಿ ಹಾಕಿ ಬೈದು ತನ್ನ ಬದಿಲಿ ಕರೆದನೇ ॥ 1 ॥
ಆರು ಮಂದಿ ಅಡ್ಡ
ಸೂಳೇರಾ ನಾ ಮಾಡುವಂಥ ಬದುಕು
ಬಾಳ್ವೆಗೆ ಅಡ್ಡ ಬರುವಾನ್ನೈ । ಭಾಳ ಲೋಚನ
ಎನ್ನ ಗಂಡ ಆರು ಮಂದಿಯ ಹೊರಗೆ ತೆಗೆದು
ಬಾಳವಂತ ಆಗೆಂದು ಆಳಿನಾಳಾಗಿ ದುಡಿಯುವ ॥ 2 ॥
ಧರುಣಿಯೊಳು ಕರುಣಾಳು ಮಸುತಿ ಕರುಣಾಳು ।
ಭೀಮಾ ವೀರ ಭದ್ರನ ರೂಪದಲ್ಲೆ ಮರಣ ರಹಿತ
ಳಾದಳೆಂದು ಚರಣ ಎನ್ನ ಮೇಲೆ ಇಟ್ಟು ... ಳ
ರಾಚೋಟ ಇದರ ಪರಿಯ ಹೇಳದ ಅನುಭವ
ಇದರ ಸರಿಯ ॥ 3 ॥

55. (ನಾಹಪು 33)

ಗುರಿಯ ಒಗೆದೆನೋ ಬ್ರಹ್ಮಕೆ । ಗುರಿಯ ಒಗೆದೆನೊ ॥ ಪ ॥
ಸರ್ವ ಕಾಲದಲಿ ಶರೀರವ ಮರೆತು । ಸ್ಮರಣೆ ಗುರು ನರಸಿಂಹನ ಆಗಿ ॥
ಮಾತಾಡುವ ಮುಚ್ಚಳವ ಬಿಗಿದು
ಭೂತ ಪಂಚಕ ತುಬಾಕಿಲೆ ।
ಖ್ಯಾತಿಯ ಭಕ್ತಿ ಜ್ಞಾನ ವೈರಾಗ್ಯ
ಜಾತಿಮದ್ದ ಮೂರು ಬೆರಳಿಗೆ ಹೊಯಿದು ॥ 1 ॥
ಇಡಾ ಪಿಂಗಳ ಗುಂಡನೆ ಹಾಕಿ
ರೂಢಿಗೆ ಎಸಿಸುವ ಗಜವನು ಜಡಿದು
ಗಾಢಾನುಗ್ರಹ ರಂಜಕವರಿದು
ಹೂಡಿ ವೀರಾಸನ ಒಳತಾಗಿ ಕುಳಿತು ॥ 2 ॥
ಗುರು ಕರುಣೆಂಬುವ ಜಾವಗಿಯೊತ್ತಿ
ಎರಡೂ ದೃಷ್ಟಿ ಒಂದೇ ಮಾಡಿ
ಊರ್ಧ್ವ ಮುಜುರೆಯನು ನೆಟ್ಟಗೆ ನಿಲಿಸಿ
ಇರುವ ನಾಸಿಕದ ಕೊನೆಯಲಿ ಮುಳುಗಿ ॥ 3 ॥
ಘನ ರಂಜಕ ಈ ತನುವು ಮುಚ್ಚಲಿ
ತನು ತುಬಾಕಿಯ ತೂಗ್ಯಾಡ ಗೊಡದೆ
ಮನ ಮಿಸುಕದೆ ಮತ್ತೊಂದ ನೆನೆಯದೆ

ವಿನಯದಿ ನಿತ್ಯ ಎಚ್ಚರದಿಂದ ॥ 4 ॥
ಬೆದರಿ ಓಡಲು ಅಷ್ಟ ಮದಗಜಗಳು ತಾವು
ಉದುರಿ ಬೀಳಲು ಅರಿಷ್ಯಡ್ವರ್ಗದ ತಲಿ ।
ಸಾಧು ಜ್ಞಾನಿಗಳು ಹೌದು ಹೌದು ಎನ್ನಲು
ಸಚ್ಚಿದಾನಂದ ನರಿಸಿಂಹನು ಆಗಿ ॥ 4 ॥

56. (ನಾಹಪು 109)

ಗುರು ಕಾಣದಿರಲಾರೆನೆ । ಎನ್ನಯ ಗುರುವಿನ
ನೋಡದೆ ಇರಲಾರೆನೆ ॥ ಸದ್ಗುರುವಿನ ಕಾಣದೆ
ಇರಲಾರೆನೆ ಭಿನ್ನ ಬುದ್ಧಿಯನಳಿದು ತನ್ನ
ಕೂಡಿಸಿದಂಥ ॥ ಪ ॥
ಆರು ಗುಣಗಳ ಮುರಿದಾ ।
ಗುರುರಾಯ ಅಷ್ಟ ಮದಗಳ ತರಿದಾ
ಮೂರೆರಡು ಕ್ಲೇಶವು ಹಾರಿಸಿ ಬಿಟ್ಟಂಥ ॥ 1 ॥
ಹತ್ತು ಮಂದಿಯ ಗೆಲಿದಾ ।
ಚಿತ್ತದ ಚಂಚಲವನು ತಡೆದಾ
ಕತ್ತಲಿ ಪರಿಹರಿಸಿ ಗೊತ್ತಿನೊಳಿಟ್ಟಂಥ ॥ 2 ॥
ಶಿರದ ಮೇಲೆ ಕರವಿಟ್ಟನೆ
ಪರಿಪರಿಯ ವ್ಯಸನವ ಹರಿದಿಟ್ಟನೆ ।
ಪರತರ ಪರ ಬ್ರಹ್ಮ ಗುರುರಾಯನಾದಂಥ ॥ 3 ॥

57. (ನಾಹಪು 165)

ಗುರು ಚರಣ ಕಮಲದಲ್ಲಿ ಭೃಂಗನಾಗೋ ನೀ ।
ಸ್ಥಿರವಿಲ್ಲ ಸಂಸಾರ ನರಜನ್ಮದೊಳು ಬಂದು ॥
ಪರ ತತ್ತ್ವ ತಿಳಿದು ಸಾಧುರ ಸಂಗಿಯಾಗೊ ನೀ ॥ 1 ॥
ಮೌನ ಹಿಡಿದು ಮುದ್ರೆ ಬಲಿದು
ಜ್ಞಾನ ಜ್ಯೋತಿಯೊಳಗೆ ನಲಿದು
ಸ್ವಾನುಭವಾಮೃತವ ಸವಿದು
ನಿಸ್ಸಂಗನಾಗೊ ನೀ ॥ 2 ॥
ಮುಪ್ಪಿನ ಮುನಿಯ ಪಿಡಿದು ವಚನ ।
ಕಪ್ಪುಗೊರಳ ಕಾಡಸಿದ್ಧ- ।
ನಿದ್ದೆಡೆಗೆ ಹೋಗಿ ಸಾಷ್ಟಾಂಗನಾಗೊ ನೀ ॥ 3 ॥

58. (ನಾಹಪು 177)

ಗುರುರಾಯ ಮಹಾರಾಜರು । ಘೋರ ಶರಧಿಯ ದಾಟಿಸು
ವರು ॥ ವೀರರು ಶೂರರು ಧೀರರು ಗಂಭೀರರು ।
ಕರವು ಪಿಡಿದು ಎನಗೆ । ಹರಿಯ ತೋರಿಸುವಂಥ ॥ ಪ ॥
ಶ್ರೇಷ್ಠರು ಜಗದೊಳಗೆ । ಅವರ ಮಹಿಮಾ ದಾರಿಗೆ
ತಿಳಿಯದು । ಭವರೋಗ ತೆಗೆಯುವರು । ಘನ
ಮಂತ್ರಿಯಾದಾರು । ಶರಣು ಬಂದವರಿಗೆ ಮರಣ
ತಪ್ಪಿಸುವಂಥ ॥ 1 ॥ ದುಷ್ಟ ಗುಣಗಳೆಲ್ಲ ಅವರು
ದೃಷ್ಟಿಯಿಂದ ನೋಡದೆ । ಅಷ್ಟಮದಗಳೆಲ್ಲ
ನಷ್ಟನೆ ಮಾಡುವರು ॥ ಸೃಷ್ಟಿಯೊಡೆಯನ ಪಾದ
ಥಟ್ಟನೆ ತೋರಿಸುವಂಥ ॥ 2 ॥ ಶಕ್ತಿಯಿಲ್ಲದ
ಮನುಜರಿಗೆ । ಅವರು ಯುಕ್ತಿಯಿಂದ ಪಾರ್ಹಾಸ್ವರು ।
ಭಕ್ತಿಯನ್ನು ಕೊಟ್ಟು । ವಿರಕ್ತರನು ಮಾಡಿ ।
ಮುಕ್ತಿದಾಯಕ ನಮ್ಮ ಉಮದೀಶ ಪ್ರಭುರಾಯ ॥ 3 ॥

59. (ನಾಹಪು 19)

ಗುರುವಿಗೆ ಶರಣು ನಾ ಹೋದೆನೆ ।
ಸ್ವಯಮೇವ ಬ್ರಹ್ಮ ನಾ ಆದೆನೇ ॥ ಪ ॥
ಮರೆತಿದ್ದೆನೇ ನಾ ನನ್ನದು ನನಗೆ
ಶ್ರೀ ಗುರು ತೋರಿದ ತನ್ನೊಳಗೆ ॥ 1 ॥
ಜೀವ ಶಿವ ಎರಡೂ ಒಂದಾಯಿತೆ
ಜನನ ಮರಣ ಭ್ರಾಂತಿ ಹೋಯಿತೆ ॥ 2 ॥
ಅಜ್ಞಾನ ಕತ್ತಲಿ ಜ್ಞಾನ ಬೆಳಗೆ ...
ಮಾಣಿಕ ತುಂಬಿದ ಜಗದೊಳಗೆ ॥ 3 ॥

60. (ನಾಹಪು 35)

ಗುರುವಿನ ಗುಲಾಮನಾಗುವ ತನಕ
ದೊರೆಯದಣ್ಣ ಮುಕುತಿ ॥ ಪ ॥
ಪರಿಪರಿ ಶಾಸ್ತ್ರವನೋದಿದರೇನು । ವ್ಯರ್ಥವಾಯಿತು ಯುಕುತಿ ॥ ಅ.ಪ. ॥
ಆರು ಶಾಸ್ತ್ರವ ಓದಿದರಿಲ್ಲಾ । ಮೂರಾರು ಪುರಾಣವ ಮುಗಿಸಿದರಿಲ್ಲಾ ।
ಸರ್ವನ್ಯಾಯ ಕಥೆಗಳನೆಲ್ಲಾ ಧೀರನಾಗಿ ತಾ ಕೇಳಿದರಿಲ್ಲಾ ॥ 1 ॥
ಕೊರಳೊಳು ಮಾಲೆ ಧರಿಸಿದರಿಲ್ಲಾ ಬೆರಳೊಳು ಜಪಮಣಿ ಎಣಿಸಿದರಿಲ್ಲಾ ।
ಮರುಳನಾಗಿ ತಾ ಶರೀರಕೆ ಬೂದಿ ಹಚ್ಚಿಕೊಂಡು ತಾನು ತಿರಗಿದರಿಲ್ಲಾ ॥ 2 ॥

ನಾರಿಯ ಭೋಗ ಅಳಿಸಿದರಿಲ್ಲಾ। ಶರೀರದ ಸುಖವು ಬಿಡಿಸಿದರಿಲ್ಲಾ।
ಮಾರಪಿತ ನಮ್ಮ ಪುರಂದರ ವಿಠಲನ ಸೇರಿಕೊಂಡು ತಾ
ಪಡೆಯುವ ತನಕ ॥ 3 ॥

61. (ನಾಹಪು 25)

ಗುರುವಿನ ಮಗ ನೀನಾದ ಮೇಲೆ ಗುರುವಿನ ಗುಣ
ಬೇಡು ಅಣ್ಣಾ ॥ ಪ. ॥ ಸರಿಯೆಂದು ಸರ್ವರು ಶಿರಬಾಗಿ ನಡಿ
ಬೇಕು ಎರವಿನ ಮಾತ್ಯಾಕಣ್ಣಾ ॥ ಅ.ಪ. ॥
ಧರ್ಮಿನಲ್ಲೇನದ ಸಣ್ಣಿನಲ್ಲೇನದ ನುಣ್ಣಗೆ
ನೋಡಣ್ಣಾ। ಕಣ್ಣು ಕಾಣದೆ ನೀನು ಕಂಡ್ಹಾಂಗೆ
ಆಡಿದರೆ ಸಾಧುರ ಮಂಡಳಿಗೆ ಹೊರತಾದಿಯಣ್ಣಾ ॥ 1 ॥
ಕಾಮ ಕ್ರೋಧ ಲೋಭ ಮೋಹವು ಬೇಕೆಂದು ಸರ್ವರು
ನುಡಿಯುತಾರಣ್ಣಾ। ಬ್ಯಾಡಂಬುದ್ಯಾವಲ್ಲಿ ಖೂನವು
ತಿಳಿಯಬೇಕಣ್ಣಾ ॥ 2 ॥
ಕಲ್ಲಿನೊಳಗಿನ ... ಬೆಲ್ಲದು ತಿರುತದ ನಿಲ್ಲದೆ ತಿಳಿಯಬೇಕಣ್ಣಾ।
...ಲ್ಲದ ಮಾತವು ಹೇಳಿದರೆ ತಿಳಿಯದು।
ಸದ್ಗುರು ಭಾವೂರಾಯನ ಪಾದಕ್ಕೆರಗಣ್ಣಾ ॥ 3 ॥

62. (ನಾಹಪು 79)

ಗುರುವಿನ ಮರೆತೆಲ್ಲೋ। ಮನುಜ ನೀ ॥ ಪ ॥
ಪರಿ ಪರಿ ಕಾಮನ ಬಾಧೆಗೆ ಸಿಲುಕಿ ನೀ।
ಮರುಳೆ ಮಣ್ಣು ಮಸಿ ಅದಿ ನೋಡೋ ನೀ ॥ ಅ.ಪ. ॥
ಮಡದಿ ಮಕ್ಕಳಿಗಾಗಿ ದುಡಿರು ದುಡಿದು
ಅದಿಯೊ ಮುದಿಗೂಗಿ ಮನುಜ ನೀ
ಜಡಿದೆಮದೂತರು ಹಿಡಿದೆಳೆದೊಯ್ಯುವಾಗ
ಬಿಡಿಸುವರಾರಿಲ್ಲ ತಿಳಿಯಲೊ ಕಾಗಿ ನೀ ॥ 1 ॥
ಕಾಯ ಮೆಚ್ಚಿದೆಲ್ಲ। ಕಾಯದ।
ಮಾಯ ತಿಳಿಯಲಿಲ್ಲ। ಮನುಜ ನೀ।
ಸಾಯುತ ಹುಟ್ಟುತ ಆಯಾಸ ಬಡುತ
ಬಾಯಿ ತೆರೆದು ಭ್ರಷ್ಟಾದಿ ನೋಡೊ ನೀ ॥ 2 ॥
ಹಮ್ಮವಳಿಯಲಿಲ್ಲ। ತಮ್ಮ ನೀ।
ಬ್ರಹ್ಮವ ತಿಳಿಲಿಲ್ಲ। ಮನುಜ ನೀ।

ಸನ್ಮತ ತಿಳಿಯದೆ ಉನ್ಮತ ಸೇವಿಸಿ
ಮನ್ಮಥನಾಸೆಗೆ ದಾಸನಾದಿ ನೀ ॥ 3 ॥
ಕಲ್ಪನೆ ಕಳೆಯಲಿಲ್ಲ । ಮನಸಿನ ।
ಕಪಟವು ಬಿಡಲಿಲ್ಲ ಮನುಜ ನೀ ।
ಕಪಟ ರಹಿತ ಶ್ರೀ ಪುರಂದರ ವಿಠಲನ
ಮುಟ್ಟಿ ಭಜಿಸಿ ಭವ ನೀಗಲಿಲ್ಲೊ ನೀ ॥ 4 ॥

63. (ನಾಹಪು 108)

ಗುರುವಿನ ಹ್ಯಾಂಗ ಮರೆಯಲಿ ॥ ಪ ॥
ಬೋಧ ಕೊಟ್ಟು ಸುಖದಲ್ಲಿಟ್ಟು ನೀಗಿ ಬಿಟ್ಟವನ ।
ಪಾಪಗಳನು ಸುಟ್ಟವನ ಜ್ಞಾನದ ಮಾರ್ಗ ಹೇಳಿದನ ॥ ಅ.ಪ. ॥
ಮೊದಲ ಮೈಲಿಗಿ ಕಳೆಯಿಸಿ ಒಳ್ಳೇ ವಸ್ತ್ರ ಉಡಿಸಿದನ ।
ಅದು ಇದು ಮನಸಿನ ಕಲ್ಪನೆ ಬಿಡಿಸಿ ನಿಶ್ಚಯ ಮಾಡಿದನ ॥
ಸದಮಲ ಮಹಾ ಜ್ಯೋತಿಯ ಬೆಳಕಲಿ ಇರಂತ ಹೇಳಿದನ
ಸದರಿನ ಮೇಲೆ ಕುಳ್ಳಿರಿಸೆನಗೆ ಸುಧೆಯ ಕುಡಿಸಿದನ ॥ 1 ॥
ಆಡ ಬಾರದಂಥ ಆಟಾ ಆಡಿ ತೋರಿದನ ।
ತೋರಬಾರದಂಥ ಸುಖವ ತೋರಿಸಿ ಕೊಟ್ಟವನ
ಮೀರಿದ ನಾದಬ್ರಹ್ಮದೊಳಗೆ ನಲಿನಲಿದಾಡಿದನ
ಪೂರ್ಣವಾದ ಆನಂದದಲ್ಲಿ ಸೇರಿ ಕೊಳ್ಳೆಂದವನ ॥ 2 ॥
ಕಾಣಬಾರದಂಥ ವಸ್ತುವ ಕಾಣಿಸಿ ಕೊಟ್ಟವನ ।
ಹೀನ ಮನದ ಸಂಶಯ ಬಿಡಿಸಿ ನಿಶ್ಚಯ ಮಾಡಿದನ
ಕೋಣನಾಗ ಬೇಡ ಎಂದು ವಿವೇಕ ಹೇಳಿದನ
ಜ್ಞಾನಪತಿಪ್ರಿಯ ನಿರುಪಾಧಿ ಸಿದ್ಧನ ಕಾಣದೆ ಹ್ಯಾಂಗಿರಲೆ ॥ 3 ॥

64. (ನಾಹಪು 24)

ಗುರುವೆ ನಿನಗಾಗಿ ನಾನು ನೋಂಪಿದ್ದೆನೊ
ಕರುಣದಿ ಬಂದೆಯೊ ನೀನು
ಹರಿ ಸುರ ಬ್ರಹ್ಮರು ಅರಿಯರು ನಿನ್ನ
ಚರಣ ಕಮಲದಿ ಭೃಂಗ ನಾನಾದೆನೋ ॥ ಪ ॥
ಸ್ತನಗಳೊ ಒಪ್ಪುವ ಇನಿ ತುಟಿಗಳೊ
ಘನ ಬೆಳಗಿನ ಕಣ್ಣುಗಳೊ
ಅನುಪಮ ತೇಜದ ಬೆಳಗಳೊ
ಆನಂದ ಮಲ್ಲಿಗಿ ಗೊನೆಗಳೊ

ತನು ಮನ ಧನವನ್ನು ನಾ ನಿನಗೊಪ್ಪಿಸಿ
ಅನುಮಾನವಿಲ್ಲದೆ ಬಂದು ಕೂಡಿದೆ ಸ್ವಾಮಿ ॥ 1 ॥
ವಾಣಿಯೊ ಸರ್ಪಾಕಾರದ ವೇಣಿಯೊ
ಅರಿವುಳ್ಳ ನಿಜ ಗುರು ಪ್ರಾಣಿಯೊ
ಪರಮ ಪುರುಷನ ರಾಣಿಯೊ
ಸಜ್ಜನರೊಳತಿ ಪ್ರೇಮಿಯೊ
ಅರಿತು ನಾನು ನಿಮ್ಮ ಗುರುತಿಗೆ ಬಂದೆನೊ
ಪರಮ ಪಾವನ ಮೂರ್ತಿ ಮಾಡುವೆ ಕೀರ್ತಿ ॥ 2 ॥
ಬಂದನೊ ಗುರು ಬಂದನೊ ಮುತ್ತಿನ ಮೂಗುತಿ
ತಂದನೊ ಮೂಗಿನೊಳಿಟ್ಟುಕೊಳ್ಳೆಂದನೊ
ಒಂದೂ ಸಂಶಯ ಬ್ಯಾಡೆಂದನೊ
ಇಂದಿಗೆ ಬ್ರಹ್ಮ ನೀನೆಂದನೊ
ಅಂದು ಇಂದೆಂಬ ಸಂದೇಹವಿಲ್ಲದೆ
ಕೂಡಲೂರೇಶನ ಕೂಡೆಂದನೊ ॥ 3 ॥

65. (ನಾಹಪು 1)

ಗುರುವೇ ನಿಮ್ಮಾಜ್ಞೆಯನು ಮೀರದೆ ನಡೆದವನು
ನರನು ಎನ್ನಲು ಬೇಡ ಪರಮಾತ್ಮನೋ ॥ ಪ ॥
ಅರಿಯದ ಪ್ರಾಣಿಗಳು ಅವರೇನು ಬಲ್ಲರು
ಪರಕೆ ಪರತರವಾದ ಪರ ವಸ್ತು ಅವನು ॥ ಅ.ಪ. ॥
ಹೆಪ್ಪು ಹಾಲಿಗೆ ಕೊಡಲು ತುಪ್ಪ ಅದರೊಳಗಾಗಿ
ತುಪ್ಪ ಕೂಡುವದೇನೊ ಹಾಲಿನೊಳು ।
ನಿಷ್ಪತ್ತಿ ನಿಜ ರೂಪನಾದಂಥ ಪುರುಷನು
ಅಪ್ಪಿ ಸಂಸಾರಕ್ಕೆ ಒಳಗಾಗದವನು ॥ 1 ॥
ನದಿಯು ತಾ ಪುಟ್ಟಿ ಅದು ಸಮುದ್ರವ ಕೂಡಲು
ನದಿಯು ತಾ ಪೋಗುವದೆ ಪುಟ್ಟಿದೆಡೆಗೆ
ಸದಮಲ ಸುಜ್ಞಾನಿ ಪ್ರಪಂಚ ಮಾಡಲು
ಅದರೊಳು ಕೂಡಿರುವ ಬಗೆ ಬೇರೆ ಅವನು ॥ 2 ॥
ಮುತ್ತು ನೀರೊಳು ಪುಟ್ಟಿ ಮತ್ತೆ ನೀರಾಗುವದೆ
ಮುತ್ತು ಲಕ್ಷಾಂತರಕೆ ಬೆಲೆಯಾಯಿತು ।
ತತ್ತ್ವಜ್ಞಾನಿಯವನು ಹುಟ್ಟುವ ನರನಲ್ಲ
ಅತ್ಯಂತ ಆನಂದ ಪರಿಪೂರ್ಣನವನು ॥ 3 ॥

ಗರುಡನ ಮಂತ್ರವ ಕಲಿತಿರುವಾತಗೆ
ಉರಗ ಕಚ್ಚಿದರೆ ವಿಷವೇರುವದೆ ।
ಪರಿ ಪರಿ ವಿಷಯದೊಳು ಮುಳುಗಾಡುವಾತಗೆ
ಧರ್ಮ ಕರ್ಮಗಳು ಅತಗೇನು ॥ 4 ॥
ಜಾತಿಯೊಳು ಪುಟ್ಟಿ ಅಜಾತನಾದವಗೆ
ಜಾತಿ ಕರ್ಮಗಳು ಅತಗೇನು
ಜ್ಯೋತಿ ಪ್ರಕಾಶ ನಮ್ಮ ಕೂಡಲೂರೇಶನು
ದಾತ ಪ್ರಖ್ಯಾತ ಅವಧೂತನವನು ॥ 5 ॥

66. (ನಾಹಪು 59)

ಗೂಡು ಸಿಕ್ಕಿತಲ್ಲ । ಗೂಡಿನ ಜಾಡನು ಸಿಗಲಿಲ್ಲಾ ॥
ಕೂಡಿದ ಸತಿಯಳು ಅಗಲಿ ಹೋದ ಮೇಲೆ
ಗೋಡೆ ಬಿದ್ದು ಬಯಲಾಯಿತು ಗುರುವೇ ರಾಮ ॥ ಪ ॥
ಎಚ್ಚರಗೊಳಲಿಲ್ಲಾ ಮನ ಇದು ಹುಚ್ಚವಾಯಿತಲ್ಲಾ ।
ಅಚ್ಚ ಹೇಸಿಕೆ ದೇಹ ಮುಚ್ಚಿರು ಚರ್ಮಕೆ
ಎಚ್ಚಂತಿರಬೇಕೊ । ಮನ ಎಚ್ಚರಿರಬೇಕೊ ॥ 1 ॥
ಸಕ್ಕರಿ ಪಾಯಸಾ ಮನ ಇದು ಸವಿ ಮಾಡಿ ಉಣಲಿಲ್ಲಾ
ತುಪ್ಪ ಬಿಂದಿಗಿ ತಿಪ್ಪೆಯ ಮೇಲೆ ಧಪ್ಪನೆ ಬಿದ್ದಿತಲ್ಲಾ ಗುರುವೆ ಧಪ್ಪನೆ ಬಿದ್ದಿ ತಲ್ಲಾ ॥ 2 ॥
ಯೋಗ ಮಾಡಲಿಲ್ಲಾ ಯೋಗದ ಭೋಗವ ತಿಳಿಯಲಿಲ್ಲಾ ।
ಸ್ವಾಮಿ ಶ್ರೀ ಪುರಂದರ ವಿಠಲನ ಪಾದವ ನೆನೆದರೆ
ಮೋಕ್ಷವಾದಿತಲ್ಲಾ ಗುರುವೆ ಮುಕ್ತಿ ಆದಿತಲ್ಲಾ ॥ 3 ॥

67. (ನಾಹಪು 46)

ಗೊಲ್ಲರೋ ನಾವು ಗೊಲ್ಲರೊ ॥ ಪ ॥
ಘಟವೆಂಬ ಹುತ್ತಿನೊಳು । ದಿಟವಾದ ಹಾವ ಹಿಡಿದು ।
ಕಟಬಾಯಿಯೊಳಗಿನ । ಕಡಿ ಹಲ್ಲು ಮುರಿವಂಥ ॥ ಅ.ಪ. ॥
ನಡು ನಾಡಿಗೆ ಹೆಡೆ ಇಟ್ಟಿಹುದು । ಸರ್ಪದ ಬಾಲಾ ।
ಕಡಿ ಚಕ್ರ ಮುಟ್ಟಿಹುದು ।
ಒಡೆಯ ಶ್ರೀಗುರು ಮಂತ್ರವ । ಅಡಿ ಅಡಿಗೆ ಜಪಿಸುತ ।
ಕಡಿದೀತೆಂಬುವ ಅಂಜಿಕಿಲ್ಲದೆ ಹಿಡಿವಂಥ ॥ 1 ॥
ಹೆಡೆಯ ಮೇಲಕ್ಕೇರಿಸಿ । ಮೇಲಿನ ಬಾಲ
ಕೆಳ ಭಾಗಕ್ಕಿಳಿಸಿ ।
ಒಳಗಿರು ತ್ರಿಕೋಣ ಗಳಿಗೆಯೊಳು ಪೊಕ್ಕು

ಕಳೆ ನಾದ ಸರ್ಪದ ಫಣಿರತ್ನ ಪಡೆವಂಥ ॥ 2 ॥
ಸದ್ಭಾವವೆಂಬ ಬುಟ್ಟಿಯಲಿ । ಹಾವನು ಹಿಡಿದು ।
ಒಳಗೆ ಹಾಕಿದೆವಿಲ್ಲಿ ।
ದೇವ ದೇವರಿಗೆಲ್ಲ ದೇವ ಶಿಖಾಮಣಿ
ದೇವ ಬಲಭೀಮನ ಮೂಲವ ತಿಳಿದಂಥ ॥ 3 ॥

68. (ನಾಹಪು 165)

ಚಿಂತ್ಯಾಕ ಮಾಡತೀ ಶಿವನೆ ಇದ್ದಾನೇಳು ಪ್ರಾಣಿ ॥ ಪ ॥
ಉದಕದಲಿ ಉತ್ಪತ್ತಿ ಮಾಡುವರ್ಯಾರು
ಹೊಟ್ಯಾನ ಶಿಶುವನು ಸಲಹುವರ್ಯಾರು
ಸಾಕಿ ನಿನ್ನ ಜೋಕೆ ಮಾಡಿದವನೆ ಇದ್ದಾನೇಳು ಪ್ರಾಣಿ ॥ 1 ॥
ಹಿಂದೆ ನಿನ್ನ ಸಲಹಿದರ್ಯಾರು
ಮುಂದೆ ನಿನ್ನ ಕೊಲ್ಲುವರ್ಯಾರು
ಅಂದಿಗಿಂದಿಗೆಂದಿಗಾದರು ಶಿವನೆ ಇದ್ದಾನೇಳು ಪ್ರಾಣಿ ॥ 2 ॥
ಅಂತರದಿ ಅಂಬರ ಇಟ್ಟವರ್ಯಾರು
ರವಿ ಶಶಿ ಮಾರ್ಗವ ನಡಿಸುವರ್ಯಾರು
ಗುರುಲಿಂಗ ಜಂಗಮ ಸರ್ವೇಶಾ ತಾ ಶಿವನೆ
ಇದ್ದಾನೇಳು ಪ್ರಾಣಿ ॥ 3 ॥

69. (ನಾಹಪು 93)

(ಈ ಪದದ ಬಗ್ಗೆ ಕೊನೆಗೆ ಬರೆಯಲಾದ ಟಿಪ್ಪಣಿ ನೋಡಿ).

ಛೀ ಛೀ ಛೀ ಛೀ ಕಂಡೆಯ ಮನವೆ । ಇಂಥ
ನೀಚ ವೃತ್ತಿಗಳನು ಬಿಡು ಕಂಡೆಯ ಮನವೆ ॥ ಪ ॥
ಕಿವಿಗೊಟ್ಟು ಮಧುರ ನಾದಕೆ ಹುಲ್ಲೆಯು
ರವದ ಬಲೆಗೆ ಸಿಕ್ಕು ಬಿದ್ದುದನರಿಯೆ ।
ನವ ಮೋಹನಾಂಗಿಯರ ಕೋಕಿಲಾಲಾಪದ
ಸವಿ ಕೇಳದಚ್ಯುತನ ಕಥೆ ಕೇಳು ಮನವೆ ॥ 1 ॥
ನಲಿದೆದ್ದು ಕರಿ ಎಳೆಯ ತೃಣ ಸ್ಪರುಶನಕಾಗಿ
ಕುಳಿಗೆ ಬಿದ್ದಿರುವದ ಕಂಡು ಕಂಡರಿಯೆ
ನಳಿನಾಕ್ಷಿಯರ ಸಂಗವ ಮೆಚ್ಚಿ ಕೆಡದೆ ಶ್ರೀ
ಲಲನೇಶನಂಘ್ರಿಯನಪ್ಪಿರೊ ಮನವೆ ॥ 2 ॥
ಗಾಣದ ತುದಿಯ ಮಾಂಸವ ಮೆಲುವ ಮತ್ಸ್ಯವು
ಪ್ರಾಣವ ಬಿಡುವದು ಕಂಡು ಕಂಡರಿಯೆ

ಮಾನಿನಿಯ ಬಯಸದೆ ಶ್ರೀ ನಾರಾಯಣನ
ಧ್ಯಾನಾಮೃತವನು ಸವಿದುಣ್ಣೊ ಮನವೆ ॥ 3 ॥
ಪಣ್ಣೆಂದು ಭ್ರಮಿಸಿ ಪತಂಗ ದೀಪದಿ ಬಿದ್ದು
ಕಣ್ಣು ಗೆಡುವುದನು ಕಂಡು ಕಂಡರಿಯೆ ॥
ಬಣ್ಣದ ಬಾಲೆಯರ ರೂಪಕೆ ಮರುಳಾಗಿ
ಮಣ್ಣು ತಿನ್ನದೆ ಮಾರನಯ್ಯನ ನೆನೆ ಮನವೆ ॥ 4 ॥
ಅಳಿ ಪರಿಮಳಕಾಗಿ ಕಮಲದೊಳಗೆ ಸಿಲುಕಿ
ಅಳಿದು ಹೋಹುದನು ಕಂಡು ಕಂಡರಿಯೆ
ಬಳಲದೆ ವರ ಪುರಂದರ ವಿಠಲನಂಘ್ರಿಯ
ತುಳಸಿ ನಿರ್ಮಾಲ್ಯವಾಘ್ರಾಣಿಸು ಮನವೆ ॥ 5 ॥

70. (ನಾಹಪು 197)

ಜ್ಞಾನ ಮೂರ್ತಿ ತೇಜರಾದ ಭಾವುರಾವ ಗುರುಗಳು ।
ನಾಮ ಮಂತ್ರ ಸುಲಭದಿಂದ ಮುಕ್ತಿ ಪಂಥ ತೋರ್ಪರು ॥ ಪ. ॥
ಎಲ್ಲಿ ನೋಡಿದಲ್ಲಿ ತಮ್ಮ ಶಿಷ್ಯ ಸಮೂಹದೊಂದಿಗೆ ।
ದಾಸಬೋಧವನ್ನು ಓದಿ ನಾಮ ಘೋಷ ಮಾಳ್ಪರು ॥ 1 ॥
ಸಣ್ಣ ದೊಡ್ಡ ಮಗುವು ಎಂಬ ಭಿನ್ನ ಭಾವವಿಲ್ಲದೆ ।
ಸಕಲರನ್ನು ಏಕ ದೃಷ್ಟಿಯಿಂದ ಸತತ ನೋಳ್ಪರು ॥ 2 ॥
ಅಖಿಲ ಪೃಥ್ವಿಗೊಡೆಯನಾದ ಪರಮ ಈಶನನ್ನು
ತಮ್ಮ ಹೃದಯದಲ್ಲಿ ವಾಸ ಮಾಡಿಕೊಂಡಿರುವರು ॥ 3 ॥

71. (ನಾಹಪು 53)

ಜ್ಞಾನಿಯ ಗುಣ ಬೇರೆ ಮತ್ತೆ ॥ ಅ - ॥
ಜ್ಞಾನಿಯ ಗುಣ ಬೇರೆ ॥ ಪ ॥
ಹೀನ ಮನುಜ ಸತ್ಸಂಗವ ಮಾಡಲು
ತಾನು ತನ್ನ ಗುಣ ಬಿಡದಿಹನು ॥ ಅ.ಪ. ॥
ಕತ್ತೆ ಕುದುರೆಗಳು ಒಂದೇ ಸ್ಥಳದಲಿ
ಒತ್ತಿ ಮೇಯುವವು ಹರುಷದಲಿ
ಕತ್ತೆ ಮೈಲಿಗೆ ಹೊತ್ತು ಸಾಯುವದು
ಮತ್ತೆ ತೇಜಿಯು ಒಡೆಯನ ಕಾಯುವದು ॥ 1 ॥
ಭೃಂಗ ಜೇನುಗಳು ಒಂದೆಡೆ ಕೂಡಿ
ಹಿಂಗದೆ ಮಧು ಪಾನವ ಮಾಡುವವು
ಭೃಂಗ ಹೋಗಿ ಮರ ಕಡಿಯುವದು

ಮಂಗಳ ತುಪ್ಪವ ಜೇನು ಕೊಡುವದು ॥ 2 ॥
ಉಪ್ಪು ಮುತ್ತುಗಳು ನೀರಲಿ ಹುಟ್ಟುವವು
ಉಪ್ಪು ಕರಗಿ ಮುತ್ತು ಉಳಿಯುವದು
ತತ್ತ್ವ ತಿಳಿದು ನಮ್ಮ ಕೂಡಲೂರೇಶನುಲಿ
ಆತ್ಮ ಹಿಡಿದು ಪರಮಾತ್ಮನಾದನು ॥ 3 ॥

72. (ನಾಹಪು 45)

ತನ್ನ ತಾ ತಿಳಿದು ತಾ ಬ್ರಹ್ಮನಾದಾಗ
ಕೂನ ಗುರುತುಗಳುಂಟೆ ಕೊರಡೆ ?
ಭಾನು ಕೋಟಿ ತೇಜ ಹೃದಯದೊಳಿಂಬಿಟ್ಟು
ಮೌನ ಮುದ್ರೆಯೊಳು ನೀನಿರು ಕೊರಡೆ ॥ ಪ ॥
ತತ್ತ್ವದು ಸ್ಥಿತಿ ನಾಲ್ಕು ನಿತ್ಯವೆಂದರಿದವಗೆ
ಮತ್ತೆ ನೇಮಗಳುಂಟೆ ಮರುಳೆ
ಸತ್ ಚಿತ್ತಾನಂದ ನಿತ್ಯ ಪರಿಪೂರ್ಣನಾದವಗೆ
ಮತ್ತೆ ಭವ ಬಾಧೆಯುಂಟೆ ಕೊರಡೆ ॥ 1 ॥
ಆಗಮಕತೀತ ಅನಾಥ ಬಾಂಧವನೆಂದು
ಕೂಗುವವು ಸ್ಮೃತಿ ವೇದ ಕೊರಡೆ
ಸಾಗರದ ತೆರೆ ನೊರೆ ತೋರಿ ಅಡಗುವಂತೆ
ನೀಗುವದು ಭವ ಮಾಲೆ ಕೊರಡೆ ॥ 2 ॥
ಆಚಾರ ಸಂಕಲ್ಪ ನೇಮ ಕ್ರಿಯೆಗಳ
ಯೋಚಿಸಿ ತಿಳಿ ನೀನು ಕೊರಡೆ
ಖೇಚರಿ ಭೂಚರಿ ಸಾಚರಿ ಶಾಂಭವಿ -
ಯಾಚೆಯ ವಸ್ತು ನೀ ಕೊರಡೆ ॥ 3 ॥
ಲಿಂಗ ಕಟ್ಟಿ ಕೊಂಡು ಜಂಗಮನಾಗಿರುವೆ
ಲಿಂಗ್ಯಾರು ನೀ ಯಾರು ಕೊರಡೆ
ಲಿಂಗವೆಂಬೆರಡಕ್ಷರರ್ಥವ ತಿಳಿಯದೆ
ಮಂಗನಂದದಿ ಕಟ್ಟಿದ್ಯಾಕೆ ಕೊರಡೆ ॥ 4 ॥
ಬಾಯಿ ಮಾತುಗಳಿಂದ ಮಾಯೆ ಅಳಿವುದುಂಟೆ
ಆಯಾಸ ಪಡುತೀ ಯಾಕೆ ಕೊರಡೆ
ದೇವ ಕೂಡಲೂರೇಶನಲಿ ಕಾಯವಳಿದು
ಕೈವಲ್ಯ ಪದವಿಯ ಪಡೆಯೊ ಕೊರಡೆ ॥ 5 ॥

73. (ನಾಹಪು 168)

ತಾರಿಸೊ ಎನ್ನ ಪಾಲಿಸೊ । ಭವದು:ಖ
ವಾರಿಧಿ ಸೆಳವಿನೊಳಾದೆನೊ ॥ ಪ ॥
ಮೂರು ಮಂದಿ ಎನ್ನ ಮುತ್ತುವರು ।
ಆರು ಮಂದಿ ಎನ್ನ ಕಟ್ಟುವರು
ಹತ್ತು ಮಂದಿ ಎನ್ನ ಎತ್ತುವ ಕಾಲಕೆ
ಕರುಣದಿ ರಕ್ಷಸು, ಕಂದ ಇರುವೆನು ನಿಮ್ಮ ॥ 1 ॥
ಬಂಬಲ ಮಧ್ಯದಿ ಅಂಬುಜ ತಾನಾಗಿ
ಶಾಖೆಗೆ ಹಚ್ಚಿತ್ತೊ ಬಳ್ಳಿ ತಾನಾಗಿ ।
ಬಳ್ಳಿಯ ಪಾಶದೊಳು ನಾನಾದೆನೊ
ದಯಮಾಡಿ ರಕ್ಷಿಸೊ ಯಾದವ ಗೋಪಾಲ ॥ 2 ॥
ಸತಿಸುತ ಸೌಭಾಗ್ಯ ಗತಿಯೆಂದು ನಾನು
ಮೋಹದ ಬಲೆಯೊಳಗೆ ನಾನಾದೆನೊ
ಸತಿದು:ಖ ನಾ ಎಷ್ಟಂತ ಹೇಳಲಿ
ಯತಿರೂಪ ಗುರುಲಿಂಗ ಜಂಗಮ ನಿಮಗೆ ॥ 3 ॥

74. (ನಾಹಪು 40)

ತಿಳಿಯಬೇಕು ನಿಜ ಸುಖದ ನಿಲಯ । ಸಹಜಾನಂದ ॥ ಪ ॥
ಮೊದಲ ಭಕ್ತಿಗೆ ಬದಲವಾಗದೆ ।
ಮಧುರ ವಚನದಲ್ಲಿ ಮನಸು । ಕದಲದೇಕ ರೂಪವಾಗಿ ॥ 1 ॥
ಸುಳುವು ಅರಿಯದೆ । ಒಳಗೆ ಮರೆಯದೆ ।
ಝಳ ಝಳಾದ ಮನಸು ತನ್ನ । ನಳಿನದೊಳಗೆ ಸತ್ಯ ವಚನ ॥ 2 ॥
ಗುರು ಬೋಧದಿ ಅರಿತು ಮುದದಿ
ಪರಿ ಪರಿಯ ವಿಕಲ್ಪನಳಿದು । ನಿರುಪಾಧಿಯಾಗುವ ಕೀಲ ॥ 3 ॥

75. (ನಾಹಪು 38)

ತಿಳಿಸುವ ಮಾತಲ್ಲಾ । ತಿಳಿಯದೆ ।
ತಿಳಿಸುವ ಮಾತಲ್ಲ ॥ ಪ ॥
ತಿಳಿಸದೆ ತಿಳಿಯದು । ತಿಳಿಯದೆ ಹೊಳೆಯದು
ಹೊಳೆದ ಮೇಲಳಿಯದು । ಅಳಿದ
ಮೇಲುಳಿಯದು ॥ ಅ.ಪ. ॥

ಭೇದ ಅಳಿಯ ಬೇಕು । ಮನದ ವಿ-
ವಾದ ಕಳೆಯ ಬೇಕು ।
ಸಾಧು ಸಂತರ ಸಂಗವ ಸಾಧಿಸಿ
ತತ್ತ್ವದ ಹಾದಿ ಹಿಡಿಯಬೇಕು ॥ 1 ॥
ಎಚ್ಚರವನು ಮರೆತಿ । ಮದ ಮೋಹ
ಮತ್ಸರದೊಳು ಬೆರೆತಿ ॥
ಅಚ್ಚ ನಾಚಿಕಿ ದೇಹ ಮುಚ್ಚಿರುವ ಚರ್ಮಕ್ಕೆ
ನಿಶ್ಚಯವೆಂದು ಅರಿವೆ ಥೇಕರವೆ ॥ 2 ॥
ಸಾಧಿಸುವದು ಮುಕ್ತಿ । ನಿಜಾನಂದ
ಬೋಧದೊಳಗೆ ಯುಕ್ತಿ
ಆದಿಮೂರುತಿ ಭವತಾರಕದೇವನ
ಪೂಜಿಸದೆ ಭಜಿಸದೆ ॥ 3 ॥

76. (ನಾಹಪು 87)

ತೀರ್ಥವನು ಪಿಡಿದವರು ತ್ರಿನಾಮಧಾರಿಗಳೆ ।
ಜನ್ಮ ಸಾರ್ಥಕವಿಲ್ಲದವರು ಭಾಗವತರಹುದೇ ॥ ಪ ॥
ಮೂಗು ಹಿಡಿದು ಜಲದೊಳಗೆ ಮುಳುಗಿ ಜಪವನೆ ಮಾಡಿ
ಭಾಗವತ ಶಾಸ್ತ್ರಾದಿಗಳನೆ ಓದಿ
ಬಾಗಿ ಪರ ಸತಿಯನು ಬಯಸಿ ಕಣ್ಣಿಡುವಂಥ
ರೋಗಿ ಬ್ರಾಹ್ಮಣರಲ್ಲ ದೇವ ಬ್ರಾಹ್ಮಣರೇ ॥ 1 ॥
ಪಟ್ಟೆ ನಾಮವ ಹಚ್ಚಿ ಪಾತ್ರೆ ಕೈಯಲಿ ಹಿಡಿದು ।
ಗುಟ್ಟಿನಲಿ ಪೂಜಿಸುತ ಗುರುತರಿಯದೆ ।
ಕೆಟ್ಟ ಕೂಗನು ಕೂಗಿ ಹೊಟ್ಟೆಯನು ಹೊರೆವಂಥ ।
ಪಟ್ಟ ಗುಡುಮರೆಲ್ಲ ಪರಮ ವೈಷ್ಣವರೇ ॥ 2 ॥
ಲಿಂಗಾಂಗದೊಳಗಿರುವ ಅನುಭವವನರಿಯದೆ ।
ಅಂಗ ಲಿಂಗದ ಗುರುತು ನೆಲೆಯಾಗದೆ ।
ಜಂಗಮ ಸ್ಥಾನದ ಹೊಲಬವನರಿಯದೆ
ಭಂಗಿ ಮುಕ್ಕುವರೆಲ್ಲ ಲಿಂಗವಂತರಹುದೇ ॥ 3 ॥
ಅಲ್ಲಾ ಖುದಾನೆಂಬ ಅರ್ಥವನರಿಯದೆ
ಮೂಲ ಶಾಸ್ತ್ರದ ಹೊಲಬು ಗುರುತಾಗದೆ ।
ಸುಳ್ಳೆ ಕೂಗನು ಕೂಗಿ ಬಾಯಿಂದ ಬೊಗಳುವ
ಕಳ್ಳರಿಗೆ ತಾ ವೀರ ಸ್ವರ್ಗ ದೊರಕುವದೇ ॥ 4 ॥

ಆರು ಚಕ್ರದ ನೆಲೆಯು ಅಷ್ಟಾಂಗ ಯೋಗದಲಿ
ಮೂರು ಮೂರತಿ ಮೂರು ಕಡೆಗೆ ನಿಲಿಸಿ ।
ಕಾರುಣ್ಯನಿಧಿ ಕಾಗಿನೆಲೆಯಾದಿ ಕೇಶವನ
ಸೇರಿ ಬದುಕುವರಿಗೆ ಮನಕೆ ಒಲವುಂಟೇ ॥ 5 ॥

77. (ನಾಹಪು 109)

ತೇರ ಎಳೆವುತೈತಿ ನೋಡಲಿಕೆ
ಹೋಗೂಣು ಬಾರೆ ॥ ಪ ॥
ನಾಲ್ಕು ಗಾಲಿ ಒಂದೆ ಜೋಡಿ
ಆಶೆಂಬುದು ಮೇಲೆ ದೂಡಿ ।
ಎಂಟು ಖಾನಿಂದು ಮಂಟಪ ಕಟ್ಟಿ
ಬಂಟರೈವರು ಕೂಡಿಕೊಂಡು ॥ 1 ॥
ಗರ್ವ ಎಂಬ ಖಂಬ ಜಡಿದು
ನರ ಎಂಬ ಹಗ್ಗ ಬಿಗಿದು
ಗರ್ವ ಮರವ ಕೀಲಿ ಜಡಿದು
ಅರವಿನಿಂದ ಜಗ್ಗುತಾರೆ ॥ 2 ॥
ಮರ್ತ್ಯ ಎಂಬುದು ಮಾಯಾದ ಪ್ಯಾಟಿ
ಅರ್ತಿಲಿಂದ ಕಟ್ಟೇತವ್ವಾ ।
ಗರ್ತ್ಯಾರೆಲ್ಲರು ಕೂಡಿ ಕೊಂಡು
ಅರ್ತಿಲಿಂದ ಹಿಡಿದಾರ ಧಾರಿ ॥ 3 ॥

78. (ನಾಹಪು 100)

ದೃಷ್ಟಿಯೊಳಗೆ ದೃಷ್ಟಿ ನಿಂತಿತು । ನೀ ನೋಡು ಸಖಿಯೆ
ದೃಷ್ಟವೆಲ್ಲ ನಷ್ಟವಾಯಿತು ॥ ಪ ॥
ಕಷ್ಟವೆಲ್ಲ ಕಡೆಗೆ ಒತ್ತಿ ದೃಷ್ಟವನ್ನು ಮೀರಿ ನಿಂತು
ಸೃಷ್ಟಿಯೊಳಗೆ ತುಷ್ಟಿ ಗೈದೆನೆ ॥ ನೀ ನೋಡು ॥ ಅ.ಪ. ॥
ಕರ್ಮವೆಲ್ಲ ಕಾಣದೆ ಹೋಯಿತು । ಈ ಸರ್ವ ಕಾಲ ।
ಧರ್ಮವೆಲ್ಲ ತೂಗಿ ನಿಂತಿತು ॥
ಸರ್ವವೆಲ್ಲ ಇನ್ನು ಮತ್ತೆ । ಉರ್ವಿಯೊಳಗೆ ಜನಿಸಲಾಗಿ
ಪರ್ವತಾಗ್ರ ಭೂಮಿಯಿನ್ನು ನಿರ್ವಿಕಾರ ತೋರಿತಲ್ಲ ॥ 1 ॥
ಐದು ಮಂದಿ ಕೂಡಿ ಬಂದರು । ಕೂಡಿ ಬಂದು ।
ಐದಕ್ಕೈದು ಅಗಲದಾದರು ॥
ಐದರೊಳಗೆ ನೋಡಲಿನ್ನು ಐದಕ್ಕೈದು ತಾನೆ ಎಲ್ಲ ।

ಐದರೊಳಗೆ ಬಂದು ನಿಂತೆನೇ ॥ 2 ॥
ಹಿಂದು ಎಂದು ಕಂಡಿದ್ದಿಲ್ಲವೆ । ಇಂಥ ಸುಖವ
ಮುಂದೆ ನಾನು ಯಾರಿಗುಸುರಲೇ ।
ತಂದೆ ಗುರು ಭವತಾರಕನ ಪಾದ । ಹೊಂದಿದವರ ಕೇಳಿದೆನೊ
ಎಂದಿಗಿಂದಿಗೆ ಹೀಗೆ ಎಂಬುವರೇ ॥ 3 ॥

79. (ನಾಹಪು 37)

ದೇವನಲ್ಲವೇನೋ ಸದ್ಗುರು । ಮಹಾದೇವನಲ್ಲವೇನು ॥ ಪ ॥
ಆದಿಯೊಳು ಸಿದ್ಧರು ಹೋದ ದಾರಿಯ ತೋರಿ
ಭೇದವ ಬಿಡಿಸಿದ ಸಾಧು ಮೂರುತಿ ಗುರು ॥ ಅ.ಪ. ॥
ನರಜನ್ಮದೊಳಗೆ ಬಂದು ಪ್ರಪಂಚದ
ಕಡಲ ಮಧ್ಯದಲಿ ನಿಂತು ।
ಅರಿತು ಮರೆತು ಒಮ್ಮೆ ಗುರುವೆಂದು ನೆನೆದರೆ
ಗುರುತಿಟ್ಟು ಅವರಿಗೆ ಪರತತ್ತ್ವ ತೋರಿದ ॥ 1 ॥
ಆಶಾ ಪಾಶವ ಬಿಡಿಸಿ ಮಾಡಿದ ಬಹು
ದೋಷ ಕರ್ಮವ ಕೆಡಿಸಿ ।
ನ್ಯಾಸ ಧ್ಯಾಸದ ಜಪ ಮಾಡೆಂದು ಬೋಧಿಸಿ । ಪ್ರ-
ಕಾಶ ತೋರಿದ ಈಶ ಮಹೇಶನು ॥ 2 ॥
ಭಕ್ತಿ ಭಾವವ ನೋಡದೆ । ನಂಬಿದವರಿಗೆ
ಮುಕ್ತಿಯ ಪಾಲಿಸುವ ।
ಕರ್ತೃ ಸದ್ಗುರು ಭವತಾರಕ ದೇವನು
ಪ್ರತ್ಯಕ್ಷವಾದಂಥ ಪರಬ್ರಹ್ಮರೂಪನು ॥ 3 ॥

80. (ನಾಹಪು 15)

ಧನವಗಳಿಸ ಬೇಕೆಂಥಾದು । ಈ ।
ಜನರಿಗೆ ಕಾಣಿಸದಂಥಾದು ॥ ಪ ॥
ಅನುದಿನ ಹರಿ ಹರ ಬ್ರಹ್ಮಾದಿಕರು
ಹೌದು ಹೌದು ಅನುವಂಥಾದ್ದು ॥ ಅ.ಪ. ॥
ಕೊಟ್ಟರೆ ತೀರದಂಥಾದು । ತನ್ನ ।
ಬಿಟ್ಟು ಹೊರಗೆ ಹೋಗದಂಥಾದು ।
ಗಂಟನು ಬಿಚ್ಚಿ ಬಯಲೊಳಗಿಟ್ಟರೆ
ಯಾರ್‍ಯಾರು ಮುಟ್ಟದಂಥಾದು ॥ 1 ॥
ಕರ್ಮಕೆ ಬಾರದಂಥಾದು । ನಿಜ ।

ಧರ್ಮಕೆ ತೋರುವಂಥಾದು ।
ನಿರ್ಮಲವಾದ ಮನಸೊಂದಾದರೆ
ಮಲವನು ಮೀರುವಂಥಾದು ॥ 2 ॥
ಮರವನೆ ತಾರದಂಥಾದು । ನಿಜ ।
ಅರಿವಿನೊಳಗೆ ಇರುವಂಥಾದು ।
ಗುರುಭವತಾರಕ ಭಜಕರ ಕಣ್ಣಿಗೆ
ತುಂಬಿ ತುಂಬಿ ತೋರುವಂಥಾದು ॥ 3 ॥

81. (ನಾಹಪು 75)

ನಂಬ ಬೇಡವೊ ಮನುಜಾ । ನಂಬ ಬೇಡವೊ ।
ನಂಬಿ ಕೆಡುವರುಂಟೆ ಮಣ್ಣು - ಬೊಂಬೆಯಂಥ ತನುವಿದನು ॥ ಪ ॥
ಮಾಯೆಯಿಂದ ಜನಿಸಿ ಬೆಳೆದು । ಕಾಯವೆನಿಸಿ ಸತ್ತು ಕಡೆಗೆ
ನಾಯಿ ನರಿಯು ತಿಂದು ಕೆಡುವ । ಹೇಯವಾದ ವಪುವನಿದನು ॥ 1 ॥
ನೂರು ಬಾಳ್ವೆನೆಂದು ತನ್ನ । ಸೇರಿ ನಲಿವರಾಶೆಯನ್ನು
ನೀರ ಕಲಿಸಿ ನಿಮಿಷದಲ್ಲಿ । ತೋರಿ ಅಳಿವ ದೇಹವಿದನು ॥ 2 ॥
ಧರೆಯ ಭೋಗಕೆಳಸಿ ಪರವ । ಮರೆದು ತನ್ನ ನಚ್ಚಿದವರ-
ನೆರಡು ವಿಧದಿ ಕೆಡಸಿ ಯಮನ- ಪುರಕೆ ಕಳುಹುವಂಗವಿದನು ॥ 3 ॥
ಸುತ್ತು ಹುಟ್ಟಿ ತಾನು ತನ್ನ । ನಿತ್ಯವೆಂದು ಹೊಂದಿದವರ ।
ಕತ್ತೆಯಂತಿರಿಹ ಪರಕ್ಕೆ । ಸುತ್ತಿ ಸುಳಿವ ಗಾತ್ರವಿದನು ॥ 4 ॥
ಒಡೆಯ ದುಡಿಯದಮಲ ಸುಖವ । ಪಡೆಯೆ ಶ್ರೀಗುರುಸಿದ್ಧನಿಂದೆ ।
ಕೊಡದ ತೆರದೊಳೊಡೆದು । ಧರೆಯೊ-ಳಡಗಿ ಕೆಡುವ ಜಡತನುವನು ॥ 5 ॥

82. (ನಾಹಪು 67)

ನರಜನ್ಮ ಬಂದಾಗ ನಾಲಿಗೆ ಇರುವಾಗ
ಕೃಷ್ಣಾ ಎನ ಬಾರದೆ ॥ಪ.॥
ಕೃಷ್ಣಾ ಎಂದರೆ ಕಷ್ಟವು ಪರಿಹಾರ । ಕೃಷ್ಣಾ ಎನಬಾರದೆ ॥ಅ.ಪ.॥
ಮಲಗಿದ್ದು ಮೈ ಮುರಿದೇಳುತ್ತಲೊಮ್ಮೆ ಕೃಷ್ಣಾ ಎನಬಾರದೆ
ಸುಳಿದಾಡುತ ಮನೆಯೊಳಗಾದರು ಕೃಷ್ಣಾ ಎನಬಾರದೆ ॥1॥
ಸ್ನಾನ ಪಾನ ಜಪ ತಪಗಳ ಮಾಡುತ ಕೃಷ್ಣಾ ಎನಬಾರದೆ ।
ಶಾಲ್ಯನ್ನ ಷಡುರಸ ತಿಂದು ತೃಪ್ತನಾಗಿ ಕೃಷ್ಣಾ ಎನಬಾರದೆ ॥2॥
ಗಂಧವ ಪೂಸಿ ತಾಂಬುಲವ ಮೆಲುವಾಗ ಕೃಷ್ಣಾ ಎನಬಾರದೆ ।
ಚೆಂದುಳ್ಳ ಹಾಸಿಗೆಯೊಳು ಕುಳಿತೊಮ್ಮೆ ಶ್ರೀ ಕೃಷ್ಣಾ ಎನಬಾರದೆ ॥3॥
ಕಂದನ್ನ ಬಿಗಿದಪ್ಪಿ ಮುದ್ದಾಡುತ ಕೃಷ್ಣಾ ಎನಬಾರದೆ ।

ಮಂದಗಾಮಿನಿಯೊಳು ಸರಸವಾಡುತಲೊಮ್ಮೆ ಕೃಷ್ಣಾ ಎನಬಾರದೆ ॥4॥
ಮೇರೆ ತಪ್ಪಿ ಮಾತನಾಡುವಾಗಲೊಮ್ಮೆ ಕೃಷ್ಣಾ ಎನಬಾರದೆ ।
ದಾರಿಯ ನಡೆವಾಗ ಭಾರವ ಹೊರುವಾಗ ಕೃಷ್ಣಾ ಎನಬಾರದೆ ॥5॥
ನೀಗದಾಲೋಚನೆ ರೋಗೋಪದ್ರದಲೊಮ್ಮೆ ಕೃಷ್ಣಾ ಎನಬಾರದೆ ।
ಒಳ್ಳೇ । ಭೋಗ ಪಡೆದು ಅನುರಾಗದಿಂದಿರುವಾಗ ಕೃಷ್ಣಾ ಎನಬಾರದೆ ॥6॥
ಪರಿಹಾಸ್ಯದ ಮಾತನಾಡುತಲೊಮ್ಮೆ ಕೃಷ್ಣಾ ಎನಬಾರದೆ ।
ಪರಿ ಪರಿ ಕೆಲಸದೊಳೊಂದು ಕೆಲಸವೆಂದು ಕೃಷ್ಣಾ ಎನಬಾರದೆ ॥7॥
ದುರಿತ ರಾಶಿಗಳನು ತರಿದು ಬೀಸಾಡುವ ಕೃಷ್ಣಾ ಎನಬಾರದೆ ।
ಗರುಡ ಗಮನ ನಮ್ಮ ಪುರಂದರ ವಿಠಲನ ಕೃಷ್ಣಾ ಎನಬಾರದೆ ॥8॥

83. (ನಾಹಪು 36)

ನಾ ಏನು ಬಲ್ಲೇನ್ರಪ್ಪಾ ನಿಮ್ಮ ಕೂಸಾ ॥ ಅಂದೀಗಿಂದಿಗೆ ನಿಮ್ಮ ಧ್ಯಾಸಾ ॥ ಪ ॥
ಅಂಬಿಗೇರ ಚೌಡಯ್ಯನ ವಂಶಾ
ನಂಬಿಗಿಟ್ಟೇನಪ್ಪಾ ಒಂದೇ ಖಾಸಾ ॥ಅ.ಪ.॥
ಶಿವ ಶಿವ ಅಂಬುದಕ ಉಲ್ಲಾಸಾ
ಉಂಡ್ಹಾಂಗಾಗತದ ಮನ ಧ್ಯಾಸಾ ।
ಮಹಾದೇವನ ಮ್ಯಾಲೆ ನನ್ನ ಮನಸಾ
ನಾ ಮನನ ಮಾಡಿಕೊಂಡೆನು ದಿನಸಾ ॥1॥
ಹಮ್ಮನಳಿದು ಇರುವದು ಖಾಸಾ ।
ಉಳವಿ ಗೋಕರ್ಣಕ್ಹೋಗುದು ಏನ ಕೆಲಸಾ ॥
ಗುಣವಿಲ್ಲದೆ ಗುದ್ದ್ಯಾಡಿ ನಾಶಾ ।
ಮಹಾತ್ಮರಿಗಾಗುದು ಬಹು ಲೇಸಾ ॥2॥
ಪೊಡವಿಯೊಳಗೆ ಕಡ್ಲಿವಾಡ ವಾಸಾ ।
ನಡಿ ನುಡಿ ತಪ್ಪಿದರ ಬಹು ತ್ರಾಸಾ
ಗುರು ಮಡಿವಾಳನ ನುಡಿ ಲೇಸಾ
ಪಡಕೊಂಡವನಿಗೆ ಕೈಲಾಸಾ ॥3॥

84. (ನಾಹಪು 16)

ನಾದವ ಕೇಳುತ ನಿದ್ರೆಯ ಮಾಡುತ
ಬ್ರಹ್ಮವು ತಾನಾಗಿ ॥ ಪ ॥
ನಾದವ ಕೇಳಲು ನಾನಾ ಗುಣಗಳು
ಹೋದವು ತಾವಾಗಿ ॥ ಅ.ಪ. ॥

ಕೂಡಿತು ದೃಷ್ಟಿ ಪರಬ್ರಹ್ಮದಿ ತಾ
ಅನುದಿನದಲಿ ಬಾಗಿ ।
ಮನ ಇಂದ್ರಿಯಗಳು ಹುಡುಕಿದರಿಲ್ಲ
ಹೋದವು ತಾವಾಗಿ ॥ 1 ॥
ನಾನಾ ವರ್ಣದ ಛಾಯವ ನೋಡುತ
ನಿದ್ರೆಯ ಮಾಡಿದೆನೊ ।
ಭಾನು ಕೋಟಿ ಪ್ರಕಾಶದ ಬೆಳಕಲಿ
ನಾದವ ಕೇಳಿದೆನೊ ॥ 2 ॥
ಕಾಣದ ರೂಪವ ಕಾಣುತಲೆ ನಾ
ಕಾಮಿಸಿ ಮಲಗಿದೆನೊ ।
ಬೋಧ ಚಿದಾನಂದ ಸದ್ಗುರುನಾಥನ
ಧ್ಯಾನವ ಮಾಡಿದೆನೊ ॥ 3 ॥

85. (ನಾಹಪು 73)

ನಾನರಿತ ಮಾತು ಮರವೀ ಜನದ ಮನಕೆ
ಬಾರದು ॥ ಪ ॥ ಅರಿತ ಮಾತಿನ ಅರ್ಥ ಮಾಡಿದರೆ
ತುರ್ತ ಏನೂ ತಿಳಿಯದು । ಇದು ಬಲೆ ಮರವೀ ಜನಕಿದು ॥ ಅ.ಪ. ॥
ಅರಿತರ ಕನ್ನಡ ಬಾಲಬೋಧ ಓದುವದ್ಯಾತಕೊ ।
ಓದಿ ಹಾದಿ ತಿಳಿಯದೆ ಮನ ಬಾಧೆಗೆ ಬೀಳು
ವದು ॥ ಇದು ಬಲೆ ॥ 1 ॥ ಗಟ್ಟಿದ್ದ ಗಲಗ
ಕತ್ತಿ ಚಾಕು ಮಂಡ ಮಾಡುವದು ।
ಮಸಿಯು ಹುಸಿಯು ಬರೆದು ಬಿಳಿಯ ಕಾಗದ
ಕೆಡಿಸುವದು ॥ ಇದು ಬಲೆ ॥ 2 ॥ ಖರೆ ಸುಳ್ಳು ಎರಡೂ ಬ್ರಹ್ಮ
ಲಿಖಿತದಾಚೀಲಿದ್ದುದು । ಬ್ರಹ್ಮ ಲಿಖಿತ
ಮಡಿವಾಳ ಯೋಗಿಗೆ ಸಾಧ್ಯವಾಗಿಹುದು ॥ 3 ॥

86. (ನಾಹಪು 169)

ನಾ ಹ್ಯಾಂಗ ಬಡವ ನಾ ಹ್ಯಾಂಗ ಪರದೇಶಿ
ನೀ ಎನ್ನ ಸರಿಯವಿರಲು ॥ ಪ ॥
ನಿನಗೆ ಕ್ಷಯವಿಲ್ಲ ಎನಗೆ ಭಯವಿಲ್ಲ
ಭಪ್ಪರೆ ಎನ್ನೊಡೆಯ ನಿಜರೂಪ ನೀನು ॥ ಅ.ಪ. ॥
ಒಡಹುಟ್ಟಿದವ ನೀನು ಒಡಲಿಗೆ ಹಾಕುವೆ ನೀನು

ಹಡೆದ ತಾಯಿ ತಂದೆ ಬಳಗ ನೀನು ।
ಇಂತಪ್ಪ ದೊರೆ ನೀನು ಎನಗೆ ಇರುತಿರಲಾಗಿ
ಬೇಡಿದ್ದು ದೊರಕುವದು ಆಶ್ಚರ್ಯವೇನು ॥ 1 ॥
ಮುಂದೆ ನೋಡಲು ನೀನು ಹಿಂದೆ ನೋಡಲು ನೀನು
ಎಡ ಬಲ ಕಾಯ್ವಂಥ ಕರ್ತಾ ನೀನು ।
ಗುರುಲಿಂಗ ಜಂಗಮನ ಗುರುತು ಕಂಡವರಿಗೆ
ಗುಣವಂತರಿವರೆಲ್ಲ ಮಾಡುವರೇನು ॥ 2 ॥

87. (ನಾಹಪು 92)

ನಾಳೆ ಎಂಬವನ ಮನಿ ಹಾಳು । ನೀನು । ನಾಳೆ ತನಕಿರುವದು ನಿಜವೇನು ॥ ಪ ॥ ಕ್ಷಣ ಭಂಗುರವು ಎನ್ನಿಸಿದ । ನಿನ್ನ ತನುವು ಆಚಂದ್ರಾರ್ಕವಾಗಿ ನಿಲ್ಲುವದೇ । ದಿನದಿ ರೋಗವು ಸಾಯುತ್ತೀಯೆ । ಇದನು । ಮನದೊಳಗರಿತು ಶೀಘ್ರದಿ ಮುಕ್ತನಾಗದೆ ॥ 1 ॥ ಹಾಳು ವಾದ ಮಾಡಬಲ್ಲೆ। ನಿನ್ನ ಮೂಲ ತತ್ತ್ವಕಿವಿಯ ಲೊಲ್ಲೆ। ಖೂಳ ಕುಹಕ ವಿದ್ಯೆ ಬಲ್ಲೆ। ಎಷ್ಟು ಹೇಳಲೂ ಆಶೆ ಮೋಹವ ಬಿಡಲೊಲ್ಲೆ ॥ 2 ॥ ಕೊಡಬೇಕಾದರೆ ನಾಳೆ ಎಂಬೆ । ಕಟ್ಟಿ ಇಡಬೇಕಾದರೆ ಎನ್ನದೀಗಲೆಯೆಂಬೆ । ಮಡದಿ ಮಕ್ಕಳಿಗಿರಲೆಂಬೆ । ನಾಳೆ । ಜಡೆಯುವ ಯಮ ಭಟರುಗಳಿಗೇನೆಂಬೆ ॥ 3 ॥ ಬರುವ ಕಾಲದಿ ಬರಿಗೈಯಿ । ನೀನು ಹೊರಡುವ ಕಾಲಕೆ ಬರಿಗೈಯಿ । ಪರರನ್ನು ಜರಿಯುವ ಬಾಯಿ । ಇಹವು ಪರ ಕಾಣದಾಡುವ ತಲೆ ಹುಳಿತ ನಾಯಿ ॥ 4 ॥ ವಿರತಿ ಸದ್ಭಕ್ತಿಯ ತಾಳು । ಕೆಟ್ಟ ದುರಿತದಿ ಕುದಿಯುವದ್ಯಾತರ ಬಾಳು । ಸ್ಥಿರಮುಕ್ತಿ ಕಾಂತೆಯನಾಳು । ನಮ್ಮ । ಗುರುಮಹಲಿಂಗನ ವಚನವ ಕೇಳು ॥ 5 ॥

88. (ನಾಹಪು 29)

ನಿಜ ಗುಹ್ಯದ ಮಾತು
ಸಾಧುರಿಗಲ್ಲದೆ ತಿಳಿಯದು ॥ ಪ ॥
ಕಣ್ಣಲೆ ಕಂಡು ಹೇಳದ ಮಾತು
ಪುಣ್ಯವಂತರಿಗೆ ಹೊಳೆದೀತು ।
ಇನ್ನೊಬ್ಬರಿಗೇನು ತಿಳಿದೀತು ।

ಚಿನ್ಮಯ ವಸ್ತು ॥ 1 ॥
ನೀತಿಗೆ ನಿಜವಾಗಿಹ ಮುಕುಟ
ಮಾತಿಗೆ ಮುಟ್ಟದವನೆ ನಿಕಟ ।
ಮತಿಹೀನರಿಗೆ ಒಗಟ
ಯತಿ ಜನರಿಗೆ ಪ್ರಕಟ ॥ 2 ॥
ಸೋಹಂ ಸ್ವನದ ಮಾತನು ಕೇಳಿಕೋ
ಗುಹ್ಯ ಗುರುತು ಹೇಳುವ ಬಳಿಕೊ
ಮಹಿಪತಿ ನಿನ್ನೊಳು ನೀ ತಿಳಕೊ
ಸಿದ್ಧವಿದೆ ಬಲು ಬೆಳಕೊ ॥ 3 ॥

89. (ನಾಹಪು 114)

ನಿತ್ಯದಿ ನಿರುಪಾಧಿ ನಿಜಗುರು ಧ್ಯಾನವ
ಮಾಡೆಲಗ ಒಳೆ ಪಾಡೆಲಗ ॥ ಪ ॥ ಸತ್ಯವಾದ ಶ್ರೀ
ಗುರುವಿನ ಪಾದದ ಗೊತ್ತು ಮಾಡಿಕೊಂಡು ಕೂಡೆಲಗ
ತಿಳಿದು ನೋಡೆಲಗ ॥ ಅ.ಪ. ॥
ನಾನಾ ಜನ್ಮ ತಿರುಗಿ ಮಾನವ ಜನ್ಮಕ ಬಂದಿ
ಖೂನ ತಿಳಿಯದೆ ಹೋದೆಲಗ ಭವಬಾಧೆಗೆ ।
ಶ್ವಾನ ಸೂಕರನಾಗಿ ಹೀನ ಯೋನಿಯೊಳು ಬಂದೆಲಗ ಕುಂದಿ
ಕುಂದಿದೆಲಗ ॥ 1 ॥
ತನ್ನ ಪುರುಷನ ಬಿಟ್ಟು ಅನ್ಯ ಪುರುಷನ ಬಯಸುವ-
ದೇನೆಲಗ । ಇದೇನೆಲಗ । ಕುನ್ನಿ ಮನದ ಪಾಪ
ಬೆನ್ನವ ಬಿಡದೆ । ಚನ್ನಾಗಿ ಜನ್ಮವ ತಂದೆಲಗ
ಆದಿ ಹಂದೆಲಗ ॥ 2 ॥
ವಾಮನ ಹಳ್ಳಿಯ ಗ್ರಾಮದಲ್ಲಿರುವಂಥ
ಪ್ರೇಮದಿ ಅಡವೀಶನ ಪಾಡೆಲಗ । ಶೋಧ
ಮಾಡೆಲಗ । ಖೋಡಿ ಗುಣಗಳ ಬಿಟ್ಟು । ಕೂಡಿ
ಕೊಂಡಿದ್ದರ । ಕೊಡುವನು ಮುಕ್ತಿ ಮಾರ್ಗೆಲಗ ॥ 3 ॥

90. (ನಾಹಪು 71)

ನಿಂದು ನೀ ತಿಳಿಯಲೊ ಹಟಮಾರಿ ಕೂಸ
ನಿಂದು ನೀ ತಿಳಿದರೆ ನೀನೆ ರಾಜಹಂಸ ॥ 1 ॥
ಬಾ ಬಾ ಬಾ ಎನ್ನ ಮೋಹದ ಮನಸ ॥ ಪ ॥
ಯತಿ ಮುನೀಶ್ವರರಿಗೆ ಗತಿಗೆ ಹಚ್ಚುವ ಕೂಸ ॥ ಅ.ಪ. ॥

ಚೌರ್‍ಯಾಂಸಿ ಜನ್ಮ ತಿರುಗಿ ದಣದೆಲ್ಲೊ ಮನಸ ।
ಭೋಗ ಮಾಡಿ ತ್ಯಾಗಿಯಾಗಿ ನೀಗಿ ನಿಂತ ಕೂಸ ॥ 2 ॥
ಹರ ಗುರುವಿನ ಒಲಿಸುವದು ಬರಿಯಲ್ಲೊ ಮನಸ ।
ನೀನೊಲಿದರೆ ಮೂರು ಲೋಕ ಒಲಿವವು ಕೂಸ ॥ 3 ॥
ಕರುಣ ಗುರುವಿಗೆ ಶರಣು ಹೋಗಿ ಮರಣ ನೀಗು ಕೂಸ ।
ಮೂಲ ಗುರುವಿನ ಮೇಲೆ ನೋಡಿ ಕೀಲ ತಿಳಿ ಕೂಸ ॥ 4 ॥
ಮೂಲ ಸಾಲಿ ಬೀಜಮಂತ್ರ ಓದು ಕಲಿ ಮನಸ ।
ಆದಿ ಅನಾದಿ ಆಚಿಕಿನ ಸುದ್ದಿ ಕದ್ದು ಹೇಳುವ ಕೂಸ ॥ 5 ॥
ಸಾಧನ ಮಾಡಿ ನಾದ ಬಿಂದು ಕಳೆ ತಿಳಿಯುವ ಮನಸ ।
ನೀಲ ಮನೆಯೊಳು ಮೇಲು ಮಂಟಪದಿ ಲೋಲ್ಯಾಡು ಕೂಸ ॥ 6 ॥
ಅರಿತು ಅಮೃತ ಗಟ ಗಟ ಕುಡಿಯುವ ಮನಸ ।
ಬಟ್ಟ ಬಯಲ ತೊಟ್ಟಿಲೊಳು ಮಲಗುವ ಕೂಸ ॥ 7 ॥
ಉರಿಯುಂಡ ಕರ್ಪುರದಂತೆ ಬೆಳಗುವ ಮನಸ ।
ಸಂಗ ಲಿಂಗ ಅಂಗ ಸಹಿತ ನುಂಗುವ ಕೂಸ ॥ 8 ॥

91. (ನಾಹಪು 171)

ನೀನು ನಲಿಗೇಡಿ ನಾನು ಕುಲಗೇಡಿ ಸರ್ವರೊಳಗ,
ಖೋಡಿ ನಿಂದೆ ಆಡವ ನೋಡಿ ॥ ಪ ॥
ಕೂಳ ಕಾಣದೆ ನೀನು ಕುಲಹೀನರಲಿ ಪೋಗಿ
ಚನ್ನಾದ ಅಂಬಲಿ ನೀನು ಸುರಿದಿ ಸವಿಯ ಮಾಡಿ ॥ 1 ॥
ಹೇಸಿಕಿಲ್ಲದೆ ಹೋಗಿ ವೇಸಿ ಎಂಜಲ ಉಂಡಿ
ಶ್ರೀಯಾಳ ಸುತನ ಕೊರೆಸಿ ನೀ ಕೊಂದಿ ॥ 2 ॥
ಎಷ್ಟು ಹೇಳಲಿ ನಮ್ಮ ಶ್ರೇಷ್ಠ ಮಾಡಿದ ಮಾತು ।
ಗುರುಲಿಂಗ ಜಂಗಮ ದಯಾಘನನುಸುರಿದನು ॥ 3 ॥

92. (ನಾಹಪು 172)

ನೆಲ್ಲು ಕುಟ್ಟುಣು ಬಾರಮ್ಮಾ । ಇಬ್ಬರು ಕೂಡಿ ॥ ಪ ॥
ನೆಲ್ಲು ಕುಟ್ಟುಣು ಬಾರೆ ನಿಲ್ಲದೆ ಬೆನ್ನ ಹತ್ತಿ ।
ಹನ್ನೆರಡು ಹದಿನಾರು ನಲ್ಲೆಯರು ಕೂಡಿ ಕೊಂಡು ॥ ಅ.ಪ. ॥
ತನುವೆಂಬ ಒಳ್ಳ ಮಾಡಿ । ಪ್ರಣವವೆಂಬ ।
ಒನಕೀಲೆ ಹೇರಿ ಹಾಕಿ ॥
ವಿವೇಕವೆಂಬ ಅಕ್ಕಿ ಹಸನ ಮಾಡಿ
ಹಳ್ಳ ತೆಗೆಯಮ್ಮಾ ಜ್ಞಾನ ದೃಷ್ಟಿಲೆ ನೋಡಿ ॥ 1 ॥

ವಾಸನ ತ್ರಯಗಳೆಂಬ ಒಲೆಗುಂಡು ಮಾಡಿ ।
ಪ್ರಾರಬ್ಧ ಗಡಿಗೆ ಹೇರಿ ।
ಕಾಮ ಕ್ರೋಧವೆಂಬ ಕಟ್ಟಿಗೆ ಉರಿ ಮಾಡಿ
ಪ್ರಪಂಚ ಪರಮಾರ್ಥ ಒಳ ಹೊರಗೆ ನೋಡಿ ॥ 2 ॥
ಕುದಿಯುವ ಸಮಯದಲ್ಲಿ । ಮದದ ಉಕ್ಕು ।
ಮೀರಿ ಬರುತಲದಮ್ಮಾ ।
ಸತ್ವ ಧೀರ ಎಂಬ ಹುಟ್ಟಲೆ ಹೊಡೆದು ।
ನೆಟ್ಟಗೆ ಅಡಿಗೆಯ ಧಿಟ್ಟಾಗಿ ಮಾಡಮ್ಮಾ ॥ 3 ॥
ಪರಮಾನ್ನ ಪಾಯಸವು । ಪ್ರಾರಬ್ಧಿ ।
ಪ್ರಾಪ್ತವಾದೀತು ಏಳಮ್ಮಾ ।
ಗುರು ಲಿಂಗ ಜಂಗಮ ಬೀಗರ ಕೂಡಿಕೊಂಡು
ಸ್ವಾನಂದ ಎಡಿ ಮಾಡಿ ಸವಿಯ ನೋಡಮ್ಮಾ ॥ 4 ॥

93. (ನಾಹಪು 94)

ನೋಡ ಸಖೀ ಬೆಳಗುತದ ಪರಮ ಪ್ರಕಾಶದ ಜ್ಯೋತಿ ।
ಇಡಾ ಪಿಂಗಳ ಮಧ್ಯದಿ ಗುರು ಕರುಣದ ಪ್ರಖ್ಯಾತಿ ॥ ಪ ॥
ಶತಕೋಟಿ ಜನ್ಮದ ಸುಕೃತ ಒದಗಿ ಬಂತೆನಗೆ
ಅತಿ ಹರ್ಷ ಚಿತ್ತದೊಳು ಮಥಿಸಿ ಬಂದೆ ಗುರು ಮನೆಗೆ ।
ಗತಿಯಾಗುವ ಪಥವ ಹೇಳಿ ಕೊಡುವೆ ಬಾ ನಿನಗೆ
ಮಿತಿಯಿಲ್ಲದ ಭವದೊಳು ಜನಿಸಿ ಬಂದೆ ಬಾ ಈಗ ॥
ಹಿತದಿಂದ ಆಸನವ ಮಡಿಗಿ ಹಿಮ್ಮಡ ಒತ್ತಿಸಿದ । ಒತ್ತಿಸಿದ ।
ಚೇತರಿಸಿ ಮನ ಪವನ ಎರಡು ಸರಿ ಕೂಡಿಸಿದ ಕೂಡಿಸಿದ ।
ಶತಕೋಟಿ ರವಿಕಿರಣ ಬೆಳಕ ಅಲ್ಲಿ ತೋರಿಸಿದ ತೋರಿಸಿದ ।
ಕ್ಷಿತಿಗಧಿಕ ಸಾಂಬನೊಳು ಕೂಡಿ ಬಹಳ ಸುಖಿಯಾಗು ।
ರತಿ ಶೀಲದಿ ಕೆಡ ಬೇಡ ಅತಿಶಯ ಭೋಗವ ನೀಗು ॥ 1 ॥
ನಾಸಿಕಾಗ್ರದಲ್ಲಿ ದೃಷ್ಟಿ ಚಲಿಸದೆ ನಿಲಿಸಿ ।
ಕಸವಿಸಿಯ ಹಂಬಲ ಏನು ಇಲ್ಲದ್ಹಾಂಗ ಸ್ಮರಿಸಿ ।
ಮೋಸ ಮೋಹವ ಬಿಡಿಸಿ ವಿಷಯದ ಗುಣಗಳ ಕೆಡಿಸಿ
ಈಶನ ಧ್ಯಾನದೊಳು ಚಲಿಸದೆ ಮನವನು ನಿಲಿಸಿ ।
ಏಸು ಪರಿಯಂತ ಹೇಳಲಿ ಝುನನನ ಝುಂಕಾರ ನಾದ । ಕೇಳು ನಾದ ।
ಪಸರಿಸಿತೊ ಎನಗಿನ್ನು ಶಂಖ ಕಿನ್ನರಿ ವಿನೋದ । ವಿನೋದ ।

ಸಾಸಿರ ಕಮಲದೊಳು ಮೀರಿದ ಅಮೃತ ಸ್ವಾದ ಕೇಳು ಸ್ವಾದ ।
ವಿಶ್ವಾಸದಿ ತನ್ನಿಜ ತಾನು ತಿಳಿದು ನಲಿದಾಡಿ ।
ವಸುಧೆಗೆ ಬಾರಹ್ದಾಂಗ ಮಾಡಿದ ಬ್ರಹ್ಮನ ಕೂಡಿ ॥ 2 ॥
ಪಂಚಭೂತಗಳೆಲ್ಲಿ ಪಂಚ ಕ್ಲೇಶವೇನಾಯ್ತು
ಪ್ರಪಂಚವೆಂಬುದು ಇದ್ದು ಇಲ್ಲದ್ಹಾಂಗಾಯ್ತು
ಪಂಚಮೂರ್ತಿಗಳೆನಿಸುವ ಕಲ್ಪನೆ ತಾನೆ ತಾನಾಯ್ತು
ಸಂಚರಿಸುವ ಮರ್ಕಟ ಸರಿದು ತಾನೆ ಸತ್ಹೋಯ್ತು
ಸಂಚಿತ ಪ್ರಾರಬ್ಧದ ಶ್ರುತಿಯ ವಾಕ್ಯ ಸುಳ್ಳಂತೆ । ಸುಳ್ಳಂತೆ ।
ವಾಂಛಿಸಿದ ವೇದವನ್ನು ಪಠಿಸಲು ಗತಿಯಿಲ್ಲಂತೆ ಇಲ್ಲಂತೆ ।
ಮುಂಚೆ ಹೇಳುವೆ ಕೇಳಿರಿ ಶಾಸ್ತ್ರವು ಬರಿ ಗಂಟಂತೆ । ಗಂಟಂತೆ ।
ವಾಂಛನಿ ಇಲ್ಲದುನ್ಮನಿ ಪೀಠದೊಳು ಸಂದು ।
ಪಂಚಾನನ ಧರಿಸಿದ ಪಂಚಾಕ್ಷರಿಯೊಳಗೊಂದು ॥ 3 ॥

94. (ನಾಹಪು 169)

ನೋಯಿಸಿ ನುಡಿದನ್ಯಾಕೆ । ಶ್ರೀ ಬಲಭೀಮಾ ॥ ಪ ॥
ನೋಯಿಸಿ ನುಡಿದನು ದೋಷ ಮಾಡಿದೆನೇನು
ಕ್ಲೇಶ ಹರಿಸೊ ಎನ್ನ ಭಾಷೆ ಪಾಲಿಪ ದೇವ ॥ ಅ.ಪ. ॥
ದಾಸನ ದಾಸ ನಾನು । ಕೇಶವ ಸ್ವಾಮಿ ।
ಕರುಣದಿ ಕಾಯೊ ಎನ್ನ ।
ಏನೂ ಇಲ್ಲದೆ ಯಾಕೆ ಎನ್ನ ಶಬ್ದ ಶಸ್ತ್ರದಿಂದ ಹೊಡೆದಾ
ಸೋಸಿ ನ್ಯಾಯವ ಮಾಡೋ ವಾಸುದೇವಾ ನೀನು ॥ 1 ॥
ಕಲ್ಲನು ಮರೆಗೊಂಡೆಯಾ । ಕರುಣಾಕರಾ ।
ಬ್ರೀದವ ಎಲ್ಲಿಟ್ಟಿಯಾ ।
ಅಲ್ಲಮ ಪ್ರಭು ನಿಮ್ಮ ಸನ್ನಿಧಿವಿರುವೆನು
ಕಲ್ಲು ಒಡೆದು ನರಸಿಂಹ ಕಡೆಗೆ ಬಾರೊ ॥ 2 ॥
ಧರೆಯೊಳು ಧನ್ಯವಾದ । ನಿಂಬರಗಿ ಗ್ರಾಮ ।
ವಾಸುಳ್ಳ ಭೀಮ ನೀನು ।
ಗುರುಲಿಂಗ ಜಂಗಮ ಚಿನ್ಮಯ ರೂಪನೆ
ತನು ಮನ ಧನ ನಿಮ್ಮ ಚರಣಕೊಪ್ಪಿತೊ ದೇವಾ ॥ 3 ॥

95. (ನಾಹಪು 31)

ಪಡೆವೆನೀಂದಿಗೆ ಸ್ಥಿರಮುಕ್ತಿ ಸುಖವನು । ಕೆಡುವ ಕಾಯದ
ಮೋಹವನು ಮಾಣೆ ಮನುಜ ॥ ಪ ॥ ಮಲಮೂತ್ರವಣುವಿರ್ದ
ನೆಲೆಯೊಳು ನಿಲನೆಂಬೆ । ಪಲವು ಪೇಯದ ತಾಣವೆನಿಸುವಂಗ-
ದೊಳು । ನೆಲಸಿ ವಿಷಯ ಸುಖವನು ಭೋಗಿಸುವೆನೆಂದು ।
ಸಲೆ ಮನವೆಳಸಿಹುದನು ಬಿಡೆ ಮನುಜ ॥ 1 ॥ ಜಡ ದೃಶ್ಯ ಮಿತಿ
ಪರಿಣತೆ ಭೂತಕಾರ್ಯತೆ । ಏಡಿದು ಕನಸು ನಿದ್ರೆಯೊಳಗಿಲ್ಲ-
ವಾಗಿ । ಕೊಡನೀರಿನಂತೆ ಬೇರೆನಿಸಿಹುದು ತಾನಲ್ಲವೀ ।
ಯೊಡಲೆಂಬ ಸುವಿವೇಕವನು ಮಾಡೆ ಮನುಜ ॥ 2 ॥
ಅನಿಮಿತ್ತವರಿಗಳೆನಿಪ ಕಾಮಾದಿಗಳಿಗೆ । ತನು-
ವನೇಕವನಿತ್ತೆ ಭವ ಭವಂಗಳಲಿ ।
ನಿನಗೊಂದು ದೇಹವಿದನು ಕೊಟ್ಟು ತಪವಾಂತು ।
ಘನ ಶಂಭುಲಿಂಗವಾಗಿರಲೊಲ್ಲೆ ಮನುಜ ॥ 3 ॥

96. (ನಾಹಪು 81)

ಪಂಡಿತ ಪಂಡಿತರೆಂದು ಹೇಳಿಕೊಂಬರು ಜಗದಿ
ಪಂಡಿತರಿವರೆಂಥ ಪಂಡಿತರೇ
ಪಂಡಿತರಾದವರು ಪರಬ್ರಹ್ಮ ತಾವೆಂದು
ಖಂಡಿತ ತಿಳಿಯ ಬೇಕು ಪಂಡಿತರವರೇ ॥ ಪ ॥
ವಾಸನೆ ಅಳಿಯದೆ ಕ್ಲೇಶವ ಕಳೆಯದೆ
ಪಾಶ ಬದ್ಧರೆಲ್ಲ ಪಂಡಿತರೇ
ಈಶನು ತಾನೆಂದು ತಿಳಿಯದ ಮೂರ್ಖರು
ಆಸೆ ಬಡಕರೆಲ್ಲ ಪಂಡಿತರೇ
ನಾಶವಾಗುವ ದೇಹ ಸ್ಥಿರವಾಗಿ ನಂಬಿದ
ಹೇಸಿ ಮನುಜರೆಲ್ಲ ಪಂಡಿತರೇ ॥ 1 ॥
ಅಮರ ಛಂದಸ್ಸು ನಿಘಂಟು ನಾನಾರ್ಥ
ಸಮನಿಸದೋದಲು ಪಂಡಿತರೇ
ರಮಣಿಗೆ ಮನ ಸೋತು ನಾನಾ ಭಂಗಪಡುತಲಿ
ಯಮನ ವಶವಾದವರೆಲ್ಲ ಪಂಡಿತರೇ ?
ಭೂಮಿಯಲಿ ಪರಿಪರಿ ಗ್ರಂಥವ ಬರೆದು
ಅಸಮರೆನಿಸಿದವರೆಲ್ಲ ಪಂಡಿತರೇ ॥ 2 ॥

ಕುಲ ಛಲಕೆ ಹೋರಾಡಿ ನೆಲಗತ್ತಲಾಗುವ
ಛಲಮಾರಿಗಳೆಲ್ಲ ಪಂಡಿತರೆ ?
ಹಲವು ದೇಶವ ತಿರುಗಿ ನಾನಾ ಭಾಷೆಯ ಕಲಿತು
ಬಲು ಶಾಣೆರಾದವರು ಪಂಡಿತರೇ ?
ಸುಲಭದಿ ಸೂಕ್ಷ್ಮದಿ ನಿಜವಸ್ತು ತಿಳಿಯದ
ಬಲು ಡಾಂಭಿಕರಿವರೆಲ್ಲ ಪಂಡಿತರೇ ॥ 3 ॥
ಅಕ್ಷರ ಕನ್ನಡ ಆರ್ಯ ಸಂಸ್ಕೃತ ತೆಲಗು
ಶಿಕ್ಷಕರಿವರೆಲ್ಲ ಪಂಡಿತರೆ
ಲಕ್ಷ್ಯವ ಹಿಡಿದು ನಿರ್ಲಕ್ಷ್ಯಕೆ ಬಾರದ
ಭಿಕ್ಷುಕರಿವರೆಲ್ಲ ಪಂಡಿತರೇ ?
ಸಾಕ್ಷಾತ್ ಕೂಡಲೂರೇಶನ ಹೊಂದದೆ ಇರುವ
ಮೊಕ್ಷಗೇಡಿಗಳೆಲ್ಲ ಪಂಡಿತರೇ ॥ 4 ॥

97. (ನಾಹಪು 23)

ಪತಿ ಗುರುವು ಸತಿ ಶಿಷ್ಯ ಅತಿಯೋಗದಲಿ ಕೂಡಿ
ಸುತನ ಪಡೆದರು ಒಂದು ಮಥನದಿಂದೆ
ಹಿತವಿಲ್ಲದ ಮಗನೊಬ್ಬ ಪಿತಮಾತೆಯರನಳಿದ
ಪ್ರೀತಿಯಿಂದಲಿ ಅವರು ಅಳಿದುಳಿದರಲ್ಲ ॥ ಪ ॥
ಉಳಿದ ಉಳುಮೆಯಲಿ ತಿಳಿವುದಕೆ ಸ್ಥಳವಿಲ್ಲ
ಕಳೆಯು ಚಿತ್ತದ ಬೆಳಕು ತೋರುತಿಹುದಲ್ಲ
ಥಳಥಳಿಸುವಾ ಕೋಟಿ ಸೂರ್ಯಪ್ರಭೆಯೆಲ್ಲ
ಸುಳಿವು ಸೂಕ್ಷ್ಮತೆಯೆಲ್ಲ ದೇವ ತಾ ಬಲ್ಲ ॥ 1 ॥
ತಾನು ಜೀವನು ಅಲ್ಲ ಸಾವು ಹುಟ್ಟುಗಳಿಲ್ಲ
ನಾನು ನೀನೆಂಬುವುದು ಮೊದಲೆ ಇಲ್ಲ
ಕಾವವನು ತಾನಲ್ಲ ಕೊಲ್ಲುವವನು ತಾನಲ್ಲ
ಭಾವ ಅನುಭಾವ ದೇವ ತಾ ಬಲ್ಲ ॥ 2 ॥
ಪಂಚಮುಖಿಗಳು ಇಲ್ಲ ಪಂಚ ತತ್ವಗಳಿಲ್ಲ
ಪಂಚಾಕ್ಷರಿ ಎಂಬುವುದು ಮೊದಲೆ ಇಲ್ಲ
ಪಂಚಾಚಾರಗಳಿಲ್ಲ ಪ್ರಣವ ಎಂಬುವುದಿಲ್ಲ
ನಿಂಚಿಂತ ಕೂಡಲೂರೇಶ ತಾನೆ ಬಲ್ಲ ॥ 3 ॥

98. (ನಾಹಪು 75)

ಪಾಮರ ಜನ್ಮ ಇದು ಬಲು ಖೊಟ್ಟಿ।
ಯಾಕಾಗಬಾರದು ಗುರುವಿಗೆ ಭೆಟ್ಟಿ॥ ಪ॥
ಸಾರ್ಥಕವೇನಾಯಿತು ನೀ ಹುಟ್ಟಿ ಸುಳ್ಳೆ ।
ಹೊತ್ತು ದಣಿದಿ ಗಾಳಿಯ ಮಟ್ಟಿ॥ ಅ.ಪ. ॥
ರೋಜವಿಲ್ಲದೆ ಸುಳ್ಳೆ ಖಟಪಿಟ ॥ ಈ ॥
ಗೋಜಿನೊಳಗೆ ಬಿದ್ದಿಯೊ ಉಪರಾಟ ॥
ಮೋಜಿಗೆ ಮೋಜಿದು ಪ್ರತಿಸೃಷ್ಟಿ। ನಿನ್ನ
ಸತಿಸುತರ ಹಿತಕಾಗಿ ಭ್ರಾಂತಿಗೆಟ್ಟಿ॥ 1 ॥
ಎಂಟು ಮಂದಿ ಸ್ನೇಹವ ಕಟ್ಟಿ। ಒಳ್ಳೆ
ಭಂಟನಾಗಿ ಅಹಂಕಾರ ತೊಟ್ಟಿ॥
ಆರು ಮಂದಿಯ ಕೂಡ ಅನುಗೆಟ್ಟಿ। ನಿನ್ನ
ಅರವು ಎಂಬುದು ಅಳಿದಿಟ್ಟಿ॥ 2 ॥
ಸ್ಥಿರವಿಲ್ಲದ ನೀ ಮನಿ ಕಟ್ಟಿ। ನೀ।
ತಿಳಿದು ತಿಳಿದು ಹಂಬಲ ಇಟ್ಟಿ॥
ನಂಬಿಗಿಡೊ ನೀ ಗುರುನಿಷ್ಠಿ
ಗುರು ಮಹಾಂತೇಶನ ಪಾದ ಹಿಡಿ ಘಟ್ಟಿ ॥ 3 ॥

99. (ನಾಹಪು 60)

ಪಾಲಿಸಯ್ಯ ಪಾರ್ವತೀಶ್ವರ ನೀನೆನ್ನನೊಲಿದು
ಪಾಲಿಸಯ್ಯ ಪಾರ್ವತೀಶ್ವರಾ ॥ ಪ॥
ಪಾಲಿಸಯ್ಯ ಭಜಕ ಜನದ-। ಯಾಳು ನನ್ನ ಭವಗುಣಗಳ
ಜಾಲವನ್ನು ತಪಿಸಿ ನಿನ್ನ। ಬಾಲನೆಂದು ಕರುಣವಿಟ್ಟು॥ ಅ.ಪ. ॥
ಮರೆದು ನಿನ್ನ ಧರೆಗೆ ಬಂದೆನೊ । ಸಂಸಾರವೆಂಬ
ಉರಿವ ಕಿಚ್ಚಿನೊಳಗೆ ಬೆಂದೆನೊ । ಅಜ್ಞಾನವೆಂಬ
ಹಿರಿಯ ಭೂತದಿಂದ ನೊಂದೆನೋ । ಪಂಚೇಂದ್ರಿಯಗಳ
ಉರುಳಿನೊಳಗೆ ಸಿಲುಕಿ ಮುಂದನರಿಯದಧಮನಾಗಿ ನಿನ್ನ
ಚರಣಯುಗವ ಪೂಜಿಸುವದ ಮರೆದು ನಾನು ಕೆಟ್ಟೆನಕಟಾ ॥ 1 ॥
ಕಾಮಿನಿಯರ ರೂಪು ನೋಡುತೆ । ಮಾನಸದೊಳಿಳಸಿ
ಕಾಮಶರದ ಹತಿಗೆ ಬಾಡುತೆ । ವಾಯುಗಳನುಳಿದು
ಕಾಮ ಕೇಳಿಯೊಳಗೆ ಹೂಡುತೆ । ಅತ್ಯಾಶೆಯಿಂದ
ಹೇಮ ಭೂಮಿಗಳನು ಬಯಸಿ । ಪ್ರೇಮದಪ್ಪಿ ತೊಳಲಿ ಬಳಲಿ
ಸೋಮಧರನೆ ನಿನ್ನ ಮರೆದು । ತಾಮಸದೊಳು ಮುಳುಗಿ ಹೋದೆ ॥ 2 ॥

ಪರರ ಗುಣವದೆಣಿಸಿ ಜರಿಯುತೆ । ಕಣ್ಣಲಿ ಕಂಡ
ಸರುವ ವಿಷಯಗಳಿಗೆ ಹರಿಯುತೆ । ದುರು ಮದದೆ ಸೊಕ್ಕಿ
ಗುರುವ ಹಿರಿಯರನ್ನು ಮರೆಯುತೆ । ಆಸಕ್ತಿಯಿಂದೆ
ತರುಣಿ ಸುತರು ನಿತ್ಯವೆಂದು । ಕುಡಿಯಂತೆ ತಬ್ಬಿಕೊಂಡು
ಬರಿದೆ ಕೆಡುವೆನಯ್ಯಾ ನಿಮಗೆ । ಮರುಕವಿನಿತು ಬಾರದಲ್ಲಾ ॥ 3 ॥
ಕೆಡುವ ತನುವಿದನು ನೆಚ್ಚುತೆ । ಈ ಕ್ಷಣಿಕವಾದ
ಪೊಡವಿಯಖಿಳ ಸುಖಕೆ ಮೆಚ್ಚುತೆ । ಭೌತಿಕವನಿದನು
ತೊಡರಿ ಮೋಹದೊಳಗೆ ಮುಚ್ಚುತ್ತೆ । ನಿರ್ಭಾಗ್ಯನಡಿಯೊ
ಳೆಡಹಿ ನಿಧಿಯ ಕಾಣದಂತೆ । ಮೃಡನೆ ನಿತ್ಯ ಮುಕ್ತಿ ಸುಖವ
ಕೊಡುವ ನಿನ್ನ ಮರೆದು ನಾನು ಕಡುದುರಾತ್ಮನಾದೆನಲ್ಲಾ ॥ 4 ॥
ಆರು ಭ್ರಮಗಳೆನ್ನ ತಿನುತಿವೆ । ಆವರಿಸಿಕೊಂಡು
ಮೂರು ತಾಪವೆನ್ನ ಸುಡುತಿವೆ । ಷಡು ವರ್ಗವೆನ್ನ
ಗಾರು ಮಾಡಿ ಹಿಡಿದು ಕೊಲುತಿವೆ । ಕ್ಲೇಶಂಗಳೈದು
ವೈರಿಯಂತೆ ಹೊಸಗಿ ಮಸಗಿ । ಹೋರುತಿಹವು ಭವದಿ ನೋಯ -
ಲಾರೆ ಶ್ರೀ ಗುರುಸಿದ್ಧ ರೂಪ । ಸಾರಮೋಕ್ಷ ಸುಖವನಿತ್ತು ॥ 5 ॥

100. (ನಾಹಪು 101)

ಪೇಳಲಳವೆ ಸ್ವಾನುಭವದ ಸುಖವ ಮಾನಿನಿ ।
ಭಾನು ಕೋಟಿ ಪ್ರಭೆಗೆ ಮಿಗಿಲು ಕಂಡೆ ಕಾಮಿನಿ ॥ ಪ ॥
ಮೂಲದ್ವಾರ ಮೆಟ್ಟಿ ಮೂಲ ಕೊನೆಗೆ ಏರಿತೆ
ಮೇಲು ಮಂಟಪ ಆದಿ ಮೂಲ ಮೂರ್ತಿ ಹೊಳೆದಿತೆ ।
ಲೀಲೆಯೊಳು ಭ್ರಮರ ಸ್ವನವು ನಾದ ನುಡಿದಿತೆ
ಮೋಲವಿಲ್ಲದಂಥ ಸ್ವಾನಂದವಾಯಿತೆ ॥ 1 ॥
ನಾದದೊಳು ಸೂಸು ನಾದ ಎದ್ದು ದಿಮ್ಮಿತೆ
ಬೋಧದಿಂದ ಬ್ರಹ್ಮದೊಳಗೆ ಐಕ್ಯವಾದಿತೆ ।
ಸೌಖ್ಯವುಂಡು ಸುಖಕೆ ಮೆಚ್ಚಿ ಮೈಯ ಮರೆದಿತೆ
ಆದಿ ಅನಾದಿಯಾಗಿ ತಾನೆ ನಿಂತಿತೆ ॥ 2 ॥
ಉಣದೆ ಉಡದೆ ಉದರ ತುಂಬಿ ಉಕ್ಕಲೇರಿತೆ
ಉಕ್ಕಲೇರಿ ಇಂದ್ರಿಯಗಳ ಉಲವು ಅಡಗಿತೆ
ಉಲವು ಅಡಗಿ ಸೂಸು ಗಾಳಿ ಸುಮ್ಮ ನಿಂತಿತೆ
ಒಳಗೆ ಹೊರಗೆ ಒಂದೆಯಾಗಿ ಕಲ್ಮ ಬೆಳಗಿತೆ ॥ 3 ॥

101. (ನಾಹಪು 20)

ಬರತೀಯಾ ತಮ್ಮಾ ಬರತೀಯಾ ॥ ಪ ॥ ಬರತ ಬರತ
ಬರತೀಯಾ ತಮ್ಮಾ । ಗುರುಪಾದ ಪೂಜಿಸಲಿಕ್ಕೆ ॥ ಅ.ಪ. ॥
ಭೇರಿ ಶಬ್ದ ಶಂಖ ಘಂಟೀ ಚೀರೂ ಕಾಳಿ
ಚಿತ್ರ ನಾದ । ಘೋರ ತಂತಿ ರಭಸದಿಂದ । ಪರಬ್ರಹ್ಮ
ನೋಡಲಿಕ್ಕೆ ॥ 1 ॥ ಹಸರು ಹಳದಿ ಬಿಳಿದು ಕೆಂಪು । ಕುಶಲ
ರೇಖೆ ಕಪ್ಪು ವರ್ಣ । ನಸಿಯ ಮಿಂಚು । ಅಸಮ ರೂಪ
ನೋಡಲಿಕ್ಕೆ ॥ 2 ॥ ನಾನಾ ವರ್ಣ ಜ್ಯೋತಿ ರೂಪ । ನಾನಾ ಶಬ್ದ
ನಾದ ಲುಬ್ಧ । ಸ್ವಾನುಭವದಲ್ಲಿ ಹೋಗಿ ಮಾನಸ
ಪೂಜಿ ಮಾಡಲಿಕ್ಕೆ ॥ 3 ॥ ಅಷ್ಟದಳ ಕಮಲದಲ್ಲಿ
ಅಷ್ಟಕೋಟಿ ಬೆಳಕಿನಲ್ಲಿ । ಪ್ರಾಣಲಿಂಗ ನಿಲ್ಲಿಸಿ । ಜ್ಞಾನ
ದೃಷ್ಟಿಯಿಟ್ಟು ನೋಡಲಿಕ್ಕೆ ॥4 ॥ ಚಂದ್ರ ಸೂರ್ಯರು
ಎಡಕೆ ಬಲಕೆ । ನಂದಿ ಭೃಂಗಿ ಅಜಾನಂದ ।
ಇಂಥ ಸ್ಥಳದ ಮುಕ್ತಿ ಪ್ರಮಾಣ । ಹೊಂದಿ
ಗುರುಪಾದ ಪೂಜಸಲಿಕ್ಕೆ ॥ 5 ॥

102. (ನಾಹಪು 99)

ಬಲ್ಲಿದೆಯಾ ಈಕೆಯನ್ನು ಬಲು ಅಭಿಮಾನಿಯಳು ।
ಬಲ್ಲ ಜ್ಞಾನಿಗಳೀಕಿ ಬಲು ಉಪಕಾರಳೀಕಿ ॥ ಪ ॥
ಹರಿಯ ಪೀಠದ ಮೇಲೆ ಪಾದವನೂರಿ
ತಿರುಗುತಿಹಳು ತಾ ತನ್ನ ತ್ರಿಪುರಾಂತವ ।
ಕರ ಒಂದು ಆಕೆಗೆ ನಿರಿ ತೋಳುಗಳು ಹದಿನಾರು
ಬರಿಯಲಯಿರ ಚಿತ್ರಗಾರಿಗೆ ನಾ ॥ 1 ॥
ಮುಖ ಒಂದು ಆಕೆಗೆ ನಖ ನಯನಗಳಿಲ್ಲ
ದ್ವಯ ಕರ್ಣದೊಳು ಶಸ್ತ್ರ ಪಿಡಿದಿಹಳು ।
ಸಖ ಬಂದು ಕುಳಿತರೆ ಸಣ್ಣ ರಾಗ ಮಾಳ್ಪಳು
ಸಕಲ ಸಜ್ಜನರಿಗೆ ಬಲು ಸಾಕಾರಳೀಕೆ ॥ 2 ॥
ಮನುಮಯಾ ಆಚ್ಯಾರ ಮಗಳಾಕಿ ನೋಡಾಕಿ ।
ನಡು ಮಲಕಿನ ವೈಯಾರಿ ।
ಎಡ ಬಲದೊಂದು ಶಿವಧಾರ ಹಾಕಿಹಳು ।
ಪೊಡವಿಯೊಳು ನಮ್ಮ ಒಡೆಯ ಮೌನೇಶ್ವರನ
ಮಡಿ ವಸ್ತ್ರ ನೇಯುದಕ ಮೊದಲಾದಳೀಕಿ ॥ 3 ॥

103. (ನಾಹಪು 80)

ಬಾಯಿಲೊಂದು ಆಡ್ತೀರಿ
ಮನಸಿನೊಳಗೊಂದು ಮಾಡ್ತೀರಿ ॥
ಬರೆದಿಟ್ಟದ್ದು ಓದಿ ಕೊಂಡು
ಭ್ರಾಂತಿಗೆಟ್ಟು ಹೋಗತೀರಿ ॥ ಪ ॥
ಶೀಲವಂತರಂತೀರಿ ಸುಳ್ಳೆ ಶೀಲ ಮಾಡ್ತೀರಿ
ಸಂತ್ಯಾನ ಲಿಂಗ ಕಟ್ಟಿ ಕೊಂಡು
ಸತ್ಯಾ ನಾಶಾಗಿ ಹೋಗ್ತೀರಿ ॥ 1 ॥
ಮುಸಲ್ಮಾನರಂತೀರಿ ತುರ್ತ ಸುಂತಿ ಮಾಡ್ತೀರಿ
ಉಸಲ ಬಿಟ್ಟು ಫಾತ್ಯಾ ಕೊಟ್ಟು
ಬಿಸಮಿಲ್ಲಾ ಅಂತೀರಿ ॥ 2 ॥
ಬ್ರಾಹ್ಮಣರಂತ್ಹೇಳತೀರಿ ನೀರಾಗ ಮುಳಮುಳಗಿ ಎಳ್ತೀರಿ
ಪಾಪದಿಂದ ಸುಟಗೊಂಡು
ದೀಪಾ ಬಡಕೊಂಡು ಹೋಗ್ತೀರಿ ॥ 3 ॥
ಸಾಧುರಂತ ಹೇಳ್ತೀರಿ ಸೋಹಂ ಭಜನಾ ಮಾಡ್ತೀರಿ
ಅಡ್ಡ ದುಡ್ಡಿಗ್ಗಿ ಆಶಾ ಮಾಡಿ
ದಡ್ಡರಾಗಿ ಹೋಗ್ತೀರಿ ॥ 4 ॥
ಪಟ್ಟದ ಚರಮೂರ್ತಿ ಅಂತೀರಿ ಪಾರಮಾರ್ಥ ನೆನಿತೀರಿ
ಪರ ನಾರಿ ಸ್ನೇಹ ಮಾಡಿ । ಗುಡ್ಡದ ಮಹಾಂತಗ ಹಾಕತೀರಿ ॥ 5 ॥

104. (ನಾಹಪು 64)

ಬಿಡದೆ ಭಜಿಸೊ ಮನುಜಾ ಪರಮಾತ್ಮನ ॥ ಪ ॥
ಬಿಡದೆ ಭಜಿಸು ಕಡು ದೃಢ ಹಿಡಿದನುದಿನ ॥
ಪೊಡವಿ ಪಾಲಿಪ ಜಗದೊಡೆಯನ ॥ ಅ.ಪ. ॥
ಹರಿ ಅಲ್ಲ ಹರನಲ್ಲ । ಕಮಲ ಭವ ಗರುಡ
ಗಂಧರ್ವರಲ್ಲ । ಕರುಣದಿ ನಿರ್ಮಿತ ಮರಣ
ರಹಿತನ ॥ 1 ॥ ಗಿರಿ ಅಲ್ಲ ಉರಗಲ್ಲ । ಶರಧಿ ನದಿ
ತರು ಲತೆ ಗಿಡವಲ್ಲ । ಗಿರಿ ಉರಗ ನಿರ್ಮಿತ
ಮರಣದಿಂ ಮುಕ್ತನ ॥ 2 ॥ ತಂದೆ ತಾಯಿ
ಗಳಿಲ್ಲ ಜನನವಿಲ್ಲ । ಮುಂದೆ ಮರಣವಿಲ್ಲ
ಎಂದೆಂದಿಗಿರುವ ತನ್ನಿಂದ ತಾನಾದ
ಇಂದು ಪರಬ್ರಹ್ಮ ಎನಿಸುವವನ ॥ 3 ॥

105. (ನಾಹಪು 91)

ಬಿಡೋ ಬಿಡೋ ಹಮ್ಮಾ ।
ಛೀ ನಿಂದಕ ಲೌಡೀ ತಮ್ಮಾ ॥ ಪ ॥
ಭಾಗ್ಯದ ಮದದಿಂದೆ ಸೊಕ್ಕಿ ।
ನೀ ಹೋದಿ ಮಣ್ಣ ಮುಕ್ಕಿ ॥ 1 ॥
ಸಾಧು ಸಂಗತಿ ಒಲ್ಲೀ ।... ॥ 2 ॥
ಸದ್ಗುರು ಚಿದಾನಂದನ ಕೂಡೋ ।
ಮಾಡಿಕೊಳ್ಳೊ ಮುಕ್ತಿಯಿಂದೋ ॥ 3 ॥

106. (ನಾಹಪು 22)

ಬಿಲ್ವ ಪತ್ರಿಯ ಧರಿಸ ಬೇಕಣ್ಣ ಅಣ್ಣಣ್ಣ ಕೇಳೊ ॥ ಪ ॥
ಬಿಲ್ವ ಪತ್ರಿಯ ಧರಿಸಬೇಕೊ ಮಲ್ಲಿಕಾರ್ಜುನ ಪೂಜೆಗಿನ್ನು
ಸೊಲ್ಲಿನಲ್ಲಿ ಇರುವ ಶಿವನ ಮೆಲ್ಲನಾಗಿ ನೋಡಬೇಕು ॥ ಅ.ಪ. ॥
ಮೂರು ದಳದ ಬಿಲ್ವ ಪತ್ರಿಯು ಅದನೇರಿ ನೋಡಲು
ಸಾರಿ ಶಿವನ ಬೆಳಕು ತೋರುವದು ।
ವಾರಿಜೋದ್ಭವ ತಾನು ಆಗಿ ಘೋರ ಪಾತಕ ದೂರ ಮಾಡಿ
ಭೋರನೆಂಬುವ ನಾದದಲ್ಲಿ ಧೀರನಾಗಿ ನಿಲ್ಲಬೇಕು ॥ 1 ॥
ಮತ್ತೆ ಸಾಸಿರ ದಳದ ಕಮಲವನು ।
ಅದನಹತ್ತಿ ನೋಡಲು ।
ಸುತ್ತು ಮುತ್ತಲು ಬೆಳಕು ತೋರುವದು ।
ಸತ್ತು ಚಿತ್ತು ಆನಂದನಾಗಿ । ಕರ್ತುವನ್ನು ನೆನೆಸಿಕೊಂಡು ।
ಮರ್ತ್ಯದೊಳು ಚರಿಸುವಂಥ ನಿತ್ಯ ನಿರ್ಮಲನಾಗಬೇಕು ॥ 2 ॥
ಧರೆಯ ಭೋಗವ ಬಯಸ ಬೇಡಣ್ಣಾ।
ನೀ ಮರೆಯದಂತೆ । ಗುರುವಿನಂಘ್ರಿಯ ಭಜಿಸಬೇಕಣ್ಣಾ।
ಉರಗ ಗಿರಿಯ ನಿಲಯನಾದ । ಹರನು ಪಾರ್ವತಿ
ರಮಣನೆಂದು । ಚರಣ ಸೇವೆಯನ್ನು ಮಾಡಿ
ಕರುಣವನ್ನು ಪಡೆಯ ಬೇಕು ॥ 3 ॥

107. (ನಾಹಪು 64)

ಬುಡ ಬುಡ ಅಂದರ ಬುಡ ಮ್ಯಾಲಾಗ್ಯಾವ
ನಡುವೆ ಹೋಗತೀರಣ್ಣಾ ॥ ಪ ॥

ಬಿಡು ಬಿಡು ಬಿಡು ಬಿಡು ಕಾಮ ಕ್ರೋಧಗಳ
ಹಿಡಿ ಗುರುವಿನ ಪಾದಣ್ಣಾ ॥ ಅ.ಪ. ॥
ಒಡಲೊಳು ಹುಟ್ಟಿದವರು ಗಂಡು ಮಕ್ಕಳು ಹಾರಣ್ಣಾ ।
ಹಡೆದ ತಾಯಿ ತಂದೆ ಬಿಟ್ಟು ಕಡೆಗೆ ಹೋಗತಾರಣ್ಣಾ ॥ 1 ॥
ಬಹಳ ದಿನ ಸುಟ್ಟು ಬಡತ ಸೋಸಿ ಬಲು
ಬರಳಿದ್ಯೊ ಅಣ್ಣಾ । ... ನೆಲಿ ಉಪ್ಪರಿಗೆ ಕಟ್ಟಿ
ಮಾಳಿಗೆ ಬಿಜ್ಜಾರಣ್ಣಾ ॥ 2 ॥ ಉದ್ಯೋಗ ವ್ಯಾಪಾರ
ಮಾಡೇನೆಂದರ ಒಂದು ಕತ್ತೆ ಬರದಣ್ಣಾ । ಬೆಳಗಿನ
ಜಾವಿನಲಿ ಹಕ್ಕಿ ನುಡೀತದ ಅಮೃತ ವಾಣಿ ಅಣ್ಣಾ ॥ 3 ॥
ದೀಪಾವಳಿ ಮುಂದ ಬಹು ಲಾಭ ಆಗತದ ಬೇಕಾದ ಫಲ
ಕೊಳ್ಳಣ್ಣಾ । ನಿಮ್ಮ ಒಳಗ ಲಕ್ಷವ ಹುಗಳ್ಯಾದ
ಜಲದಿ ಸಾಧ್ಯ ಮಾಡಣ್ಣಾ ॥ 4 ॥ ಹಳೆ ಅಂಗಿ ಹರಿದು
ಹೋಗ್ತದ । ಇರಲಿ ದಾನ ಕೊಡಿರಣ್ಣಾ । ದೂರ ದೇಶ
ದಿಂದ ಬಂದೇವು ನಾವು ಹರಕೀ ಕೊಡತೇವಣ್ಣಾ ।
ಬದಿಲೆ ನಿಂತಾನ ಕೂಡಲೂರೇಶನು ಇದೆ ಬ್ರಹ್ಮ
ನೋಡಣ್ಣಾ ॥ 5 ॥

108. (ನಾಹಪು 101)

ಬೆಳ್ಳನ್ನ ಬೆಳಗಾಯಿತಮ್ಮ । ಬೆಳ್ಳಿ ಚಿಕ್ಕಿ
ಮೂಡಿತಿಲ್ಲೆ ॥ ಪ ॥ ಕಾಲ ಹರಿದು ಹೋಯಿತಿಲ್ಲೇ
ಮೇಳ ಸಹಿತ ಕೂಡಿತಮ್ಮ ॥ ಅ.ಪ. ॥
ಕರಿಯ ಮೋಡದ ಮಧ್ಯದಲ್ಲಿ
ಕೆರಿಯ ಕುಡಿಯ ತುದಿಯಲ್ಲಿ
ಪೂರ್ವ ಎಂಬುವ ದಿಕ್ಕಿನಲ್ಲಿ । ತತ್ತ್ವ ಸೂರ್ಯನ
ಕಂಡೆನಮ್ಮ ॥ 1 ॥ ಆರು ಮೂರ್ತಿ ನಿಲಿಸಿದಲ್ಲಿ
ಮೂರು ಮೂರ್ತಿ ಗರ್ಭದಲ್ಲಿ । ಮೂರು ರತ್ನದ
ಗೂಡಿನಲ್ಲಿ ಮೀರಿದುನ್ಮನಿ ಕಂಡೆನಮ್ಮಾ ॥ 2 ॥
ಇಷ್ಟಲಿಂಗದ ಕೋಣೆಯಲ್ಲಿ । ಅಷ್ಟದಳದ
ಕಮಲದಲ್ಲಿ । ನಿಷ್ಠೆ ಪೌಳಿ ರಂಧ್ರದಲ್ಲಿ
ಶ್ರೇಷ್ಠ ಷಣ್ಮುಖ ತೋರಿದನಲ್ಲಿ ॥ 3 ॥

109. (ನಾಹಪು 168)

ಬ್ಯಾಸರಾಯತೋ ಜನ್ಮ । ಬ್ಯಾಸರಾಯಿತೊ ।
ಬ್ಯಾಸರಾಯಿತು ವಾಸುದೇವಾ ದಶವೇಷ ಧಾರಕನೆ
ಕೇಶವೇಶ ಭಾಷೆ ಪಾಲಿಪ ಒಡೆಯ ಕೃಷ್ಣ ಒಯ್ಯೊ ಎನ್ನ ॥ 1 ॥
ಆಶೆ ಮಾಡಿದೆ ಪ್ರಾಣ ಘಾಶಿ ತಿಳಿಯದೆ ।
ಆಶೆ ಮಾಡಿ ಪಾಶೆಯೊಳು ಘಾಸಿಯಾದೆ ಶೇಷ
ಶಯನ ವಾಸುದೇವಾ ವಾರಿಜಾ ಕಾಂತಾ
ವಾರುಣನಂತೆ ಕಾಯೊ ಎನ್ನನು ॥ 2 ॥ ಸೆಳವಿಗಾದೆನೊ
ತ್ರಿಗುಣ ಮಡುವಿಲಿಹೆನೋ । ತ್ರಿಗುಣ ಎಂಬೊ
ಶೂಲಧಾರಿ । ಸೂಕ್ಷ್ಮ ಅಂಗ ಸೋಂಕಿತಲ್ಲ ಅಂಗ
ಸಂಗ ಗುರು ಲಿಂಗ ಜಂಗಮ ಎನ್ನ ಹಿಂಗಿಸೋ ಬೇಗ ॥ 3 ॥

110. (ನಾಹಪು 69)

ಬ್ರಹ್ಮನಾಗುವದು ಸುಮ್ಮನಲ್ಲ । ಸುಳ್ಳೆ ।
ಭ್ರಾಂತಿಯೊಳಗೆ ಬಿದ್ದು ಭ್ರಮಿಸಿರೆಲ್ಲಾ ॥ ಪ ॥
ಕ್ಯಾವಿ ಹೊತ್ತರೆ ಬ್ರಹ್ಮನಲ್ಲ । ಕಂಠಿ ರುದ್ರಾಕ್ಷಿ
ಧರಿಸಿದರೆ ಬ್ರಹ್ಮ ನೀನಲ್ಲ ॥ 1 ॥
ಜಟವ ಕಾಯ್ದರೆ ಬ್ರಹ್ಮನಲ್ಲ । ಮೈಗೆ ಭಸ್ಮ
ಧರಿಸಿದರೆ ಬ್ರಹ್ಮ ನೀನಲ್ಲ ॥ 2 ॥
ದೇಶ ತಿರುಗಿದರೆ ಬ್ರಹ್ಮನಲ್ಲ ।
ಹೋಗಿ ಗುಡ್ಡದೊಳ್ಕುಳಿತರೆ ಬ್ರಹ್ಮ ನೀನಲ್ಲ ॥ 3 ॥
ಯೋಗ ಮಾಡಿದರೆ ಬ್ರಹ್ಮನಲ್ಲ ।
ಆತ್ಮಾ ಬ್ರಹ್ಮಾಂಡಕೇರಿದರೆ ಬ್ರಹ್ಮನಲ್ಲ ॥ 4 ॥
ಸದ್ಗುರು ಭೀಮನೇ ಬ್ರಹ್ಮ ।
ದಾಸ ದಶರಥ ಹೇಳಿದ ಬ್ರಹ್ಮದ ಖೂನಾ ॥ 5 ॥

111. (ನಾಹಪು 44)

ಬ್ರಹ್ಮ ಬೇರೆ ಪರಬ್ರಹ್ಮ ಬೇರೆ ಕ್ರಿಯಾ ಕರ್ಮ ಬೇರೆ ॥ ಪ ॥
ಬ್ರಹ್ಮದೊಳಗೆ ಕ್ರಿಯಾಕರ್ಮವಿಲ್ಲ
ಕರ್ಮ ಬ್ರಹ್ಮವಲ್ಲ ॥ ಅ.ಪ. ॥
ತನ್ನೊಳಗೆ ನೋಡಲು ಜಗವಿಲ್ಲಾ
ಜಗವು ಶಿವನಲ್ಲಾ ।

ಜಗವು ಶಿವನೆಂಬ ಮಾತೆಲ್ಲಾ
ಗುರುನಾಥ ಬಲ್ಲಾ ॥ 1 ॥
ಬೀಜದೊಳಗೆ ನೋಡಲು ವೃಕ್ಷವಿಲ್ಲಾ
ವೃಕ್ಷ ಬೀಜವಲ್ಲಾ ।
ಬೀಜ ವೃಕ್ಷವೆಂಬುದು ಸ್ವಾದವೆಲ್ಲ
ಮೆದ್ದಾತ ಬಲ್ಲಾ ॥ 2 ॥
ಪಾಮರ ನರರೆಲ್ಲ ಭವತಾರಕನ ಭಕ್ತರಲ್ಲ ।
ಭವತಾರಕನ ಭಕ್ತ ನರನಲ್ಲ
ಗುರುನಾಥ ಬಲ್ಲಾ ॥ 3 ॥

112. (ನಾಹಪು 50)

ಬ್ರಹ್ಮಾನಂದದ ಸುಖವೇನೊ ನಿನಗೆ ।
ಸುಮ್ಮನಿದ್ದರೆ ಹ್ಯಾಂಗಾಗುವದರುವೆ ॥ ಪ ॥
ದ್ವಾರಗಳೊಂಬತ್ತು ಮುಚ್ಚುವ ತನಕ
ಪರಮ ಪ್ರಕಾಶದ ಕದ ತೆರೆಯುವ ತನಕ ।
ಹರಿವ ತ್ರಿನದಿ ಸಂಗಮ ದಾಟುವ ತನಕ
ಎರಡು ದಾರಿಯ ಬಿಟ್ಟು ನಡು ಹೋಗುವ ತನಕ ॥ 1 ॥
ರಂಗ ಮಂಟಪ ಪೊಕ್ಕು ಸ್ಥಿರವಾಗುವ ತನಕ
ಹಿಂಗದ ರವಿ ಕೋಟಿ ಪ್ರಭೆ ಕಾಣುವ ತನಕ
ಕಂಗೊಳಿಸುವಾರ್ಭಟ ಕೇಳುವ ತನಕ
ಕಂಗಳಲ್ಲಿ ಕಣ್ಣ ಕಂಡು ಬೆರಗಾಗುವ ತನಕ ॥ 2 ॥
ಘನ ಮಹಾಲಿಂಗನ ಪೂಜಿ ಆಗುವ ತನಕ
ಅನಹತದಿಂದ ಮೈಮರೆದಿರುವ ತನಕ ।
ಮನಸಿನ ಮೈಲಿಗೆ ತೊಳೆದು ಹೋಗುವ ತನಕ
ದಿನಕರ ಬಸವನ ದಯವಾಗುವ ತನಕ ॥ 3 ॥

113. (ನಾಹಪು 19)

ಭಾಗ್ಯ ದೊರಕಿತು ಎನಗೆ ದ್ರವ್ಯ ದೊರಕಿತು ।
ಓಣಿಯೊಳಗೆ ಕಳೆದ ಮಾಣಿಕದ ಹರಳು ದೊರಕಿತು ॥ ಪ ॥
ಕಡೆದು ಹಗೆ ಹಾಕುವದಲ್ಲ
ಒಟ್ಟಿ ಕೆಸರ ಬಡಿವುದಲ್ಲ ।
ಹಿರಿದು ಹಿರಿದು ಮೇಯಿಸಿದರೆ

ಒಂದೆ ಸೂಡು ಸವೆಯದಂಥ ॥ 1 ॥
ಅಂಗಡಿಯೊಳಿಟ್ಟು ಮಾರುವದಲ್ಲ
ತಕ್ಕಡಿಯಲಿ ಹಚ್ಚಿ ತೂಗುವದಲ್ಲ ।
ನಾಲ್ಕು ಮಂದಿ ಕೈಯೊಳು ಕೊಟ್ಟರೆ
ಒಬ್ಬರಿಗೇನು ಸಿಕ್ಕುವದಲ್ಲ ॥ 2 ॥
ಪಾಲು ಪಂಕವು ಹಂಚುವದಲ್ಲ
ಕಳ್ಳ ಚೋರರು ಒಯ್ಯುವದಲ್ಲ ।
ಸ್ವಾಮಿ ಶ್ರೀ ಪುರಂದರ ವಿಠ್ಠಲನ
ನಾಮ ದೊರಕಿತು ॥ 3 ॥

114. (ನಾಹಪು 179)

ಮಗಾ ಹುಟ್ಟಿದವ್ವಾ ಎನಗೊಬ್ಬ । ಮಗಾ ಹುಟ್ಟಿದವ್ವಾ ॥ ಪ ॥
ಮಗಾ ಹುಟ್ಟಿ ಎನ್ನ ಮಾಯವನಳಿಸಿ ।
ಜಗಾ ಬಿಡಿಸಿ ಎನ್ನ ಜನ್ಮವ ಕಡಿಸಿದ ॥ ಅ.ಪ. ॥
ನವ್ವ ತಿಂಗಳವ್ವಾ । ಮೈಯಿಲ್ಲ । ನೋವ ತಿಂದೆನವ್ವಾ ।
ದೇಹಕೆ ಹತ್ತದ ಮಾಯಕ ನಿಲುಕದ ಮೋಸಗಾರನವ್ವಾ ॥ 1 ॥
ಮಗಾ ಹುಟ್ಟಿದಾಗ ಮನೆಯೆಲ್ಲ ಬೆಳಕ ಕಂಡೆನವ್ವಾ
ರಾಳ ಜ್ಯೋತಿಗಳು ಹೂವ ಬಾಣಗಳು ಬಹಳ ಕಂಡೆನವ್ವಾ ॥ 2 ॥
ಆಶೆ ಅಳಿಸಿದವ್ವಾ ಆರು ಮೂರು ಸುಡಿಸಿದವ್ವಾ ।
ಘೋರ ಬಟ್ಟು ಎನ್ನ ಪುರದ ಒಳಗೆ ಸೂರ್ಯ ಹುಟ್ಟಿದವ್ವಾ ॥ 3 ॥
ಘಟ್ಟಿ ತೊಟ್ಟಿಲವ್ವಾ ಆತಗಾಗಿ ಕಟ್ಟಿನವ್ವಾ ।
ಪಂಚ ವರ್ಣದವ್ವಾ । ಪ್ರಭುವಿನ ತೂಗು ತೊಟ್ಟಲವ್ವಾ ।
ತೊಟ್ಟಿಲದೊಳಗೆ ಧಿಟ್ಟನ ಮಲಗಿಸಿ ಮುಟ್ಟಿ ತೂಗೆನವ್ವಾ ॥ 4 ॥
ಹೆಸರ ಇಟ್ಟೆನವ್ವಾ ಕುಶಲದ ವಸ್ತು ರಂಗನವ್ವಾ ।
ಅಗಾಧ ಗುರುವಿನ ತೂಗುತ ನಾನು ಜೋಗುಳ ಹಾಡೆನವ್ವಾ ॥ 5 ॥
ಯಾರ ಪುಣ್ಯನವ್ವಾ । ನಿಂಬರಗಿ ಗುರು ತಂದೀದವ್ವಾ ।
ಚಂದಾಗಿ ಆತನ ಪಾದಕ ಹೊಂದಿ ಕಂದನ ಹಡೆದೆನವ್ವಾ ॥ 6 ॥

115. (ನಾಹಪು 111)

ಮಜ್ಜಿಗಿ ಕಡೆದೆ ನಾನು । ಸಾಧು ಸಜ್ಜನರೊಡಗೂಡಿ
ಉಂಬುವೆನೆ ।
ಒಂಬತ್ತು ಛಿದ್ರದ ಗಡಿಗೆಯಲ್ಲಿ । ಅಲ್ಲಿ । ಎಂಬತ್ತು ನಾಲ್ಕು

ಲಕ್ಷ ಮನಿ ಮನಿ ತಿರುಗಿ ।
ತುಂಬಿತ್ತು ಮನದ ಗುಂಡಿಗಿ ದೃಢ
ಕಂಬಕ್ಕೆ ಕಟ್ಟೀನ ಭಕ್ತಿ ರೇವಗಿ ॥ 1 ॥
ಗುರು ಕರದ ಸೂತ್ರವನು ಕಟ್ಟಿ । ಬುದ್ಧಿ ।
ಅರವೊಂದು ಕೈಯೊಳು ಹಿಡಿದೀನ ಘಟ್ಟಿ ।
ಕರ । ಬೆಣ್ಣಿ ನೋಡಿದೆ ಮುಟ್ಟಿ ।
ಎರಡು ಗರ್ವ ಅಹಂಕಾರೆಂಬು ಬೆಕ್ಕು ಹೊರಗಟ್ಟಿ ॥ 2 ॥
ಸ್ವಾರ್ಥದ ಮಜ್ಜಿಗಿ ಜರಿದು । ಪರ
ಮಾರ್ಥ ಅಗ್ನಿ ಎಂಬ ತುಪ್ಪವ ಸವಿದು
ವ್ಯರ್ಥ ಮನವಿದು ಜರಿದು । ಶ್ರೀ
ಪುರಂದರ ವಿಠಲಸ್ವಾಮಿ ನಿಮ್ಮ ಬಿರುದು ॥ 3 ॥

116. (ನಾಹಪು 86)

ಮಣ್ಣಿಂದು ದೇಹ ಮಣ್ಣಿಂದು ॥ ಪ ॥
ಮಣ್ಣಿಂದ ಸಕಲ ದರುಶನಗಳೆಲ್ಲ
ಮಣ್ಣಿಂದ ಸಕಲ ವಸ್ತುಗಳೆಲ್ಲ ।
ಮಣ್ಣು ಬಿಟ್ಟವರಿಗೆ ಆಧಾರವಿಲ್ಲ
ಅಣ್ಣಗಳಿರೆಲ್ಲರು ಕೇಳಿರಯ್ಯಾ ॥ 1 ॥
ಅನ್ನ ಉದಕ ಊಟವೀಯೋದು ಮಣ್ಣು
ಬಣ್ಣ ಬಂಗಾರ ಬೊಕ್ಕಸವೆಲ್ಲ ಮಣ್ಣು ।
ಉನ್ನಂತವಾದ ಪರ್ವತ ಮಣ್ಣು
ಕಣ್ಣು ಮೂರುಳ್ಳನ ಕೈಲಾಸ ಮಣ್ಣು ॥ 2 ॥
ದೇವರ ಗುಡಿ ಮಠ ಮನೆಯೆಲ್ಲ
ಆವಾಗ ಆಚುವ ಮಡಕೆಯು ಮಣ್ಣು ।
ಕೋವಿದರಸರ ಕೋಟೆಗಳೆಲ್ಲ ಮಣ್ಣು
ಪಾವನ ಗಂಗೆಯ ತಡಿಯೆಲ್ಲ ಮಣ್ಣು ॥ 3 ॥
ಭತ್ತ ಭರಣ ದಾನ್ಯ ಬೆಳೆವುದೆ ಮಣ್ಣು
ಸತ್ತವರನು ಹೂಳಿ ಸುಡುವುದೆ ಮಣ್ಣು ।
ಉತ್ತಮವಾದ ವೈಕುಂಠವೆ ಮಣ್ಣು
ಪುರಂದರ ವಿಠಲನ ಪುರವೆಲ್ಲ ಮಣ್ಣು ॥ 4 ॥

117. (ನಾಹಪು 103)

ಮದವಿಯಾದ ಗಂಡ ಮನ ಭೀತಿ ಬಿಡಿಸಿದಾ
ಇದನ್ಯಾರು ... ಹೇಳಿರವ್ವಾ। ಹೇಳೆನೆಂದರೆ
ಹೆದರಿಕೆ ಬರುತದೆ ಅಧರದೆಂಥ ಭೀತಿ
ಬಿಡಸಿದನವ್ವಾ ॥ ಪ ॥ ಮೂರು ಮೂವರಿ ಭರಣಾ
ಮೂಗಂಡ ಕಸಕೊಂಡಾ । ಆರು ಬಣ್ಣವು ತೋರಿ
ಹರವೀದನೆ । ಬ್ಯಾರೆ. ಇಪ್ಪತ್ತೊಂದು ಸಾವಿರದಾರು
ನೂರು ॥ ನಾರಿ ಹುಚ್ಚು ಎನಗೆ ಹಿಡಿಸಿದನವ್ವಾ ॥ 1 ॥
ಆರು ಚಕ್ರದ ಮೇಲೆ ಆರು ಲಿಂಗವನಿರಿಸಿ
ಬ್ಯಾರೆ ಬ್ಯಾರೆ ಹೆಸರಿಟ್ಟು ಬೋಧಿಸಿದಾ ॥
ಆರಾರು ಅರಿಯರು ಬ್ಯಾರೆನ್ನ ಕರೆದೊಯ್ದು
ಮರ ಕಿವಿಯೊಳಿಟ್ಟು ಮಂತ್ರಿಸಿದನವ್ವಾ ॥ 2 ॥
ನೀಲಗಿರಿಯ ಸುತ್ತ ನೀರ ಸಮುದ್ರವು ಉರಿವ
ರತ್ನದ ಜ್ಯೋತಿ ಬೆಳಕಿನೊಳು ಹಲವು
ಮಾತಿನ್ನೇನು ಹಸಗೆಟ್ಟೆನೇ ತಂಗಿ ॥
ಚೆಲುವಿ ನಾನೂ ಬಲಗೆಟ್ಟ ನಾ ತಂಗಿ ॥ 3 ॥
ಸುಖ ಭಾಳಾವಾದೀತೆಂದು ಎಲ್ಲಿಲ್ಲಿ ನಾ ಕಾಣೆ
ಒಳಗೆ ತನ್ನ ಜ್ಞಾನದ ಮುಸಗಿಟ್ಟನೇ
ಮುಖದ ಮೇಲಿನ ಕೈಯ ಮೈಮೇಲೆ
ಎಳೆಯುತ ಕಕುಲಾತಿ ಭಾಳೆಂದು ಬಲಗೆಟ್ಟೆನೇ ॥ 4 ॥
ಸತ್ತು ಹುಟ್ಟದ್ಹಾಂಗ
ಅತ್ತಲೆ ದೂಡಿದಾ ॥ ಮತ್ಯಾರಿ
ಗ್ಹೇಳಲಿ ಈ ಸೂರಿ । ಚಿತ್ತದೊಲ್ಲಭ
ಚೆನ್ನಹೇಂದ್ರನು... ಲಾವಾಸಾ ॥
ಎತ್ತ ನೋಡಿದರತ್ತ ಸುತ್ತಿಕೊಂಡಿರುತಾನೆ ॥ 5 ॥

118. (ನಾಹಪು 165)

ಮನಸಿನ ಮುರಗಿಯ ತಿದ್ದಿಸೋ ದೇವಾ ॥ ಪ ॥
ಪ್ರಾತ: ಕಾಲಕೆ ಎದ್ದು ಪರದ್ರವ್ಯ ಅಪಹಾರ
ಸಾಧುರ ನಿಂದೆಯನಾಡುವದು ।
ಸಾಧಿಸಿ ಯಮನವರು ಎಳೆದೊಯ್ಯುವಾಗ
ಸತ್ತೆ ಸತ್ತೆನಂತ ಮರಗುತಲ್ಯಾದ ॥ 1 ॥
ಯತಿವೇಷವ ತಾಳಿ ದೇಶ ಭ್ರಷ್ಟನಾಗಿ

ಕಾಶಿಯ ಕ್ಷೇತ್ರಕೆ ಹೊಂಟಿತು ಮನಸು
ಕಾಶಿಯ ದಾರಿಯೊಳು ವೇಶೆಗೆ ಮೆಚ್ಚಿ
ಕೇಶವ ನಿಮ್ಮನು ಮರೆಯಿತು ಮನಸು ॥ 2 ॥
ಬಲ್ಲವಗೆ ಆರ್ಜವ ಮಾಡುತಲ್ಯಾದ
ಬಡವರಿಗೆ ನೋಯಿಸಿ ನುಡಿಯುತಲ್ಯಾದ ।
ಗುರು ಲಿಂಗ ಜಂಗಮ ಚರಣವ ನಂಬದೆ
ಅಡವಿಯಲ್ಲಿ ಚರಿಸ್ಯಾಡುತಲ್ಯಾದ ॥ 3 ॥

119. (ನಾಹಪು 85)

ಮಾಯಾ ಜಾಲ ಅಳಿದವನ ಮಾತು ಕೇಳುದು ವಾಜಮಿ । ಅ -
ನ್ಯಾಯ ನಡಿಸಿದವನಿಗೆ ಮಚ್ಚಿಲೆ ಹೊಡೆಯುದು ವಾಜಮಿ
ಇಚ್ಛಾ ಮಾತನಾಡಿದ ಲುಚ್ಚಾ ವಾಜಮಿ ॥ ಪ. ॥
ಸಾಚಾ ಮಾತು ಹೇಳಿದರ ಶಿವ ಮೆಚ್ಚುದು ವಾಜಮಿ ।
ಹಮ್ಮ ದಮ್ಮ ಅಳಿದ ಮೇಲೆ ಬ್ರಹ್ಮವಾಜಮಿ । ಇಂಥ ।
ದಮ್ಮಿಲ್ದ ತಿರುಗು ಮನುಷ್ಯರುಮ್ಮ ವಾಜಮಿ ।
ದಮ್ಮ ಕಾಣಸ್ತಾನ ಕಣ್ಣಿಗೆ ಹುಮ್ಮ ವಾಜಮಿ
ಅವ ಎಮ್ಮಿ ಹೊಟ್ಟಲಿ
ಕೋಣನಾಗಿ ಹುಟ್ಟುದು ವಾಜಮಿ ॥ 1 ॥
ತಿಳಿದ ಮೇಲೆ ಅಳಿದ ಮೇಲೆ ಉಳುದು ವಾಜಮಿ
ಮತ್ತ ಕಾಮ ಕ್ರೋಧ ಅಳಿದ ಮೆಲೆ ಕೈಲಾಸ ವಾಜಮಿ ।
ಲಾವ ಲುಚ್ಚ ಮಾತನಾಡುವ ಲೇವಡ್ವಾಜಮಿ ।
ಅವಳು ಗಂಡಗ ಮಿಂಡಗ ಕೂಡೆ ಉಣ್ಣಿದ್ರೊಂದ್ವಾಜಮಿ ॥ 2 ॥
ಭಾವದಲ್ಲಿ ಭಕ್ತಿ ಇರುವದು ಇದು ಒಂದು ವಾಜಮಿ
ಮತ್ತೆ ಗುರುವಿನಲ್ಲಿ ಭಕ್ತಿ ಇರೋದ್ವಾಜಮಿ ।
ಪೊಡವಿಯೊಳಗೆ ಚಿಮಣಗೇರಿ ವಾಜಮಿ
ಗುರು ಮಹಾಂತೇಶ್ವರಗ ಮುಕ್ತಿ ಬೇಡೋದ್ವಾಜಮಿ ॥ 3 ॥

120. (ನಾಹಪು 9)

ಮುತ್ತು ಬಂದಿದೆ ಕೊಳ್ಳಿರಣ್ಣಾ। ಅದಕೆ ।
ಎಜ್ಜಿಲ್ಲೇನಿಲ್ಲ ಬೆಲೆಯಾಗದಣ್ಣ ॥ ಪ ॥
ಥಳ ಥಳ ಹೊಳೆಯುತದಣ್ಣ। ಅದು ।
ಬಲ್ಲ ಜಾಣರಿಗಿನ್ನು ಬಯಲೊಳಗಣ್ಣಾ

ಕೂದಲ ಎಳೀಕಿಂತ ಸಣ್ಣಾ । ಅದು ।
ಬಣ್ಣ ಬಣ್ಣದ ಬ್ರಹ್ಮ ಲೋಕಣ್ಣ ॥ 1 ॥
ತನುವೆಂಬ ತರಾಜು ಪಿಡಿದು । ಆದಿ-
ಶರಣರು ತೂಗ್ಯಾರು ವಾಸರ ಕಳೆದು ।
ಮನವೆಂಬ ಮಣಿದಾರ ಪಿಡಿದು । ಝೋಕ ಹೋಗದೆ
ತೂಗ್ಯಾರು ಯೋಗ ಮಾಡಿ ಅವರು ॥ 2 ॥
ಮುತ್ತಿನ ಮಹಿಮೆ ಮುಂದದ । ಇದರ ।
ಗೊತ್ತು ತಿಳಿಯದೆ ಮಂದಿ ಸತ್ತು ಹೋಗೇದ
ಸುತ್ತು ಮುತ್ತಲು ಸುಳಿವುತದ । ಗುರು ।
ಚಿದಾನಂದನ ಚಿತ್ತದೊಳಗದ ॥ 3 ॥

121. (ನಾಹಪು 98)

ಯಾಕೆ ಮರುಳಾದಳಮ್ಮಾ ಮಗಳು
ಈಕೆಗೆ ಯಾರು ಕಲಿಸಿದರಿಂಥ ಬುದ್ಧಿ
ಸಾಕೆಂದು ಸಂಸಾರ ಮನಿಯ ಗಂಡನ ಬಿಟ್ಟು
ಲೋಕಕ್ಕೆ ಹೊರತಾಗಿ ಕೆಟ್ಟಳಮ್ಮ ಈ ಮಗಳು ॥ ಪ ॥
ಆರು ಮಕ್ಕಳ ಬಿಟ್ಟಾಳೊ ಬಂಗಾರ
ಮೂರು ತೊಲಿ ಎದುರಿಟ್ಟಾಳೊ
ಬೇರೆ ಇನ್ನೂರ ಹದಿನಾರು ರೂಪಾಯಿ
ಸೂರೆ ಮಾಡಿದಳವನಿಗೆ ಮಗಳು ಈ ಮಗಳು ॥ 1 ॥
ಕಾಮ ಕ್ರೋಧವ ಕಳೆದಾಳೊ ಈ ಮಗಳು
ಗ್ರಾಮಸೀಮೆಯ ಅಳಿದಾಳೊ
ನೇಮ ನಿತ್ಯದಿ ಜಪ ತಪ ಮಾಡದೆ
ಸ್ವಾಮಿಯಂತಿಲೆ ಹೋದಾಳೋ ಈ ಮಗಳು ॥ 2 ॥
ಹೊಳೆಯ ನೀರಿಗೆ ಹೋದಾಳೋ ಅಲ್ಲ್ಯವನ
ಕಳೆಯ ಬೆಳಕನು ಕಂಡಾಳೊ
ಕೊಳಲಿನ ದನಿಗೆ ಸರ್ಪವೆದ್ದೋದಂತೆ
ಬಳಗವೆಲ್ಲ ಮರೆತ್ಹೋದಾಳೊ ಈ ಮಗಳು ॥ 3 ॥
ಪರಿ ಪರಿಯ ಬೋಧವನು ಮಗಳಿಗೆ
ಒರೆದಾರೊ ಹೇಳಿದರೊ ತಿಳಿಯದು
ಮರೆತು ನಮ್ಮೆಲ್ಲರ ಬಿಟ್ಟುಕೊಟ್ಟು ಹೋದಳು
ತಿರುಗಿ ಬಾರದ ದಾರಿಗೆ ಮಗಳು ಈ ಮಗಳು ॥ 4 ॥
ಹತ್ತೆಂಟು ಬಳಗದೊಳಗೆ ಮಗಳು

ಮತ್ತೆ ಹೌದೆನಿಸಿ ಕೊಂಡಿದ್ದಳು ತಾನು
ಚಿತ್ತ ಕೂಡಲೂರೇಶನ ಒಳಗಾಗಿ
ಇತ್ತ ಬಾರದೆ ಹೋದಳು ಮಗಳು ಆ ಮಗಳು ॥ 5 ॥

122. (ನಾಹಪು 185)

ಯಾವ ದೇಶದ ಹೂವಿದ್ದಾವ । ಇವು ನಮ್ಮ
ಯಾವ ದೇಶದ ಹೂವಿದ್ದಾವ ॥ ಪ. ॥ ಹೂವು ಎಂದರೆ
ಹೂವು ಅಲ್ಲ ಈ ದೇಶದ ಹೂವು ಅಲ್ಲ ।
ಸೂರ್ಯದ್ವರ್ಣಾ ಶುದ್ಧ ಹೂವಾ । ಸೂರಿ ಸೂರಿ
ಆಗತಾವ ॥ ಅ.ಪ. ॥ ಚಿಕ್ಕಿ ವರ್ಣದ ಹೂವ ನೋಡ
ಕೆಂಪ ವರ್ಣದ ಹೂವ ನೋಡ । ಬಿಳಿಯ ಹೂವ
ಕಳಿಯ ತುಂಬಿ । ಕಣ್ಣ ಮುಂದೆ ಸುರಿವುತಾವ ॥ 1 ॥
ಚಂದ ಚಂದ ಬೆಳಕ ನೋಡ ।
ಚಂದ್ರ ಜ್ಯೋತಿ ಹೂವ ನೋಡ । ಸುಂದರಾತ್ಮನ
ಪಾದದಲ್ಲಿ ಸೂರಿ ಸೂರಿ ಆಗತಾವ ॥ 2 ॥
ದೇವೇಂದ್ರನ ಸಭೆಯ ನೋಡ । ದೇವ ಲೋಕದ
ಹೂವ ನೋಡ ಭಾವ ಬಲಿಸಿದ ಪ್ರಾಣ-
ಗಳಿಗೆ । ಬದಿಯಲಾಗೈಶ್ವರ್ಯ ನೋಡ ॥ 3 ॥
ದೇಶದೊಳಗಧಿಕವಾದ ।
ವಾಸ ಉಮ್ಮದಿ ಗುರುದೇವಾ । ಈಶನ
ಮುಖದಲ್ಲಿ ಪುಟ್ಟಿದ ಗಿಡದ ಹೂವ ನೋಡ ॥ 4 ॥

123. (ನಾಹಪು 104)

ಯೋಗಿಯ ಮಾರ್ಗವಿದಮ್ಮಾ । ಕಣ್ಣು ।
ಮೂಗಿನ ಕೊನೆಯಲಿ ಇಟ್ಟು ನೋಡಮ್ಮಾ ॥ ಪ ॥
ಮೂರು ಬಣ್ಣದ ಮನಿಯಮ್ಮಾ । ಅದು ।
ದಾರಿಗೆ ತಿಳಿಯದು ಬಲು ಕಷ್ಟವಮ್ಮಾ ॥
ತೋರಿತು ಬಹು ಬೆಳಕಮ್ಮಾ । ಕಂಡು ।
ಸೇರಿತು ಗುರುಪಾದದೊಳಗೆ ನೋಡಮ್ಮಾ ॥ 1 ॥
ಪಂಚವರ್ಣದ ರೂಪೇಳಮ್ಮಾ । ತಾನು ।
ಚಂಚಲ ಗುಣವುಳ್ಳ ಶಿವನು ಕಾಣಮ್ಮಾ ।
ಹಿಂಚುಮುಂಚುಗಳಿಲ್ಲಮ್ಮಾ । ಮುತ್ತಿನ ।
ಗೊಂಚಲ ಫಲದೊಳು ಶಿವನ ಕಾಣಮ್ಮಾ ॥ 2 ॥

ಬಟ್ಟ ಬಯಲೊಳು ಬ್ರಹ್ಮನಮ್ಮಾ । ತಾನು ।
ಇಷ್ಟಲಿಂಗ ಪ್ರಾಣ ಭಾವ ಕಾಣಮ್ಮಾ ।
ನಿಷ್ಠೆಯಿಂದಲಿ ನೋಡಮ್ಮಾ । ತಾನು ।
ಶ್ರೇಷ್ಠ ಪರ್ವತ ಮೂರ್ತಿ ಶಿವನು ಕಾಣಮ್ಮಾ ॥ 3 ॥

124. (ನಾಹಪು 41)

ರಾಮ ಮಂತ್ರವ ಜಪಿಸೂ । ಏ ಮನುಜಾ । ರಾಮ
ಮಂತ್ರವ ಜಪಿಸೊ ॥ ಪ ॥
ಆ ಮಂತ್ರ ಈ ಮಂತ್ರ ನೆಚ್ಚಿ ನೀ ಕೆಡ ಬೇಡ
ಸೋಮಶೇಖರನೊಬ್ಬ ಭಜಿಸಿ ಬಾಳುವ ಮಂತ್ರ ॥ ಅ.ಪ. ॥
ಕುಲಹೀನನಾದರೂ ಕೂಗಿ ಜಪಿಸುವ ಮಂತ್ರ
　　ಜಲಜ ಪಾಣಿ ನಿತ್ಯ ಜಪಿಪ ಮಂತ್ರ ।
ಕಲುಷ ಪರ್ವತಕಿದು ಕುಲಿಶವಾಗಿಪ ಮಂತ್ರ
　　ಸುಲಭದಿಂದಲಿ ಮೋಕ್ಷ ಸೂರೆಗೊಂಬುವ ಮಂತ್ರ ॥ 1 ॥
ಮರುತಾತ್ಮಜ ನಿತ್ಯ ಸ್ಮರಣೆ ಮಾಡುವ ಮಂತ್ರ
　　ಸರುವ ಋಷಿಗಳಲ್ಲಿ ಸೇರಿದ ಮಂತ್ರ ।
ದುರಿತ ಕಾನನಕಿದು ದಾವಾನಲ ಮಂತ್ರ
　　ಪೊರೆದು ವಿಭೀಷಣಗೆ ಪಟ್ಟ ಕಟ್ಟಿದ ಮಂತ್ರ ॥ 2 ॥
ಜ್ಞಾನ ನಿಧಿ ನಮ್ಮ ಆನಂದ ತೀರ್ಥರು
　　ಸಾನುರಾಗದಿ ನಿತ್ಯ ಸೇವಿಪ ಮಂತ್ರ ।
ಭಾನು ಕುಲಾಂಬುಧಿ ಸೋಮನೆನಿಪ ನಮ್ಮ
　　ದೀನ ರಕ್ಷಕ ಪುರಂದರ ವಿಠಲನ ಮಂತ್ರ ॥ 3 ॥

125. (ನಾಹಪು 10)

ವಸ್ತು ಕಂಡೆನೊ ಒಂದು ।
ಕರ್ತೃ ಸದ್ಗುರುವಿನ ದಯದಿಂದ ॥ ಪ ॥
ತೇಜಃಪುಂಜದ ರೂಪ । ಮೂಜಗದೊಳಗಿದು ಅಪರೂಪ
ನಿಜ ನಿರ್ವಿಕಲ್ಪ ।
ಸಜ್ಜನ ಹೃದಯದಿ ಚಿದ್ಘನ ದೀಪ ॥ 1 ॥
ರೂಪಕೆ ನೆಲೆಯಿಲ್ಲ ।
ವ್ಯಾಪಕವಾಯಿತು ಮೂಜಗವೆಲ್ಲ ।
ಗುಪ್ತ ಜ್ಞಾನಿಯೆ ಬಲ್ಲ ।

ಜಪ ತಪಗಳಿಗಿದು ನಿಲುಕುವದಲ್ಲ ॥ 2 ॥
ಬಯಲಿಗೆ ನಿರ್ಬಯಲ
ಭಾವಿಕ ಬಲ್ಲ ಇದರ ಹೊಯಿಲ ॥
ಮಹಿಪತಿಗನುಕೂಲ । ಜೀವನ್ಮುಕ್ತಿಗಿದೆ ಮೂಲ ॥ 3 ॥

126. (ನಾಹಪು 167)

ವಿಧಿಯು ಕಾಡುವ ಸಮಯ ವಿಪರೀತವೋ ॥ ಪ ॥
ನರರ ಪಾಡೇನು ಸುರರ ಕಾಡಿತು ವಿಧಿಯು ॥ ಅ.ಪ. ॥
ಚಂದ್ರನಿಗೆ ಕ್ಷಯರೋಗ ಹಚ್ಚಿಸಿತು ಆ ವಿಧಿಯು ।
ಇಂದ್ರನಿಗೆ ವಿಪರೀತ ಭಗಗೆಡವಿತೋ ।
ಮಂದರುದ್ಧರನ ಮರೆಯಿಂದ ಕಾಡುವದು ।
ಮಾರನ ಬೂದಿ ಮಾಡಿಸಿತು ಹರ ನೇತ್ರದಿಂದ ॥ 1 ॥
ಜನಕಜಾ ವಲ್ಲಭಗೆ ಅರಣ್ಯ ಸೇರಿಸಿತು ।
ರಾವಣನ ಸೌಭಾಗ್ಯ ಸರ್ವಳದಿತೊ ।
ನಾರದಗೆ ನಗೆಗೇಡು ಮಾಡಿಸಿತು ಆ ವಿಧಿಯು
ಬ್ರಹ್ಮನಿಗೆ ಭ್ರಮೆಗೊಳಿಸಿ ತಲೆ ಹೊಡೆಸಿತೋ ॥ 2 ॥
ಶಂಕರನ ಸ್ತೋತ್ರಕ್ಕೆ ಬಂದು ಒದಗಿತು ವಿಧಿಯು
ಶಕ್ತಿ ಸ್ತೋತ್ರ ಬಲಿದು ವಿಧಿ ಗೆದ್ದನೊ
ಗುರುಲಿಂಗ ಜಂಗಮನ ಚರಣ ಒಡಗೂಡು ಸಮಯ
ಛೀ ಕಳತೆ ಕಡೆಗಾಗೊ ಕಲಿ ಕಷ್ಟ ನೀನು ॥ 3 ॥

127. (ನಾಹಪು 76)

ಶಿವನ ಕಾಣದೆ ಸುಳ್ಳೆ ಮಾತಿನ ಗೋಷ್ಠಿ ಯಾಕೆಲೊ
ಬರೆ ಡಂಭಕ ಭಕ್ತಿ ಮಾಡಿದರೇನು ಹೇಳೆಲೊ ॥ ಪ ॥
ಹಸನ ಆಗಿ ಮೈಯ ತೊಳೆದು ಹಗರಣ ಯಾತಕೊ
ಸುಚಿತ ಮಡಿಯ ಉಟ್ಟುಕೊಂಡು ಸೊಗಸು ಯಾಕೆಲೊ ॥
ಭಸಿತ ಫಣೆಗೆ ಧರಿಸಿಕೊಂಡು ಬಣ್ಣಾ ಯಾಕೆಲೊ
ಬರೆ ಮುಸುಕು ಹಾಕಿ ಕಣ್ಣು ಮುಚ್ಚಿದರೇನು ಹೇಳೆಲೊ ॥ 1 ॥
ಮೋಕ್ಷದ ಚಿಂತಿ ನಿಮಗೆ ಇಲ್ಲದೆ ರುದ್ರಾಕ್ಷಿ
ಯಾಕೆಲೊ । ವೃಕ್ಷದ ಹಾಗೆ ಜಡಿಯ ಬಿಟ್ಟರೇನು
ಹೇಳೆಲೊ ॥ ಕುಕ್ಷಿಯೊಳಗಿನ ಅವಗುಣಗಳ ತೆಗೆಯ
ಬೇಕೆಲೊ । ಬಕ । ಪಕ್ಷಿಯ ಹಾಂಗ ಧ್ಯಾನ ಮಾಡಿದರೇನು

ಹೇಳೆಲೊ ॥ 2 ॥ ವೇದ ಶಾಸ್ತ್ರ ಓದಿದರೇನು ಹೇಳೆಲೊ
ವಾದ ತರ್ಕ ಮಾಡಿ ನೀನು ದಣದು ಕೊಂಡೆಲೊ ॥
ಬ್ರಹ್ಮ ನಾದ ಕಳೆಯು ನಿನಗೆ ತಿಳಿಯಲಿಲ್ಲವೊ ।
ಈ ಮೇದಿನಿಯೊಳಗೆ ಬಂದಂದವನು ಯಾರು
ಹೇಳೆಲೊ ॥ 3 ॥ ಮೂರು ಮೂರುತಿ ಮೂಲ ನೋಡಿದ
ರೇನು ಹೇಳೆಲೊ । ವಾರ ತಿಥಿ ನಕ್ಷತ್ರ ನೋಡಿದ
ರೇನು ಹೇಳೆಲೊ । ತಾರಕ ಬ್ರಹ್ಮ ಕಾಲ
ಪೂರ್ಣ ತಿಳಿಯ ಬೇಕೆಲೊ ॥ ಈ ಧರಣ ಮೇಲೆ
ನಿಂತುಕೊಂಡು ... ರೇನು ಹೇಳೆಲೊ ॥ 4 ॥
ಆಶೆ ವಾಸನೆ ಎಂಬೆರಡು ಅಳಿಯ ಬೇಕೆಲೊ
ಸೂಸಗೂಡದದ್ದಾಂಗ ಇಂದ್ರಿಯ ಬಲಿಸ ಬೇಕೆಲೊ
ವಾಸರಾಗದ್ದಾಂಗ ಅಲ್ಲಿ ನಿಲಿಸ ಬೇಕೆಲೊ ।
ಈಶ್ವರ ಗುರು ಮೋಹನರಾಯನ ಕೂಡ ಬೇಕೆಲೊ ॥ 5 ॥

128. (ನಾಹಪು 78)

ಶಿವ ನಾಮವ ಸ್ಮರಿಸೋ । ಈ
ಭವ ಮಾಲೆಯ ಪರಿಹರಿಸೊ ।
ಜೀವ ಶಿವ ಬೆರಿಸೊ । ಆತ್ಮನ
ಭೇದವ ಪರಿಹರಿಸೊ ॥ ಪ ॥
ಮೂರು ದಿನದ ಸಂತಿ । ಆತ್ಮನ
ನೋಡದೆ ನೀ ಕುಂತಿ
ಖೋಡಿ ಮರಗಿ ಭ್ರಾಂತಿ
ನಾಡೊಳು ಕುಣಸ್ಯಾಳೊ ಈ ಕಾಂತಿ ॥
ಬೇಡ ಪರರ ಚಿಂತಿ । ನಾಳೆ
ಯಮ ಕೇಳದರೇನಂತಿ ॥ 1 ॥
ಕುಲ ಛಲಕ್ಹೋರಾಡಿ । ತಾ ಪ್ರ-
ಜ್ವಲಿಸುವ ಮುಖ ಮಾಡಿ
ಹಲಬರ ಹಳದಾಡಿ । ಪುಣ್ಯದ
ಫಲಹೋಯಿತು ಬಾಡಿ
ಕಲಕಿನೊಳಗೆ ಕೂಡಿ ನಡೆ-
ದೆಲ್ಲಿ ನೆಲಮನಿಗೆಲೆ ಖೋಡಿ ॥ 2 ॥
ಆಯುಷ್ಯ ಹತ್ತತ್ತು । ರಾತ್ರಿಗೆ
ಹೋಯಿತು ಐವತ್ತು

ಪ್ರಾಯಕೆ ಇಪ್ಪತ್ತು ಕಾಯಜ
ಘಾಯಿಗೆ ಮೂವತ್ತು
ವಾಯುಗಿಲ್ಲೊ ಹೊತ್ತು । ನೀ ತಿ-
ಳಿಯೊ ವೇಳ್ಯಕೆ ಗೊತ್ತು ॥ 3 ॥
ಅರ್ಥ ಪ್ರಾಣಭಿಮಾನ ಆವರವ-
ರರ್ತು ನೀಡೊ ಬೋನ
ಕರ್ತು ಶ್ರೀ ಗುರುಧ್ಯಾನ । ಅಮೃತ
ತುರ್ತು ಮಾಡೊ ಪಾನ
ಬೆರ್ತುಕೊಳೊ ಮಹಾಜ್ಞಾನ । ಅದ್ರೊಳ-
ಗಿರ್ತದೊಂದೇ ಖೂನ ॥ 4 ॥
ಆಶಿಯ ಮಾಡಬೇಡ । ಭಾಳ ನಿ-
ರಾಶೆಯ ನಿಜ ನೋಡ
ದ್ವೇಷವ ತೊಡ ಬೇಡ । ಒಬ್ಬರ
ದೂಷಿಸಿ ನುಡಿ ಬೇಡ
ಘಾಸಿಲಿ ಬಡಿಬೇಡ । ಶ್ರೀಗುರು
ಮಹಾಂತೇಶನ ಮರಿಬೇಡ ॥ 5 ॥

129. (ನಾಹಪು 183)

ಶಿವ ಶಿವ ದಯವಾಗೋ ಗುರುರಾಯಾ ಈಶಾ ನೀ
ದೈವಾಗೊ ॥ ಶಿವ ಶಿವ ದೈವಾಗೋ
ಹರ ಹರ ದೈವಾಗೊ ನಿಟಲದಿ ನೋಡುವಿ
ನಿರ್ಗುಣ ಬಾ ಎನ್ನ ॥ ಪ ॥ ದೇಹ ಮಾಯಾ ನಾನು
ಶ್ರೀ ಗುರುರಾಯಾ ವಿದ್ಯಾ ಪರಮ ನೀನು ।
ಸದ್ರೂಪ ಚಿದ್ರೂಪ ತದ್ರೂಪ ತನ್ನ ರೂಪ
ಸಿದ್ಧ ರೂಪ ನೀನು ಸದ್ಗುರು ಬಾ ಎನ್ನ ॥ 1 ॥
ಪಠಿಸಿ ನೋಡುವೆ ನಾನು ಶ್ರೀ ಗುರುರಾಯಾ
ಪರಮಹಂಸ ನೀನು ಜಗದ ಒಳಗೆ ನಾನು
ಜಗಭರಿತ ನೀನು ಅಗಣಿತವಿಲ್ಲದ
ಆಶೆಯ ಕೋರುವೆ ಬಾ ಬಾ ॥ 2 ॥
ಕಾಮಿತ ಫಲ ನಾನು ಶ್ರೀ ಗುರುರಾಯಾ ।
ನಿಷ್ಕಾಮನಿರೆ ನೀನು । ಭಕ್ತಿ ಮಾಡುದು
ನಾನು ಮುಕ್ತಿ ಕೊಡುವ ನೀನು । ನಿತ್ಯ
ನೇಮಕ ನಮ್ಮ ಚಿತ್ತಜಹರ ಬಾ ಬಾ ॥ 3 ॥

ಕರವ ಮುಗಿದು ನಾನು । ಶ್ರೀ ಗುರುರಾಯಾ ।
ಬೇಡಿದ ವರವ ನೀನು ಕರದ ಮುದ್ದಾಡೆನ್ನ
ಕಣ್ಣ ತೆರೆಯೊ ನಿನ್ನ ಒಪ್ಪಿದೆ ನಾ ನಿಮ್ಮ
ಸತ್ಯ ರೂಪ ಬಾ ಬಾ ॥ 4 ॥ ಪಾದ ಸೇವಕ
ನಾನು । ಗುರುರಾಯಾ । ಪಾವನ ಮಾಡೋ ನೀನು ।
ನಾ ಯಾರೋ ನೀ ಯಾರೋ ನಿನ್ನ ತಿಳಿದವ-
ರಾರೋ ನಿಷ್ಠೆವಂತರ ನಿಜ ಭಾವಕ ದೈವಾದಿ ॥ 5 ॥
ದೇಹ ಭಾವ ಜೀವ । ಒಳಗ ನೋಡಿರಿ
ಇದ್ದಾನಾತ್ಮಾರಾಮಾ । ಗುರಿಯಿಟ್ಟು ತಿಳಿದವ
ಮಾಡ್ಯಾನಿದರನುಭವ । ಉಮ್ಮದಿ
ಸಾಧು ಶಿವಾ ಸರ್ವರಿಗೆ ಒಲಿದವಾ ॥ 6 ॥

130. (ನಾಹಪು 17)

ಶಿವ ಶಿವ ಶಿವ ಶಿವ ತಂದೆ । ಭವಭವ ಕಳೆದು
ನೋಡಿ ಬಂದೆ । ಶಿವ ಜೀವ ಜೀವ ಶಿವ ಶಿವ
ಅದ ತಿಳಿದಾಂವಾ ಅವಾ ಇವಾ ಇವಾ ಅವಾ
ಎಲ್ಲಾ ಒಂದೇ ॥ ಪ ॥ ಅಷ್ಟ ದಿಕ್ಕು ನವ ಖಂಡ ಪ್ರಥಿವೆಲ್ಲಾ
ಕಷ್ಟ ಬಟ್ಟು ಬಟ್ಟು ತಿರುಗಿದೆನಲ್ಲಾ । ಘಟ ಆಕಾಶ
ದೊಳು ತಿಳಿಯಲ್ಲ ॥ ನಿಷ್ಠೆಯಿಟ್ಟು ನೋಡೋ....
ಳಗೆಲ್ಲಾ ॥ ಕೆಟ್ಟವರ ಎಂಟು ಸುಟ್ಟು ಬಿಟ್ಟು
..... ಕಟ್ಟಿ ಹುಟ್ಟು । ಭೇಟಿ ಕೊಟ್ಟು ದೃಷ್ಟಿ ತೋರಿ
..... ಷ್ಟಂತ ಹೇಳಲಿ ಹ್ಯಾಂಗ ॥ 1 ॥
ಆರು ಮೂರು ಬಾ.... ಟ್ಟಿ ಕೊಂಡೆನಪ್ಪ । ದಾರಿ ಏರಿ ಇಳಿದು ತಿಳಿದು
..... ॥ ಸಾರ ಬ್ರಹ್ಮೇಂದ್ರ ಎನಗೆ ಕಾಣಿಸಿತಪ್ಪ ।
..... ಸಾರಾವಾಧಿಯಪ್ಪ ಗಿರಿ ಗಿರಿ ಗಿರಿ ತಿರಿಗಿ
..... ದೆನಪ್ಪಾ ॥ ಮಾರ ಹರ ಧೀರ ಸುವಿಚಾರ
...... ಅರಿತು ಸಬಾಹ್ಯದೊಳು ನೋಡಿದೆನಪ್ಪಾ ॥ 2 ॥
...... ಗುರು ಕಮಳಪ್ಪನ ಕಂಡೆನಪ್ಪಾ । ಗುರುತು
...... ಶಿವರಾಜಗ ಹೇಳಿದನಪ್ಪ ॥ ಪ್ರಾಣಪತಿ ಮಹಾ
..... ಆಟಾ ನೋಡಿದೆನಪ್ಪಾ ॥ ಅರಿತು ಆಸನ ಸರತ
..... ಮರ್ತ್ಯದೊಳಗ ಮಾಯಾಗಾರಾ ಮೂರ್ತಿ
..... ಮಾಯಾಗಾರ ಹಾಹಾಹಾ ॥ 3 ॥

131. (ನಾಹಪು 2)

ಶ್ರೀ ಗಿರಿಯ ಸುಕ್ಷೇತ್ರಕಿಂದು ಹೋಗಿ ಯಾತ್ರೆಯ ಮಾಡಿ ಬಂದೆ ॥ ಪ ॥
ಶ್ರೀ ಗಿರಿಯು ಶರೀರದೊಳಗುಂಟು । ಓಂ ಶ್ರೀ ಗುರುಸಿದ್ಧಾ ।
ಯೋಗಿ ಜನರ ಮರ್ಮ ಬೇರುಂಟು ॥ ಅ.ಪ.॥
ಆರು ಬೆಟ್ಟವ ದಾಟಿ ನಡೆದು ।
ಮೂರು ಕೊಳ್ಳದ ಮೂಲಕ್ಕಿಳಿದು ॥
ಏರಿದೆನೊ ಕೈಲಾಸ ದ್ವಾರವ । ಓಂ ಶ್ರೀ ಗುರುಸಿದ್ಧಾ ।
ಸಾರಿ ಬಡಗಲ ಗುಡಿಯ ಕಂಡೆನೊ ॥ 1 ॥
ಏಳು ಸುತ್ತಿನ ಕೋಟೆಯೊಳಗೆ
ನೀಲದುಪ್ಪರಿಗೆಗಳ ನಡುವೆ
ತಾಳ ಮದ್ದಲಿ ಗಂಟೆ ಭೇರಿಗಳು । ಓಂ ಶ್ರೀ ಗುರುಸಿದ್ಧಾ ।
ವೇಳೆ ವೇಳೆಗೆ ತಾವೆ ನುಡಿಯುವವೊ ॥ 2 ॥
ಒಂಬತ್ತು ಬಾಗಿಲದರೊ -
ಳಂಬಾದ ಬೀದಿಗಳು ನಾಲ್ಕು ।
ತುಂಬಿ ಸೂಸುವ ಕೊಳಗಳೇಳುಂಟು । ಓಂ ಶ್ರೀ ಗುರುಸಿದ್ಧಾ ।
ಸ್ತಂಭವೊಂದು ಶಿಖರವೆರಡುಂಟು ॥ 3 ॥
ಪಾತಾಳ ಗಂಗೆಯೊಳು ಮಿಂದು
ಓತು ಶಿಖರೇಶ್ವರನಿಗೇರಿ
ಜ್ಯೋತಿರ್ಲಿಂಗಕೆ ದೃಷ್ಟಿಯನಿಟ್ಟಹೆನೊ । ಓಂ ಶ್ರೀ ಗುರುಸಿದ್ಧಾ ।
ಜ್ಯೋತಿರ್ಲಿಂಗವು ಕರದಿ ಕಾಣಿಸಿತೊ ॥ 4 ॥
ಬರುವ ಕೋಣಗಳೆಂಟ ಬಡಿದೆ
ಹಿರಿಯ ಹುಲಿಗಳನಾರ ತಡೆದೆ ।
ಮೊರೆವ ಸರ್ಪದ ಹೆಡೆಯ ಮೆಟ್ಟಿದೆನೊ । ಓಂ ಶ್ರೀ ಗುರುಸಿದ್ಧಾ ।
ಚರಿಪ ಕಪಿಯನು ಹಿಡಿದು ಕಟ್ಟಿದೆನೊ ॥ 5 ॥
ಸಪ್ತ ನದಿಯ ಸಂಗಮ ದಾಟಿ
ಗುಪ್ತ ಕದಳೀ ಬನದಲ್ಲಿ ಸುಳಿದು
ಲಿಪ್ತ ಗುಹೆಯೊಳಗೊಬ್ಬನೆ ಪೊಕ್ಕಿದೆನೊ । ಓಂ ಶ್ರೀ ಗುರುಸಿದ್ಧಾ ।
ಸಪ್ತ ವರ್ಣದ ಲಿಂಗವ ಕಂಡಿಹೆನೊ ॥ 6 ॥
ಇಂದ್ರ ದಿಕ್ಕಿನೊಳೆದ್ದು ಸೂರ್ಯ -
ಚಂದ್ರ ಗುಪ್ತದ ಪುರದೊಳು ಮುಳುಗಿ ।
ಚಂದ ಚಂದದ ಬೆಳಕು ತೋರುವದು । ಓಂ ಶ್ರೀ ಗುರುಸಿದ್ಧಾ ।
ನಿಂದು ನೋಡಲು ಬಯಲಿಗೆ ಬಯಲಾಯಿತೋ ॥ 7 ॥

ಗಿರಿ ಶಿಖರಕಗ್ನಿ ಮುಖದೊ -
ಳಿರುವ ಅರ್ಕೇಶ್ವರನ ಹಿಂದೆ ।
ಸುರಿಯುವಮೃತ ಪಂಚ ಧಾರೆಗಳು । ಓಂ ಶ್ರೀ ಗುರುಸಿದ್ಧಾ ।
ಅರಿತು ಸೇವಿಸೆ ಮರಣವಿಲ್ಲವೊ ॥ 8 ॥
ಇಂತು ಶ್ರೀ ಶೈಲದ ಘನವ
ಭ್ರಾಂತಿಯಳಿದು ತಿರುಗಿ ನೋಡಿ ।
ಅಂತರಂಗದ ಗುಡಿಯ ಹೊಕ್ಕೆನೊ । ಓಂ ಶ್ರೀ ಗುರುಸಿದ್ಧಾ ।
ಶಾಂತಮಲ್ಲ ತಾನೇ ತಾನಾದನೊ ॥ 9 ॥

132. (ನಾಹಪು 105)

ಶ್ರೀ ಗುರುವಿನ ಕೃಪಾರಾಗದಿ ಪಾಡುತ ಬೇಗನೆ
ಸಂತರ ಕೂಡೇನವ್ವಾ ತಾಯಿ ಬೇಗನೆ ॥ ಪ ॥
ಭೋಗ ರೋಗವನು ನೀಗಿ ಬಂದು ನಾ । ಹೋಗಿ
ಮೋಕ್ಷವ ಪಡೆದೆನವ್ವಾ । ತಾಯಿ ।
ಅನುದಿನದಲಿ ಶಿವ ಘನ ಮಂತ್ರದ
ನುಡಿ ಮನಸಿಗೆ ಜರಾ ಮರಿಯಾಗೇದವ್ವಾ । ತಾಯಿ
ಮನು ಮುನಿಗಳು ನಿಜ ಅರಿಯದ ಬ್ರಹ್ಮವ
ನೆನೆಸಿದರೆ ಎದಿ ಭುಗಿಲಂತದವ್ವಾ ॥ 1 ॥
ಭಾನು ಕೋಟಿ ನಿಜ ಬೆಳಗಿನೊಳಗೆ ನಾ ಜ್ಞಾನ
ಗಂಗೆ ನಾ ತುಂಬೇನವ್ವಾ । ತಾಯಿ । ಏನು
ಹೇಳಲಿನ್ನೇನು ಮಾಡಲಿ ಯಾರ ಮುಂದೆ ನಾ ಹೇಳ
ಲೆವ್ವಾ ॥ 2 ॥ ಸತ್ತು ಚಿತ್ತು ನಿತ್ಯಾನೆಂಬುದು ಮರ್ತ್ಯ
ದೊಳಗೆ ಇದು ಗುಪ್ತದವ್ವಾ ॥ ತಾಯಿ ಕರ್ತು ಗುರು
ವಿನ ಅರಿತು ನೋಡಿ ನಾ ಗುರ್ತು ।
ಹಿಡಿದು ನಾ ಮೈ ಮರೆತೆನವ್ವಾ ॥ 3 ॥
ಸಾಧುರ ಸನ್ನಿಧ ಹೊಂದಿ ಧನ್ಯ ಧನ್ಯ ನಾ ಆದೆನವ್ವಾ । ತಾಯಿ
ಚಿನ್ಮಯ ಗುರು ಸಿದ್ಧಲಿಂಗನ ಭಜಿಸುತ
ತನ್ಮಯದೊಳು ಶಿವನಾದೆನವ್ವಾ ॥ 4 ॥

133. (ನಾಹಪು 40)

ಶ್ರೀ ರಾಮನ್ನಾಮ ನುಡಿಯ ಬಾರದೇ ॥ ಪ ॥
ನುಡಿಯ ಬಾರದೇನು ಹಿತದಿ । ಪಡೆಯಬಾರದೇನು ಮೌನ
ಪಿಡಿದು ಧೈರ್ಯ ಪಡೆದು ಪದವ ।

ಪಡೆದ ಪರನ ಛಡಿಯನ್ನಾಮ ॥ ಅ.ಪ. ॥
ಸತ್ಯವಲ್ಲವೇ ಈ ಸಂಸಾರದ ಭೃತ್ಯನಲ್ಲವೇ ।
ಈ ಮಾಯಾ ಮಮತಾ ದು:ಖವಲ್ಲವೇ ।
ಏಕಮೇವಾದ್ವಿತೀಯ ಬ್ರಹ್ಮ ಶ್ರುತಿಯ ವಾಕ್ಯ ಸಾರುತಿರಲು
ಲೋಕದೊಳಗೈಕ್ಯವಾದ । ಶೋಕ ಬಿಟ್ಟು ಸೌಖ್ಯದಿಂದ ॥ 1 ॥
ಮೂರ್ಖರಾದರು ಈ ಜನರು ತಿಳಿಯದೆ ಶೋಕ ಪಡುವರು ।
ಈ ವಿಷದ ಗಾಳಿ ತಾಕಿ ಬೀಳುವರು ।
ಅಂತರಂಗ ಶುದ್ಧವಾಗಿ ಶಾಂತಿ ಸೀಮಿ ಸುಜನರಂತೆ
ಸಂತರಲ್ಲಿ ಪಂಥ ನಡಿಸಿ ಕಂತುಪಿತನ ಅನಂತ ನಾಮ ॥ 2 ॥
ತಾನೆ ತಾನೆಲೊ ತನ್ನಂತೆ ನೀನೆ ನೀನೆಲೊ
ನಿನ್ನೊಳಗೆ ನೋಡೊ ಜ್ಞಾನ ಸನ್ಮನದೊಳು ।
ಆನಂದದಿಂದ ಉನ್ಮನಿ ದಾಟಿ ಚಿನ್ಮಯದಿಂದ ಕೃಷ್ಣಹರಿಯ
ಜನಮನದೊಳಗೆ ಮುಳುಗಿ ನೋಡಲು
ಜನಕೆ ತೋರುವ ಮೌನವಿಟ್ಟು ॥ 3 ॥

134. (ನಾಹಪು 21)

ಶ್ರೀರಾಮನ್ನು ಕಂಡೆನೀ ಕಣ್ಣಲೆ ನಾ । ಕಂಡೆ ನೀ
ಕಣ್ಣಲೆ ಸದ್ಗುರುವಿನ ದಯದಿಂದ ।
ಮತ್ತ ಅತ್ತ ಇತ್ತ ಹೋಗಾ ... ತು ನಾ ॥ ಪ ॥
ಗುರುವಿನ ಗೊತ್ತು ಹಿಡಿದು ... ಮಾಡಿ
ಮೋಹ ಮದಗಳ ಅಳಿದು ॥ ಕಾಮ ಕ್ರೋಧಗಳೆಲ್ಲಾ
ಹೊಡೆದು ಹಾದಿಯ ಹಚ್ಚಿ ... ನಾಗಿ ಕೂತು
ನಾ ನೋಡುವೆನು ॥ 1 ॥ ... ಮಾರ್ಗವ ಹಿಡಿದು ಹೋಗುವಾಗೆ
ಭವರೂಪ ... ಪಿಡಿದು । ಹಿಂದು ಮುಂದವ
ತಾನು ಮಿಂಚುತ ಬಂ ... ಭಕ್ತ ವತ್ಸಲ
ಗೋ ವತ್ಸಲ ಪರಿಯಿವನು ॥ 2 ॥ ...
ತಾ ಚಿನ್ಮಯರೂಪಾ ಎಲ್ಲಿ ಇಲ್ಲಾ ಇದ ಇನ್ನ
... ಪರೂಪಾ ॥ ಗುರು ಪುತ್ರ
ದಾಸನು ಕೈವಾಸಾ ... ದಾನು
ಮುಕ್ತನಾಗಿ ಈ ಜಗದೊಳಗೆ ಮೆರೆವನು ॥ 3 ॥

135. (ನಾಹಪು 50)

ಸದ್ಗುರು ಎಲ್ಲಿ ಹಾನ ಎಲ್ಲಿ ಹಾನ ।
ಎಲ್ಲರೊಳಗೆ ತುಂಬಿಹಾನ ॥ ಪ ॥
ಕನಸು ಮನಸಿನಲ್ಲಿ ಹಾನ ।
ನೆನೆಸಿದರಂತರಂಗದಲ್ಲಿ ಹಾನ ॥ 1 ॥
ನಿಷ್ಠೆವಂತರಲ್ಲಿ ಹಾನ ।
ದುಷ್ಟರ ಹಿಂಸೆ ಮಾಡುವಲ್ಲಿ ಹಾನ ॥ 2 ॥
ತಂದೆ ತ್ರಿಮಲ್ಲೇಶನ । ಕಂದನ ಜ್ಞಾನದಲ್ಲಿ ಬೆರೆತಾನ ॥ 3 ॥

136. (ನಾಹಪು 26)

ಸದ್ಗುರು ರಾಯಾ ನಿನ್ನ ಪಾದಕ್ಕೆ ಎರಗುವೆನೊ ॥ ಪ ॥
ಪಾದಕ್ಕೆ ಎರಗುವೆನೋ । ಪಾವನ ಮೂರ್ತಿ
ನೀನು । ಎಷ್ಟು ಜನ್ಮದ ಕಷ್ಟ ಬಿಡಿಸಿದಿ ॥
ಶ್ರೇಷ್ಠ ಸದ್ಗುರು ರಾಯ ನೀನು ॥ ಅ.ಪ. ॥
ಕಾಮ ಕ್ರೋಧ ಷಡ್ಗುಣಗಳ ಅಳಿದಿ । ಎಲ್ಲ
ನೀ ತಿಳಿದಿ । ಲಕ್ಷ ಕೋಟಿ ಲಿಂಗವ ಮಾಡಿದಿ
ಅಂಗಕ ಧರಿಸಿದಿ ॥ 1 ॥ ಮನೆಯಾಗಿದ್ದ ಮಕ್ಕಳು
ಬಹಳ । ಏನು ಹೇಳಲಿ ಘೋಳಾ ।
ಮಾಡೂದೆಲ್ಲಾ ಹಿಂದಿಂದೆ ಖೇಳಾ । ಸದ್ಗುರು
ಮಾಡೋ... ॥ 2 ॥ ಇಷ್ಟ ಲಿಂಗದ ಪೂಜೆಯ
ಒಳಗ । ಸೇರುವನೋ ಹ್ಯಾಂಗೆ । ಸೃಷ್ಟಿಗಧಿಕ
ಸದ್ಗುರು ರಾಯಗೆ ನಾನು ಪೊಗಳುವೆ
ನಿಂಬರಗಿ ಅಪ್ಪಗೆ ॥ 3 ॥

137. (ನಾಹಪು 42)

ಸದ್ಗುರುವಿನ ಚಿಂತೆಯಲ್ಲಿರುವದು ಪುಣ್ಯ ಧನ್ಯ ಇದು ಧನ್ಯ ।
ಸತಿಯಳು ಕರ ಕರ ಮಾಡುತಿರಲಿ
ಸುತ ಹಿತರೆಲ್ಲರು ಭೋರ್ಗ್ಯಾಡುತಿರಲಿ ।
ಅತಿಹಿತರೆಲ್ಲರು ಕೋಪದಿಂದಿರಲಿ ।
ಮತಿಯುದು ಸೂಚಿಸದಿರಲು ನೋಡೆ ॥ 1 ॥
ಮನಿ ಮಂದ್ಯೆಲ್ಲ ರೋಗದಿಂದಿರಲಿ

ದಿನ ದಿನಕ ಅಶನ ಸಿಗದ್ಹಾಂಗಾಗಲಿ ।
ಕೊಟ್ಟ ಸಾಲಗಾರರು ಕೇಳುತಿರಲಿ
ಕೊಡು ಹಾಂಗ ಅನುಕೂಲ ಆಗದಿರಲಿ ॥ 2 ॥
ಮದುವೆಯ ಸಂಭ್ರಮ ಮನೆಯೊಳಗಿರಲಿ
ಮದಿಮಗಗೆ ಹಾಂಗ ಹೀಂಗಾಗುತಿರಲಿ ।
ಅಷ್ಟರೊಳಗೆ ಮನಿಗೆ ಬೆಂಕೆ ಹತ್ತಲಿ
ಚಿದಾನಂದನ ಚಿಂತಿಯೊಳು ಚಿತ್ತವಿರಲಿ ॥ 3 ॥

138. (ನಾಹಪು 162)

ಸಬ ಕಹತೇ ಈಶ್ವರ ಅಲ್ಲಾ
ಇದರ ಭೇದ ಯಾರಿಗೆ ತಿಳಿಯಲಿಲ್ಲ ॥ ಪ ॥
ನಿರಾಕಾರಸೇ ಆಕಾರ ಹೋವೈ
ವೇದ ಶಾಸ್ತ್ರಕ್ಕೆ ನಿಲಕಿಲ್ಲ
ಹಿಂದು ಮುಸಲ್ಮಾನ ಶಾಸ್ತ್ರ ಪಢತ ಹೈ
ಗುರು ಮನಿ ಕೀಲ ಸಿಗಲಿಲ್ಲ ॥ 1 ॥
ಲಾಯ ಕೇ ಗುರೂ ಕೋ ಜಬ ಢೂಂಢ ಲಾ ಕೇ
ಏನು ಬೇಡಿದ್ದು ಕೊಡಬೇಕಲ್ಲಾ
ತನ ಮನ ಧನ ಲೋಭ ಛೋಡಕರ
ಆಗ ಬೇಕೊ ಗುರುವಿನ ಚೇಲಾ ॥ 2 ॥
ಹಮ ಭೀ ಕಹತೇ ತುಮ ಭೀ ಕಹತೇ
ಮಾಡಬ್ಯಾಡರಿ ಮ್ಯಾಲಿನ ಶೀಲ ।
ಗುರು ಮಡಿವಾಳಯ್ಯ ಹೋಕರ ಬೋಲೇ
ತೊಳಿಯ ಬೇಕು ಒಳಗಿನ ಮೈಲಾ ॥ 3 ॥

139. (ನಾಹಪು 32)

ಸಾಂಬಾ ನಿನಗೇನು ಬೇಡಲಿ ನಾನು ? ಏನು
ಬೇಡಲಿ ಸುಡುಗಾಡಿನೊಳಗೆ ಇರುವೆ ಬೇಡಿ
ಕೊಂಡರೆ ಬಿಟ್ಟು ಓಡಿಹೋಗವಗಿನ್ನೇನು ಬೇಡಲಿ
ನಾನು ॥ ಪ ॥ ಭಾಷೆ ಪಾಲಿಪನೊ ನೀನು
ಸರ್ವಾಂಗೆಲ್ಲ ಭಸ್ಮ ಭೂಷಿತನೊ ನೀನು ।
ವಾರ ಅಂಗನ ಪೊದ್ದು ನಾರಿ ಎಂಜಲ ಮೆದ್ದು
ಧೀರ ಶರಣರ ಮನೆಯ ನೀರ ತರುವಗಿನ್ನೇನು

ಬೇಡಲಿ ನಾನು ॥ 1 ॥ ರುಂಡ ಮಾಲಿಪನೋ ನೀನು
ಪ್ರಮಥಗಾರಾ ದಂಡನಾಯಕನೊ ನೀನು ।
ಜೋಡ ತೊಗಲು ಪೊದ್ದು ನಾಡೆಲ್ಲಾ ತಿರುಗುಂಬಿ ।
ಬೇಡಿ ಬೇಡಿ ಭಿಕ್ಷಾ ಆಡಿ ಕೊಂಬವಗಿನ್ನೇನು
ಬೇಡಲಿ ನಾನು ॥ 2 ॥ ಯಾರಲ್ಲಿದ್ದವನೊ ನೀನು ।
ಒಬ್ಬರ ಮನಿ ಸೇರಿ ಕೊಂಬುವನೊ ನೀನು । ತೇರು
ದಳದ ವಾಸಾ । ಅಲ್ಲಮ ಪ್ರಭುವೀಶ
ಲಿಂಗೇಶ ನಿನಗೇನು ಬೇಡಲಿ ನಾನು ॥ 3 ॥

140. (ನಾಹಪು 13)

ಸಾರಿ ಚಲ್ಲಿದೆ ಮುಕುತಿ । ಗುರು ।
ತೋರಿಸದಲ್ಲದೆ ಕಾಣಿಸದಣ್ಣಾ ॥ ಪ ॥
ವೇದದ ಮೊದಲಿನ ಮೂಲವಿದು
ಮೇದಿನಿಯೊಳು ತಾ ತುಂಬಿಹುದು ।
ಹಾದಿ ಹಾದಿಗೆ ಬಿತ್ತಿಹುದು । ಇದು ।
ಸಾಧಕ ಜನರಿಗೆ ಕಾಣುವದಣ್ಣಾ ॥ 1 ॥
ಎತ್ತ ನೋಡಲು ಪರ ಬ್ರಹ್ಮವಿದು
ಸುತ್ತು ಮುತ್ತಲು ಸುಳಿಯುವದು ।
ಮತ್ತೆ ಮತ್ತೆ ಆಗಿ ಕಾಂಬುವದು । ಗುರು ।
ಪುತ್ರರಿಗಲ್ಲದೆ ಕಾಣಿಸದಣ್ಣಾ ॥ 2 ॥
ಹಿಂದೆ ನೋಡಲು ಬಂದಿಹುದು
ಮುಂದೆ ನೋಡಲು ನಿಂತಿಹುದು
ಸಂದಿ ಸಂದಿಗೆ ಜಡಿದಿಹುದು । ಆ -
ನಂದ ಗುಹೇಶ್ವರ ಲಿಂಗ ತಾನಣ್ಣಾ ॥ 3 ॥

141. (ನಾಹಪು 52)

ಸುಮ್ಮನೆ ದೊರಕುವದೇನೊ ಶ್ರೀ ರಾಮನ ದಿವ್ಯ ನಾಮವು
ಜನ್ಮ ಜನ್ಮಾಂತರದ ದುಷ್ಕರ್ಮ ಹೋದವಗಲ್ಲದೆ ॥ ಪ ॥
ಕಂತುಪಿತನ ದಿವ್ಯ ನಾಮ ಅಂತರಂಗದೊಳಗಿಟ್ಟು
ಚಿಂತೆಯೆಲ್ಲ ಬಿಟ್ಟು ನಿಶ್ಚಿಂತನಾದವಗಲ್ಲದೆ ॥ 1 ॥
ಭಕ್ತಿ ರಸದಲ್ಲಿ ತನ್ನ ಚಿತ್ತ ಪರವಶವಾಗಿ ।
ಅಚ್ಯುತನ್ನ ನಾಮವ ಬಚ್ಚಿಟ್ಟು ಕೊಂಡವಗಲ್ಲದೆ ॥ 2 ॥

ಕಣ್ಣೊಳಗೆ ಇದ್ದ ಮೂರುತಿ ತನ್ನೊಳಗೆ ತಾ ಕಂಡು ।
ಘನ್ನ ಪೂರ್ಣ ಪುರಂದರ ವಿಠಲನ ಕೊಂಡಾಡದೆ ॥ 3 ॥

142. (ನಾಹಪು 93)

ಸುಳ್ಳೆ ಸುಳ್ಳೇ ಸಂಸಾರ ಭಾರಿಗೆ । ನೀ ।
ಬಂದದ್ದು ಬಳಲುದು ಯಾರಿಗೆ ॥
ಬಂದ ದಾರಿ ನಿಲಕದ ಭಾರಿಗೆ । ನೀ ।
